ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - [illegible]

ಕನ್ನಡ ಕಥಾ ಲೇಖಕಿಯರ ಬದುಕು - ಬರಹ: ಒಂದು ಅಧ್ಯಯನ
(ದಕ್ಷಿಣ ಕನ್ನಡ ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಲಾದ ಪ್ರಬಂಧ

ಸಂಶೋಧಕರು
[illegible]

ನೋಂದಣಿ ಸಂಖ್ಯೆ
[illegible]

ಮಾರ್ಗದರ್ಶಕರು
ಡಾ. [illegible]

[illegible]

ಮಾನ್ಯತಾ ಸಂಸ್ಥೆ
ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ -೫೮೩೨೭

ಸಣ್ಣ ಕಥಾ ಲೇಖಕಿಯರ ಬದುಕು -ಬರಹ: ಒಂದು ಅಧ್ಯಯನ
(ದಕ್ಷಿಣ ಕನ್ನಡ ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಸುಚಿತ್ರಾ ಡಿ'ಸೋಜ

ನೋಂದಣಿ ಸಂಖ್ಯೆ

೧೬೧೧೦೧೩೦೦೪೬

ಮಾರ್ಗದರ್ಶಕರು,

ಡಾ। ನಾಗವೇಣಿ ಎನ್.ಮಂಚಿ

೨೦೧೭

ಮಾನ್ಯತಾ ಸಂಸ್ಥೆ

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ , ಮಂಗಳೂರು

ಧೃಡೀಕರಣ ಪತ್ರ

"ಸಣ್ಣಕಥಾಲೇಖಕಿಯರ ಬದುಕು-ಬರಹ (ದ.ಕ. ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)" ಇದು ನಾನು ಮಂಗಳೂರು ಬಲ್ಮಠದ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ.ನಾಗವೇಣಿ ಮಂಚಿ ಇವರ ಮಾರ್ಗದರ್ಶನದಲ್ಲಿ ಹಂಪಿ ಕನ್ನಡ ವಿಶ್ವಾವಿದ್ಯಾನಿಲಯದ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿದೆ. ಇದು ನನ್ನ ಮೂಲ ಮತ್ತು ಸ್ವತಂತ್ರ ರಚನೆಯಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

Suchithra D Souza

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ ,ಮಂಗಳೂರು

ಸುಚಿತ್ರಾ ಡಿಸೋಜ
(ಸಂಶೋಧಕರು)

ಪ್ರಮಾಣ ಪತ್ರ

"ಸಣ್ಣಕಥಾ ಲೇಖಕಿಯರ ಬದುಕು-ಬರಹ (ದ.ಕ. ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ ಸುಚಿತ್ರಾ ಡಿ'ಸೋಜ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ನಿಬಂಧವು ಮೂಲ ರೂಪವಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಇದನ್ನು ಸಲ್ಲಿಸಿರುವುದಿಲ್ಲ ಎಂಬುದಾಗಿ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಡಾ।ನಾಗವೇಣಿಮಂಚಿ
(ಮಾರ್ಗದರ್ಶಕರು)

ಬಂಟ್ವಾಳ ,ಮಂಗಳೂರು
೨೦೧೭

ಸಣ್ಣಕಥಾಲೇಖಕಿಯರ ಬದುಕು – ಬರಹ : ಒಂದು ಅಧ್ಯಯನ
(ದಕ್ಷಿಣ ಕನ್ನಡ ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಾಯ – ೧

ಅಧ್ಯಾಯ-೧

ಪೀಠಿಕೆ

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕತೆಯು ಒಂದಾಗಿದ್ದು ಇಂದು ಕಾದಂಬರಿ ಪ್ರಕಾರವನ್ನು ಮೀರಿ ಜನಪ್ರಿಯತೆಯನ್ನು ಪಡೆದಿದೆ. ಸಣ್ಣ ಕಥೆಯ ಮುಖ್ಯ ಗುಣ ಸಂಕ್ಷಿಪ್ತತೆ, ಇದರ ವ್ಯಾಪ್ತಿ ಚಿಕ್ಕದಾದ ಕಾರಣ ಒಂದು ಕಾದಂಬರಿ ಒಳಗೊಳ್ಳಬಹುದಾದ ಬದುಕಿನ ವಿಸ್ತಾರ ಅದರ ಸಂಕೀರ್ಣತೆಗಳು, ವಿವರಣೆ, ಸೂಕ್ಷ್ಮತೆ ಮೊದಲಾದ ಮೂಲಭೂತ ಅಂಶಗಳನ್ನು ಸಣ್ಣಕತೆಯೊಂದು ಒಳಗೊಳ್ಳಲು ಸಾಧ್ಯವಿಲ್ಲ ಹೀಗಾಗಿ ಸಣ್ಣಕತೆ ಹೊಮ್ಮಿಸುವ ದರ್ಶನ ಸೀಮಿತವಾಗಿದೆ. ಸಣ್ಣಕತೆಗಳಲ್ಲಿ ಒಂದು ಕತೆಯ ಆಕರ್ಷಕ ಆರಂಭವಾಗಲಿ, ಅನಿರೀಕ್ಷಿತ ಮುಕ್ತಾಯವಾಗಲಿ ಇಲ್ಲ, ಕನ್ನಡದ ಮೊತ್ತ ಮೊದಲಿಗೆ ಸಣ್ಣಕತೆಗಳನ್ನು ಪೋಷಿಸಿ ಬೆಳೆಸಿದ್ದು ಪತ್ರಿಕಾ ಮಾಧ್ಯಮ, ಕನ್ನಡದಲ್ಲಿ "ಮಯೂರ" ಎಂಬ ತಿಂಗಳ ಪತ್ರಿಕೆ ಅದರಲ್ಲಿ ಪ್ರಮುಖವಾಗಿದೆ.

ಆಧುನಿಕ ಸಣ್ಣಕತೆ, ಆಧುನಿಕ ಸಂವೇದನೆಯ ಫಲವಾಗಿ ರೂಪುಗೊಂಡಿದೆ, ಶಿಕ್ಷಣದಿಂದ ದೊರೆತ ಜ್ಞಾನ, ವೈಜ್ಞಾನಿಕ ಪ್ರಗತಿ ಮಹಾಯುದ್ಧಗಳ ಪರಿಣಾಮ, ಕೈಗಾರಿಕೀರಣ ಇವೆಲ್ಲಾವುಗಳಿಂದ ಹುಟ್ಟಿದ ಹೊಸ ಜೀವನ ವಿಧಾನ ಮತ್ತು ಅವುಗಳ ಹಿನ್ನಲೆಯಿಂದ ಸಣ್ಣಕತೆಗಳು ಸೃಷ್ಠಿಯಾಗಿದೆ. ಮನುಷ್ಯನ ಸಾಂಸ್ಕೃತಿಕ ಬದುಕಿನಲ್ಲಿ ಸಂಭವಿಸಿದ ತಲ್ಲಣ ಹಾಗೂ ಪಲ್ಲಟಗಳು ಅಭಿವ್ಯಕ್ತಿ ಕೇಂದ್ರಿತ ಬದಲಾವಣೆಗಳು ಅದೇ ರೀತಿ ಸಾಮಾನ್ಯರ ಬದುಕು, ನೋವು, ನಿರಾಸೆ, ಬಡತನ, ವ್ಯಕ್ತಿ- ಸಂಬಂಧಗಳು ಸಣ್ಣಕತೆಯ ವಸ್ತುವಾಗಿದ್ದವು.

ಕನ್ನಡದಲ್ಲಿ ಸಣ್ಣಕತೆ ಅತ್ಯಂತ ಹುಲುಸಾಗಿ ಬೆಳೆದಿರುವ ಸಾಹಿತ್ಯ ಪ್ರಕಾರವಾಗಿದೆ. ಕಾಲಕಾಲಕ್ಕೆ ಬದಲಾಗುತ್ತ, ಬೆಳೆಯುತ್ತ ಹೊಸ-ಹೊಸ ಅಹ್ವಾನಗಳಿಗೆ ತನ್ನನ್ನು ತಾನು ಬಡ್ಡಿಕೊಳ್ಳುತ್ತ ತನ್ನ ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿದೆ, ಅದರ ಬೆಳವಣಿಗೆಯನ್ನು ಸ್ಥೂಲವಾಗಿ ನಾಲ್ಕು ಹಂತಗಳೇ ಗುರುತಿಸಬಹುದು. ಈ ಹಂತಗಳನ್ನು ಕಾಲಕ್ರಮದಲ್ಲಿ ಒಂದು ಮುಗಿದ ನಂತರ ಇನ್ನೊಂದು ಆರಂಭವಾಯಿತೆಂಬ ಅರ್ಥದಲ್ಲಿ ಭಾವಿಸಲಿಕ್ಕಾಗುವುದಿಲ್ಲ. ಈ ಎಲ್ಲ ಹಂತಗಳಿಗೂ ಅವುಗಳದೇ ಆದ ವಿಶಿಷ್ಟ ಲಕ್ಷಣಗಳಿವೆ ಆದರೆ ಅವೆಲ್ಲಾ ಏಕಕಾಲಕ್ಕೆ ಅಸ್ತಿತ್ವದಲ್ಲಿರುವುದನ್ನೂ ಅಲ್ಲೆಗಳೆಯುವಂತಿಲ್ಲ, ನವೋದಯ ಯುಗದ ನಂತರ ಪ್ರಗತಿಶೀಲ, ನವ್ಯ, ಬಂಡಾಯ ಯುಗಗಳು ಆರಂಭವಾದರೂ, ನವೋದಯ ಮಾರ್ಗದ ಕಥೆಗಳು ಇಂದಿಗೂ ಬರುತ್ತಲೇ ಇವೆ, ಹಾಗೆಯೇ ಬಂಡಾಯದ ದಾಳಿಯನ್ನು ಎದುರಿಸಿಯೂ ನವ್ಯಕಥೆ ಮುಂದುವರಿಯುತ್ತಲೇ ಇದೆ. ಹೊಸಚಳವಳಿಗಳ ಪ್ರಭಾವದಿಂದ ಹಳೆಯ ಮಾರ್ಗಗಳಿಗೂ ಹೊಸ ತಿರುವು ದೊರೆತಿರುವ ಉದಾಹರಣೆಗಳಿವೆ. ಆದ್ದರಿಂದ ನವೋದಯ, ಪ್ರಗತಿಶೀಲ, ನವ್ಯ ಮುಂತಾದ ಶಬ್ದಗಳು ನಿರ್ದಿಷ್ಟ ಕಾಲಾವಧಿಯನ್ನು ಸೂಚಿಸುವುದಕ್ಕಿಂತ ಆಯಾಮಾರ್ಗದ ವಿಶಿಷ್ಟ ಲಕ್ಷಣಗಳನ್ನು ಸೂಚಿಸಲು ಉಪಯುಕ್ತವಾಗಿದೆ.

ಪಾಶ್ಚಾತ್ಯ ಸ್ತ್ರೀವಾದದ ಪ್ರಭಾವದಿಂದ ಮತ್ತು ದೇಶಗಳಲ್ಲಿ ನಡೆದ ಶೈಕ್ಷಣಿಕ ಕ್ರಾಂತಿ ಮಹಿಳೆಯರಲ್ಲಿ ಒಂದು ಬಗೆಯ ಸಂಚಲನವನ್ನು ಮೂಡಿಸಿತು. ಸಾಂಪ್ರದಾಯಿಕ ಸಮಾಜದಲ್ಲಿ ಕುಟುಂಬದ ಒಳಗಡೆ

ಮಾತ್ರವೇ ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದ ಮತ್ತು ಹಾಗೆಂದು ನಂಬಿದ್ದ ಮಹಿಳೆ ಸುಧಾರಣಾವಾದಿ ಮನೋಧರ್ಮದ ಪುರುಷರಿಂದ ಮನೆಯಿಂದ ಹೊರಬರುವಂತಾಯಿತು. ಶಿಕ್ಷಣದ ಉದ್ದೇಶದಿಂದ ಹೊರ ಪ್ರಪಂಚವನ್ನು ಕಂಡ ಮಹಿಳೆ ತನ್ನ ಅಸ್ತಿತ್ವಕ್ಕೆ ಹುಡುಕಾಟಕ್ಕೆ ತೊಡಗಿಕೊಳ್ಳಲು ಪ್ರೇರಣೆ ಆಯಿತು. ಶಿಕ್ಷಣದ ಮೂಲಕ ಬರಹ ಉದ್ಯೋಗ ಹೀಗೆ ಪುರುಷಪ್ರಾಧಾನ್ಯವಿದ್ದಲ್ಲಿ ಕಾಣಿಸಿಕೊಂಡ ಮಹಿಳೆ ತನಗೆದುರಾದ ಪರಿಸರದಲ್ಲಿ ಹೊಸ ಸವಾಲುಗಳನ್ನು ಹೊಸ-ಪರೀಕ್ಷೆಗಳನ್ನು ಎದುರುಗೊಳ್ಳಬೇಕಾಯಿತು. ಜ್ಞಾನ ಕ್ಷೇತ್ರಗಳನ್ನು ಪ್ರವೇಶಿಸುತ್ತಾ ಎಲ್ಲಾ ಸವಾಲುಗಳಿಗೆ ಉತ್ತರಿಸುವ ಪ್ರಯತ್ನ ಮಾಡತೊಡಗಿದಳು ಇದರ ಪರಿಣಾಮವಾಗಿ ಇಂದು ಲೇಖಕಿಯರ ವಿಸ್ತೃತವಾದ ಅನಾವರಣ ನಮ್ಮೆದುರಿಗಿದೆ.

ಮಹಿಳೆಯರ ಆರಂಭದ ಬರಹಗಳು ಸಂಪ್ರದಾಯ ಬದ್ಧವಾದ ಮನೋಧರ್ಮದಿಂದ ಸಂಪೂರ್ಣ ಬಿಡಿಸಿಕೊಳ್ಳಲಾಗದಿರುವುದಕ್ಕೆ ನಿದರ್ಶನಗಳಿವೆ. ಹಂತ-ಹಂತವಾಗಿ ತನ್ನ ಆಲೋಚನೆಗಳನ್ನು ವಿಸ್ತರಿಸಿಕೊಂಡ ಆಕೆ ತನ್ನ ಸುತ್ತ ನಡೆಯುವ ಪುರುಷ ಪ್ರಧಾನ ಸಮಾಜದ ಕ್ರಿಯೆಗಳಿಗೆ ತನ್ನ ಪ್ರತಿಕ್ರಿಯೆಗಳನ್ನು ತೋರತೊಡಗಿದಳು. ಇದು ಅನೇಕ ಬಾರಿ ಮಹಿಳೆ ಮತ್ತು ಪುರುಷರ ನಡುವಿನ ಸಂಘರ್ಷಕ್ಕೆ ಕಾರಣವಾಗಿದೆ. ಏನೇ ಆದರೂ ಹಿಂಜರಿಯದ ಅನೇಕ ಮಂದಿ ಮಹಿಳೆಯರು ಕತೆಗಳ ಮೂಲಕ ತಮ್ಮ ಭಾವಲೋಕದ ಅನಾವರಣ ಮಾಡಿದ್ದಾರೆ. ತಿರುಮಲಾರಂಬರವರು ಕನ್ನಡದ ಮಹಿಳಾ ಕತೆಗಳ ನವೋದಯದ ಮುಂಚೂಣಿಯಲ್ಲಿದ್ದಾರೆ.

ನವೋದಯ ಮಾರ್ಗದಲ್ಲಿ ಮಹಿಳೆಯರು ಸಣ್ಣಕತೆಗಳನ್ನು ಬರೆದಿದ್ದಾರೆ. ಇವರಲ್ಲಿ ಆರ್. ಕಲ್ಯಾಣಮ್ಮ (೧೮೮೪-೧೯೬೫) ಇವರ ಪ್ರಥಮ ಸಂಕಲನ "ಪ್ರಿಯಂವದಾ" ಎರಡನೇ ಮುದ್ರಣ ಕಂಡಿದೆ. ತಿರುಮಲಾಂಬಾ ಅವರ ಹಾದಿಯಲ್ಲೇ ಕಲ್ಯಾಣಮ್ಮನವರು ಕತೆಗಳನ್ನು ರಚಿಸಿದ್ದಾರೆ. ಸ್ತ್ರೀಯರ ಆದರ್ಶ, ತ್ಯಾಗ ನೀತಿ ಇವು ಇವರ ಕತೆಗಳ ವಸ್ತು ಸರಸ್ವತಿ ಬಾಯಿ ರಾಜವಾಡೆ ಅವರು "ಆಹುತಿ" ಕದಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಈ ಕತೆಯಲ್ಲಿ ನೋವು ಪ್ರಧಾನ, ಬಾಳಿನ ದುರಂತ ಚಿತ್ರಿಸಲಾಗಿದೆ. ನವೋದಯ ಮಾರ್ಗದ ನಂತರ ೨೦ನೇ ಶತಮಾನದ ಕಾಲದಲ್ಲಿ ಪ್ರಮುಖರಾದ ಲೇಖಕಿಯರು ಸಾರಾ ಅಬೂಬಕ್ಕರ್, ಸಬೀಹಾ ಭೂಮಿ ಗೌಡ, ಪದ್ಮಶೆಣೈ, ಆನಂದಿ ಸದಾಶಿವರಾವ್, ಮನೋರಮ ಎಮ್.ಭಟ್, ಚಂದ್ರಕಲಾನಂದಾವರ, ಬಿ.ಎಂ. ರೋಹಿಣಿ, ನೇಮಿಚಂದ್ರ, ಬಿ.ಎಸ್. ಸುಮಿತ್ರಾಬಾಯಿ, ವೈದೇಹಿ, ಅನುಪಮ ನಿರಂಜನ, ಎ.ಪಿ.ಮಾಲತಿ, ಇಂದಿರಾಹಾಲಾಬಿ, ಗಂಗಾಪಾದೇಕಲ್, ಕ್ಯಾಥರಿನ್ ರೊಡ್ರಿಗಸ್, ಹೀಗೆ ಹಲವಾರು ಮಂದಿ ಸಣ್ಣಕತೆಗಳಿಗೆ ಸ್ವರೂಪ ನೀಡಿದಂತಹ ದ.ಕ. ಜಿಲ್ಲೆಯ ಲೇಖಕಿಯರನ್ನು ನಾವು ಗುರುತಿಸಿಕೊಳ್ಳಲಾಗಿದೆ.

ಸಮಸ್ಯೀಕರಣ

ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿ ಲೇಖಕಿಯರ ಸಣ್ಣಕತೆಗಳು ಹುಟ್ಟಿಕೊಂಡ ಸನ್ನಿವೇಶದಲ್ಲಿ ಅವರ ಬರಹದ ರೀತಿ ಶೈಲಿಗಳು ಬದಲಾವಣೆಯಾಗಿದೆಯೇ ಎಂಬ ಪ್ರಶ್ನೆ ಏಳುತ್ತದೆ. ಅದರಲ್ಲೂ ಸುಮಾರು ವರ್ಷಗಳ ಹಿಂದೆ ಇದ್ದ ಸಾಹಿತ್ಯಶೈಲಿ ಕಾಲಕಾಲಕ್ಕೆ ಬದಲಾಗಿ ಹೊಸ ಚಹರೆಯನ್ನು ಕಂಡು ಕೊಂಡಿದ್ದಾರೆಯೇ? ಈ ಕಾಲಕ್ಕೆ ಸರಿಹೊಂದುವಂತೆ ತಾನು ಬರೆಯಬಲ್ಲನೇ ಎಂಬ ಸಂದೇಹ ಅಳುಕು ಕಾಡತೊಡಗಿತು. ಈಗಲೂ ತನ್ನ ಲೇಖನಿಯಲ್ಲಿ ಆ ಶಕ್ತಿ ಇದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತಿದೆ.

ಬರವಣಿಗೆ ಎಂಬುದು ಮಲೆಘಟ್ಟದ ನೆತ್ತಿಯೇರಿ, ನಿಡುನೋಟವನ್ನು ದಕ್ಕಿಸಿಕೊಂಡು ಸಂಭ್ರಮಿಸುವಂತಹ ಹಿತವಾದ ಆಯಾಸ, ಸೃಜನಶೀಲ ಬರವಣಿಗೆಯಂತೂ ಒಂದು ಬಗೆಯ ಸಾವಯವ ಸಾಹಿತ್ಯಕೃಷಿ. ಲೇಖಕಿಯರ ಪ್ರತಿಭೆ, ಪರಿಜ್ಞಾನ, ಲೋಕಾನುಭವ, ಸಂವೇದನೆ, ಚಿಂತನೆ, ಮಂಥನ, ಸಂಯಮ ಸಹನೆ, ಏಕಾಗ್ರತೆಗಳೆಲ್ಲದವರ ಸಮನ್ವಯದಲ್ಲಿ ಭಾಷೆಯ ಒಡಲು ಪಡೆದು ರೂಪುಗೊಳ್ಳುವ ಸ್ಪಂದನ ಜನಜೀವನದ ಮೂಲ ಆಧಾರದಲ್ಲಿ ಸಾಕರಗೊಳ್ಳುವ ಪ್ರತಿಬಿಂಬ. ಹಾಗಾಗಿ ಲೇಖಕಿಯರು ಅವರು ಬದುಕುತ್ತಿರುವ ಸಾಮಾಜಿಕ ಆವರಣಕ್ಕೂ ಗಾಢವಾದ ಸಂಬಂಧವಿದೆ. ಈ ಸಂಬಂಧದಿಂದಾಗಿ ಬರವಣಿಗೆಯ ಹಲವು ನಿರ್ಬಂಧಗಳಿಗೆ ಒಳಗಾಗುವುದುಂಟು. ಏನನ್ನು ಹೇಳಬೇಕು? ಎಷ್ಟನ್ನು ಹೇಳಬೇಕು? ಹೇಗೆ ಹೇಳಬೇಕು ? ಇತ್ಯಾದಿ ಇತಿಮಿತಿಯ ಕಾಳಜಿಯಲ್ಲೇ ಲೇಖಕಿಯರ ಸಣ್ಣಕತೆ ಬರವಣಿಗೆಯ ಕಾಯಕ ನಡೆಯುವುದುಂಟು.

ತನ್ನ ಬರವಣಿಗೆಯಲ್ಲಿ ಸಮಾಜದ ಬಹುಜನರ ಸಾಮಾಜಿಕ ಆರ್ಥಿಕ, ತಲ್ಲಣ, ನೋವು – ನಿರಾಶೆ, ಶೋಷಣೆ ಸಂಘರ್ಷಗಳನ್ನು ಸಾದರಪಡಿಸುವಾಗ ಕೆಲವೊಂದು ನಿರ್ಬಂಧಗಳನ್ನು ಅನುಭವ, ತಿಳುವಳಿಕೆಗಳ ಕೊರತೆಯಿಂದಾಗಿ ಹೇರಿಕೊಂಡದ್ದುಂಟು? ಬರೆಯಲಾಗದ ತಲ್ಲಣಗಳಿಗೆ ಶಬ್ಧದ ರೂಪವಾದರೂ ಹೇಗೆ ಕೊಡುವುದು ಎಂಬ ಗೊಂದಲವಿದೆಯೇ? ಈ ಸಮಾಜದಲ್ಲಿ ಮೇಲುವರ್ಗ, ವರ್ಗ, ಜಾತಿ, ಮತ ಎಲ್ಲಾ ನೆಲೆಯಲ್ಲಿ ಮಹಿಳೆಯರನ್ನು ಕಾಡುವ ತಲ್ಲಣಗಳು ಏಕರೂಪವಾಗಿಯೇ ಇರುತ್ತದೆ. ಪುರಾಣದ ಸ್ತ್ರೀಯರಿಂದ ಹಿಡಿದು ಇಂದಿನ ಕಾರ್ಪೊರೇಟ್ ವಲಯಗಳಲ್ಲಿ ದುಡಿಯುವ ಮಹಿಳೆಯರನ್ನು ಒಳಗೊಂಡಿರುತ್ತದೆಯೇ?

ಲೇಖಕಿ ತನ್ನ ಸಣ್ಣಕತೆಯಲ್ಲಿ ತಾನು ಅನುಭವಿಸಿದ ತಲ್ಲಣಗಳನ್ನು ಸಾರಾಸಗಟಾಗಿ ಪುಸ್ತಕದಲ್ಲಿ ಅನಾವರಣಗೊಳಿಸಲು ಸಾಧ್ಯವಾಗಿಲ್ಲ. ಏಕೆಂದರೆ ಯಾವುದನ್ನು ಬರೆಯಬೇಕು? ಯಾವುದನ್ನು ಬರೆಯಬಾರದು ಎಂಬ ಪೂರ್ವ ವಿಭಜನೆಯೊಡನೆ ಬರಹ ರೂಪದಲ್ಲಿ ಇಳಿಸುವುದು ನನ್ನ ವ್ಯಕ್ತಿ ಸ್ವಾತಂತ್ರ್ಯ ಎಂದು ಬರೆದರೂ ಈ ಸಮಾಜ ಮುಕ್ತ ಮನಸ್ಸಿನಿಂದ ಸ್ವೀಕರಿಸುವುದು ಸಾಧ್ಯವೇ? ಅವಳ ಹತಾಶೆ, ಸಂಘರ್ಷ, ಯಾವುದು ಅದರ ಗಮನಕ್ಕೆ ಬರುವುದಿಲ್ಲ. ಸಮಾಜ ಹುಟ್ಟಿಸಿ ಬಿಡುವ ನೂರಾರು ಪ್ರಶ್ನೆಗಳಿಗೆ ಮುಖಾಮುಖಿಯಾಗುವ ಅವಳು ಅನುಭವಿಸುವ ನೋವನ್ನೇ ಬರೆಯಲು ಅಸಾಧ್ಯವಾದುದು. ಯಾಕೆ ಬರೆದೆ? ಬರೆದು ಖಾಲಿಯಾದೆಸಾ? ಎಂಬ ಗೊಂದಲ ಕಾಣಬಹುದು. ದಲಿತ ಮಹಿಳೆಯ ನೋವು, ಬೀಡಿಕಾರ್ಮಿಕ ಮಹಿಳೆಯ ನೋವು, ವರದಕ್ಷಿಣೆ ಕ್ರೌರ್ಯಕ್ಕೆ ಬಲಿಯಾದ ಮಹಿಳೆ, ಆ್ಯಸಿಡ್ ದಾಳಿಗೆ ತುತ್ತಾದ ಮಹಿಳೆಯರ

ನೋವಿನ ಧ್ವನಿಗಳು ಬರೆಯಲು ಸಾಧ್ಯವಾದದ್ದಾದರೂ ಎಷ್ಟಿದೆ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಈ ಅಧ್ಯಯನ ಕೈಗೊಳ್ಳಲಾಗಿದೆ.

ಶಿಕ್ಷಣದ ಉದ್ದೇಶದಿಂದ ಹೊರ ಪ್ರಪಂಚವನ್ನು ಕಂಡ ಮಹಿಳೆಗೆ ಅದೇ ತನ್ನ ಅಸ್ತಿತ್ವದ ಹುಡುಕಾಟಕ್ಕೆ ತೊಡಗಿಕೊಳ್ಳಲು ಪ್ರೇರಣೆ ಆಯಿತು. ಶಿಕ್ಷಣದ ಮೂಲಕ ಬರಹ, ಉದ್ಯೋಗ, ಹೀಗೆ ಪುರುಷರಿದ್ದಲ್ಲಿ ಮಹಿಳೆ ತನ್ನ ಎದುರಿಗೆ ಪರಿಸರದ ಹೊಸ ಸವಾಲು ಎದುರಿಸಬೇಕಾಯಿತು ಮಹಿಳೆ ಜ್ಞಾನಕ್ಷೇತ್ರದಲ್ಲಿ ಪ್ರವೇಶಿಸಿ ಎಲ್ಲಾ ಸವಾಲುಗಳಿಗೆ ಉತ್ತರಿಸುವ ಪ್ರಯತ್ನ ಮಾಡತೊಡಗಿದಳು. ಹೀಗೆ ಲೇಖಕಿಯರ ಸಣ್ಣಕತೆಗಳ ಬದುಕು – ಬರಹ ಬಗ್ಗೆ ಸಾಕಷ್ಟು ಸಂಶೋಧನೆ ನಡೆದಿಲ್ಲ ಎಂಬುವುದು ಈ ಅಧ್ಯಯನ ಕೈಗೊಳ್ಳಲು ಪ್ರೇರಣೆಯಾಗಿದೆ.

೧.೧ ಅಧ್ಯಯದ ಉದ್ದೇಶಗಳು

ಯಾವುದೇ ಅಧ್ಯಯನದ ವಿಷಯ/ಪ್ರಶ್ನೆಗಳು ರೂಪುಗೊಂಡ ನಂತರ ಅಧ್ಯಯನದ ಉದ್ದೇಶಗಳನ್ನು ಗುರುತಿಸಬೇಕಾಗುತ್ತದೆ. ಸಂಶೋಧನೆಯ ಉದ್ದೇಶಗಳು ಒಂದು ನಿರ್ದಿಷ್ಟ ಸಂಶೋಧನ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ನೀಡುತ್ತದೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರಿಕ್ಷಿಸಲು ಅಥವಾ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನುವುದನ್ನು ಉದ್ದೇಶ ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕಾರ್ಯಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ.

"ಸಣ್ಣಕತಾ ಲೇಖಕಿಯರ ಬರಹ ಬದುಕು (ದಕ್ಷಿಣ ಕನ್ನಡದಲ್ಲಿರುವ ಲೇಖಕಿಯರನ್ನು ಅನುಲಕ್ಷಿಸಿ)" ಈ ವಿಷಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಉದ್ದೇಶಗಳನ್ನು ಗುರುತಿಸಲಾಗಿದೆ.

ಅ) ೨೦ನೇ ಶತಮಾನದದಲ್ಲಿ ದ.ಕ. ಜಿಲ್ಲೆಯಲ್ಲಿ ಮಹಿಳೆಯರು ವ್ಯಾಪಕವಾಗಿ ಶಿಕ್ಷಣಕ್ಕೆ ತೆರೆದುಕೊಂಡರೂ ಬರಹದಲ್ಲಿ ಅದು ಪಡಿಮೂಡಿದ್ದು ಬಹಳ ಕಡಿಮೆ. ಮಹಿಳೆಯರು ಸಣ್ಣ ಕತಾ ಕ್ಷೇತ್ರದಲ್ಲಿ ತೊಡಗಿಕೊಂಡದ್ದು ಬಹಳಷ್ಟು ಮಿತವಾಗಿಯಾದರೂ ಆ ಕಾಲದ ಮಹಿಳೆಯರ ಸ್ಥಾನಮಾನಗಳನ್ನು ಬದುಕನ್ನು ಬರಹದಲ್ಲಿ ಪ್ರಖರವಾಗಿ ಕಟ್ಟಿಕೊಡಲಾಗಿದೆಯೇ ಎಂದು ಕಂಡುಕೊಳ್ಳುವುದು.

ಆ) ದಕ್ಷಿಣಕನ್ನಡ ಜಿಲ್ಲೆಯು ಬಹುಮುಖೀ ಸಂಸ್ಕೃತಿಯ ಜೀವನ ವಿಧಾನವನ್ನು ಹೊಂದಿದ ಬೌಗೋಳಿಕ ಪ್ರದೇಶವಾಗಿದೆ. ಹಲವು ಭಾಷೆ, ಹಲವು ಸಮುದಾಯ, ಸಂಪ್ರದಾಯ, ಸಾಮಾಜಿಕ ನಂಬಿಕೆಗಳು ಇರುವ ಪ್ರದೇಶವಾಗಿದ್ದು ಲೇಖಕಿಯರು ಇವೆಲ್ಲವನ್ನು ಸಂವೇದನೆಗೆ ಒಳಪಡಿಸಿಕೊಂಡ ಬಗೆ ಹೇಗೆ ಎಂದು ಅಧ್ಯಯನ ನಡೆಸುವುದು.

ಇ) ಮಹಿಳೆಯರ ಸಾಮಾಜಿಕ ಬದುಕು ಸಣ್ಣ ಕತೆಗಳಲ್ಲಿ ಹೆಚ್ಚು ಅನಾವರಣಗೊಳ್ಳಲು ಕಾರಣಗಳೇನು ಎಂದು ಕಂಡುಕೊಳ್ಳುವುದು.

೧.೨ ಅಧ್ಯಯನದ ಊಹೆಗಳು/ಆಧಾರ ಕಲ್ಪನೆಗಳು

ಅಧ್ಯಯನದ ದಿಕ್ಕು ದೆಸೆಗಳನ್ನು ಅಚ್ಚುಕಟ್ಟಾಗಿ ರೂಪಿಸಲು ಅಧ್ಯಯನದ ಉದ್ದೇಶಗಳು ಇದ್ದರೆ ಸಾಲದು. ಅಧ್ಯಯನದ ಪ್ರಮೇಯಗಳು ಅಥವಾ ಪೂರ್ವ ತೀರ್ಮಾನಗಳು ಅಥವಾ ಊಹೆಗಳು ಬೇಕು ಎನ್ನುವ ವಾದಗಳು ಇವೆ. ಅಚ್ಚುಕಟ್ಟಾದ ಅಧ್ಯಯನದ ಉದ್ದೇಶಗಳು ಅಧ್ಯಯನದ ಪ್ರಮೇಯಗಳನ್ನು ಅಥವಾ ಪೂರ್ವ ತೀರ್ಮಾನಗಳನ್ನು ನಿರ್ಧರಿಸುತ್ತವೆ.

"ಸಣ್ಣಕತಾ ಲೇಖಕಿಯರ ಬದುಕು – ಬರಹ (ದಕ್ಷಿಣ ಕನ್ನಡ ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)" ಈ ವಿಷಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಊಹೆಗಳನ್ನು ಮಾಡಲಾಗಿದೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಮುಖೀ ಸಂಸ್ಕೃತಿ ಇದ್ದರೂ ಹಲವು ಸಮುದಾಯಗಳು ವಿಭಿನ್ನ ನೆಲೆಯಲ್ಲಿ ಬದುಕಿದರೂ ಇಲ್ಲಿಯ ಮಹಿಳೆಯರ ಸಮಸ್ಯೆಯಲ್ಲಿ ಬಹುತೇಕ ಏಕರೂಪತೆಯಿದೆ.

ಆ) ವಿವಿಧ ಸಮುದಾಯದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದಿದ್ದರೂ ಇವರಲ್ಲಿ ಸಾಹಿತ್ಯಿತ್ತಕವಾಗಿ ಸಂವಹಿಸುವ ಕೊರತೆ ಇದೆ.

ಇ) ಸಾಮಾಜಿಕವಾಗಿ ಬದುಕಿದ ಬದುಕನ್ನು ಸಂಪೂರ್ಣವಾಗಿ ಬರಹದಲ್ಲಿ ಸಂವೇದಿಸುವುದು ಅಸಾಧ್ಯವಾಗಿದೆಯಾದರೂ, ಲೇಖಕಿಯರನ್ನು ವೈಯಕ್ತಿವಾಗಿ ಭೇಟಿಯಾದರೆ ಸಂಶೋಧನೆಗೆ ಪೂರಕವಾಗಬಹುದು. ಏಕೆಂದರೆ ಮಹಿಳೆಯರು ತಮ್ಮ ಖಾಸಗಿತನವನ್ನು ಎಲ್ಲೂ ಬಿಟ್ಟುಕೊಡುವುದಿಲ್ಲ.

೧.೩ ಸಂಶೋಧನೆಯ ವ್ಯಾಪ್ತಿ

ಅ) ಕರ್ನಾಟಕ ಏಕೀಕರಣೋತ್ತರ (೧೯೫೦ರಲ್ಲಿ ಸಮಕಾಲೀನ ಸಣ್ಣಕತೆಯ ಆಧಾರದಲ್ಲಿ ರಚನೆಯಾದ ನಂತರ) ಸಣ್ಣಕತಾ ಲೇಖಕಿಯರ ಬದುಕು – ಬರಹಗಳನ್ನು ಅಧ್ಯಯನ ಮಾಡುವುದು.

ಆ) ೧೯೫೦ರಲ್ಲಿ ಬಂದಂತಹ ದ.ಕ. ಲೇಖಕಿಯರನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಅವರ ಬದುಕು ಬರಹಗಳನ್ನು ಅಧ್ಯಯನ ಮಾಡುವುದು

ಇ) ಲೇಖಕಿಯರ ಬದುಕು – ಬರಹಗಳು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡುವುದು

೧.೪ ಅಧ್ಯಯನದ ಆಕರಗಳು

ಒಂದು ವಸ್ತು ಅಥವಾ ವಿಷಯವನ್ನು ಆಯ್ದುಕೊಂಡು ಅಭ್ಯಾಸಕ್ಕೆ ತೊಡಗಿದೆ ಕೂಡಲೇ ಸಂಶೋಧಕಿ ನೂರಾರು ಕಡೆಗಳಿಂದ ತನ್ನ ವಿಷಯಕ್ಕೆ ಸಂಬಂಧಿಸಿದ ಸಾಮಾಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಸಂಶೋಧನೆಯಲ್ಲಿ ಅತ್ಯಂತ ಮುಲಭೂತವಾದ ಅನಿವಾರ್ಯವಾದ ಮತ್ತು ಅವಶ್ಯವಾದ ಘಟಕವೇ 'ಆಕರ'. "ಆಕರಗಳಿಲ್ಲದೇ ಸಂಶೋಧನೆ ಇಲ್ಲ" ಎನ್ನಬಹುದು. ಈ ಆಕರಗಳು ಪ್ರಮಾಣ ದೃಷ್ಟಿಯಿಂದ

ಅಧಿಕವಾಗಿದ್ದಷ್ಟು, ಗುಣದೃಷ್ಟಿಯಿಂದ ಪ್ರಾಮಾಣಿಕವಾಗಿದ್ದಷ್ಟು ಸಂಶೋಧನೆ ಉತ್ತಮ ಫಲಿತಾಂಶ ನೀಡುತ್ತದೆ.

"ಸಣ್ಣಕತಾ ಲೇಖಕಿಯರ ಬದುಕು – ಬರಹ (ದಕ್ಷಿಣ ಕನ್ನಡ ಜಿಲ್ಲೆಯ ಲೇಖಕಿಯರನ್ನು ಅನುಲಕ್ಷಿಸಿ)" ಈ ವಿಷಯದ ಅಧ್ಯಯನದ ೧೯೫೦ರ ನಂತರದ ಸಣ್ಣಕತಾ ಲೇಖಕಿಯರ ಬದುಕು ಮತ್ತು ಬರಹ ಲೇಖನಿಗಳು, ವಿಮರ್ಶೆ, ಅನಿಸಿಕೆಗಳನ್ನು ವಿಶ್ಲೇಷಣೆ ಮತ್ತು ವಿವರಣಾತ್ಮಕ ಸಂದರ್ಭದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗುವುದು

೧. ೧೯೫೦ರ ನಂತರದ ಅವಧಿಯ ಲೇಖಕಿಯರ ಸಣ್ಣಕತೆಗಳು

೨. ದಕ್ಷಿಣಕನ್ನಡ ಜಿಲ್ಲೆಯ ಆಯ್ದ ಲೇಖಕಿಯರ ಸಣ್ಣಕತೆಗಳು

೩. ಆಯ್ದು ಲೇಖಕಿಯ ಸಣ್ಣಕತೆಗಳನ್ನು ಓದಿದ ಸದಸ್ಯರ ಅಭಿಪ್ರಾಯ

೪. ಆಯ್ದು ಹಿರಿಯ ಲೇಖಕಿಯರ ಅಭಿಪ್ರಾಯ

೫. ಆಯ್ದು ಹೊಸ ಲೇಖಕಿಯರ ಅಭಿಪ್ರಾಯ

೬. ಲೇಖನದಲ್ಲಿ ಸಂಬಂಧಿಸಿದ ಲೇಖಕಿಯರ ಬದುಕು – ಬರಹದ ಲೇಖನಗಳು, ಗ್ರಂಥಗಳು

೭. ಲೇಖಕಿಯರ ಕುರಿತು ಬಂದ ಸಾಕ್ಷ್ಯಚಿತ್ರಗಳು, ಸಂದರ್ಶನಗಳು

೧.೫ ಅಧ್ಯಯನದ ವೈಧಾನಿಕತೆ

ಅಧ್ಯಯನದ ಸಮಸ್ಯೆ, ಅಧ್ಯಯನ ಉದ್ದೇಶಗಳ ನಿರ್ಧರಿಸಿದರೆ ಉದ್ದೇಶಗಳು ಅಧ್ಯಯನದ ವಿಧಾನಗಳನ್ನು ನಿರ್ಧರಿಸುತ್ತವೆ. ಅಥವಾ ಪ್ರಭಾವಿಸುತ್ತವೆ. ಸಂಶೋಧನಾ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗುವುದು ಎನ್ನುವ ವಿವರಗಳನ್ನು ಸಂಶೋಧನಾ ವಿಧಾನದಲ್ಲಿ ಹೇಳಲಾಗುತ್ತದೆ. ವಿವಿಧ ವಿಧಾನಗಳ ಮೂಲಕ ಸಂಗ್ರಹಿಸಿ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗಿದೆ ಎನ್ನುವ ಅಂಶ ಕೂಡ ವಿಧಾನದ ವಿವರಣೆ ಜತೆ ಸೇರಿರುತ್ತದೆ.

ದ.ಕ.ಜಿಲ್ಲೆಯ ಸಣ್ಣಕತಾ ಲೇಖಕಿಯರ ಬದುಕು ಬರಹದಲ್ಲಿ ಆಗಿರುವ ಅಥವಾ ಆಗುತ್ತಿರುವ ಬರಹದಲ್ಲಿ ಅಥವಾ ಬದಲಾಗುತ್ತಿರುವ ಸ್ವರೂಪ ವಸ್ತು ಮತ್ತು ಆಶಯವನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಮುಖ್ಯ ಕಾಳಜಿಯಾಗಿದೆ. ಸಾಹಿತ್ಯವನ್ನು ಒಂದು ಪ್ರಧಾನ ಅಭಿವ್ಯಕ್ತಿ ನೆಲೆಯಾಗಿ ಸಣ್ಣಕತಾ ಲೇಖಕಿಯರ ಬದುಕು – ಬರಹ ಯಾವ ರೀತಿಯಲ್ಲಿ ಗ್ರಹಿಸಿವೆ ಮತ್ತು ವ್ಯಾಖ್ಯಾನಿಸಿವೆ ಎಂಬುದನ್ನು ವಿಶ್ಲೇಷಿಸುವ ದೃಷ್ಟಿಯಿಂದ ಅಲ್ಲಿನ ಅಧ್ಯಯನದ ವಿನ್ಯಾಸ ಮತ್ತು ವಿಧಾನಗಳನ್ನು ರೂಪಿಸಿಕೊಳ್ಳಲಾಗಿದೆ. ವಿಶ್ಲೇಷಣಾತ್ಮಕ, ವಿವರಣಾತ್ಮಕ ಹಾಗೂ ಸಂದರ್ಶನ ಹೀಗೆ ಈ ಅಧ್ಯಯನದ ವಿನ್ಯಾಸವನ್ನು ರೂಪಿಸಿಕೊಳ್ಳಲಾಗಿದೆ.

೧. ಲೇಖಕಿಯರ – ಬದುಕು ಬರಹಗಳಿಗೆ ಸಂಬಂಧಪಟ್ಟಂತೆ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ನೇರ ವಿಶ್ಲೇಷಣೆ ಮಾಡುವುದು.

೨. ಗ್ರಂಥಾಲಯಕ್ಕೆ ಭೇಟಿ ನೀಡಿ ಸಣ್ಣಕತೆಗಳ ಬಗ್ಗೆ ಪುಸ್ತಕಗಳನ್ನು ಸಂಗ್ರಹಿಸುವುದು ಮತ್ತು ವಿಶ್ಲೇಷಿಸುವುದು

೩. ಕರಾವಳಿ ವಾಚಕಿಯರ ಸಂಘಕ್ಕೆ ಭೇಟಿ ನೀಡುವುದು ಮತ್ತು ಸಣ್ಣಕತೆಗಳನ್ನು ಸಂಗ್ರಹಿಸುವುದು ಮತ್ತು ತುಲನಾತ್ಮಕವಾಗಿ ವಿಮರ್ಶಿಸುವುದು.

೪. ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಸಂಘ, ಸಂಸ್ಥೆಗಳಲ್ಲಿನ ಪ್ರಕಟಿತ ಹಾಗೂ ಅಪ್ರಕಟಿತ ಮಹಾಪ್ರಬಂಧಗಳಲ್ಲಿ ಪ್ರಕಟಿತ ಸಣ್ಣಕತೆಗಳ ಲೇಖನಗಳಲ್ಲಿ ಕೂಡಾ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆ ಹಾಕುವುದು

೫. ವಿವಿಧ ನಿಯತಕಾಲಿಗೆಳಲ್ಲಿ ಪ್ರಕಟವಾದ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಸಣ್ಣಕತೆಯ ಲೇಖನಗಳನ್ನು ವಿಶ್ಲೇಷಿಸುವುದು

೬. ಸಂಶೋಧನಾ ಮಾರ್ಗದರ್ಶಕರೊಂದಿಗೆ ಸಮಾಲೋಚನೆ ಮಾಡುವುದು ಹಾಗೂ ಮಾರ್ಗದರ್ಶನ ಪಡೆಯುವುದು

೭. ಕ್ಷೇತ್ರದಲ್ಲಿ ಅನುಭವವುಳ್ಳ ಆಯ್ದ ಲೇಖಕಿಯರನ್ನು ಭೇಟಿ ಮಾಡಿ ಅವರೊಂದಿಗೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವುದು ಮತ್ತು ಅವರ ಅಭಿಪ್ರಾಯ ಸಂಗ್ರಹಿಸುವುದು.

೮. ಲೇಖಕಿಯರ ಸಣ್ಣಕತೆಗಳನ್ನು ಪ್ರಕಟಿಸಿದ ಮಂಡಳಿಯ ಮೂಲಕ ಅಭಿಪ್ರಾಯ ಸಂಗ್ರಹಿಸುವುದು

೯. ನಿವೃತ್ತ ಲೇಖಕಿ ಹಾಗೂ ಹಿರಿಯ ಲೇಖಕಿಯರನ್ನು ಭೇಟಿ ಮಾಡುವುದು ಚರ್ಚಿಸುವುದು ಮತ್ತು ಅವರ ಅಭಿಪ್ರಾಯ ಸಂಗ್ರಹಿಸುವುದು

೧೦. ಆಯ್ದ ಸಾಹಿತಿಗಳು, ವಾಚಕಿಯ ಸದಸ್ಯರುಗಳ ಜೊತೆ ಸಂದರ್ಶನ ಮಾಡಿ ಅಭಿಪ್ರಾಯ ಸಂಗ್ರಹಿಸುವುದು.

ಹೀಗೆ ಈ ಅಧ್ಯಯನದ ದಾರಿ ಮತ್ತು ವಿಧಾನಗಳನ್ನು ಯೋಜಿಸಿದೆ.

ಸಂಬಂಧಿತ ಸಾಹಿತ್ಯದ ಅವಲೋಕನ

ಯಾವುದೇ ಸಂಶೋಧನ ಕಾರ್ಯ ಕೈಗೆತ್ತಿಕೊಳ್ಳುವಾಗ ಸಂಶೋಧನಾ ಪ್ರಸ್ತಾವನೆಯನ್ನು ರೂಪಿಸಬೇಕಾಗುತ್ತದೆ. ಸಂಶೋಧನೆಗಾಗಿ ವಿಷಯದ ಆಯ್ಕೆ ಮಾಡಿಕೊಂಡವರು ತಾವು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಈಗಾಗಲೇ ಮಂಡಿತವಾದ ಪ್ರಬಂಧಗಳನ್ನು ಮತ್ತು ಇತರ ಸಂಶೋಧನಾ ಬರಹಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗುತ್ತದೆ.

೧. ಪಿ.ನಾರಾಯಣ ಮೂಡಿತ್ತಾಯ ಅವರು "ಮೊದಲ ಘಟ್ಟದ ಕನ್ನಡ ಮತ್ತು ಮಲಯಾಳದ ಸಣ್ಣಕತೆಗಳ ಕಾಲ್ಪನಿಕ ಅಧ್ಯಯನ" ಎಂಬ ಶೀರ್ಷಿಕೆಯಡಿ ಮಹಾ ಪ್ರಬಂಧ ಬರೆದಿದ್ದಾರೆ. ಡಾ. ಕೆ.ಚಿನ್ನಪ್ಪ ಗೌಡ ಅವರ ಮಾರ್ಗದರ್ಶನದಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನ ನಡೆದಿರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಪಿ. ನಾರಾಯಣ ಮೂಡಿತ್ತಾಯ ಅವರು ಕನ್ನಡ ಮತ್ತು ಮಲಯಾಳದ ಸಣ್ಣಕತೆಗಳ ಬಗ್ಗೆ ವಿವರಣೆ ನೀಡಿದ್ದಾರೆ. ಕನ್ನಡ ಮತ್ತು ಮಲಯಾಳದಲ್ಲಿ ಸಣ್ಣಕತೆಗಳು ಯಾವ ರೀತಿ ಇದೆ? ಇದರಲ್ಲಿ ಲೇಖಕ – ಲೇಖಕಿಯರನ್ನು ಒಟ್ಟು ಸೇರಿ ಮಾಡಿದ ಸಮೀಕ್ಷೆಯಾಗಿದೆ.

೨. ಶ್ರೀಮತಿ ಸಬಿಹಾ ಭೂಮಿ ಗೌಡ ಅವರು "ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕತೆಗಳ ಹುಟ್ಟು ಮತ್ತು ಬೆಳವಣಿಗೆ ೧೮೪೩-೧೯೮೭ರ ಅಧ್ಯಯನ" ಎಂಬ ಶೀರ್ಷಿಕೆಯಡಿ ಮಹಾಪ್ರಬಂಧ ಬರೆದಿದ್ದಾರೆ. ಡಾ। ಬಿ.ಎ. ವಿವೇಕ್ ರೈರವರ ಮಾರ್ಗದರ್ಶನದಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನ ನಡೆದಿರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಶ್ರೀಮತಿ ಸಬಹಾರವರು ಸಣ್ಣಕತೆಯ ಹುಟ್ಟು ಮತ್ತು ಬೆಳವಣಿಗೆ ಬಗ್ಗೆ ವಿವರಣೆ ನೀಡಿದ್ದಾರೆ. ಸಣ್ಣಕತೆಯು ಯಾವಾಗ ಬೆಳಕಿಗೆ ಬಂತು, ಅದರ ಹಿನ್ನೆಲೆಯನ್ನು ತಮ್ಮ ಮಹಾಪ್ರಬಂಧದಲ್ಲಿ ಕೈಗೊಂಡಿದ್ದಾರೆ

೩. ಮಮತಾರಾವ್‌ರವರು "ಮುಂಬಯಿಯ ಸಣ್ಣಕತೆಗಳ ಬಗ್ಗೆ ಅಧ್ಯಯನ ಎಂಬ ಶೀರ್ಷಿಕೆಯಡಿ ಮಹಾಪ್ರಬಂಧ ಬರೆದಿದ್ದಾರೆ. ಡಾ.ವಸುಂಧರ ರವರ ಮಾರ್ಗದರ್ಶನದಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನ ನಡೆದಿರುತ್ತದೆ. ಮುಂಬಯಿಯ ತನ್ನ ಹುಟ್ಟೂರಿನ ಕಂಪನ್ನು ನೆನೆಯುತ್ತಾ ಇಲ್ಲಿಯ ಯಾಂತ್ರಿಕ ಜೀವನದೊಂದಿಗೆ ಹೊಂದಾಣಿಕೆ ನಡೆಸುತ್ತಾ ದೈನಂದಿನ ಅವಿಶ್ರಾಂತ ಬದುಕಿನಲ್ಲೂ ಅವಕಾಶ ಮಾಡಿಕೊಂಡು ರಚಿಸಲ್ಪಟ್ಟ ಇಲ್ಲಿಯ ಸಣ್ಣಕತೆಗಳು ಈ ಮಾಯಾನಗರದ ಸಂಖ್ಯೆ ಕಥೆಗಾರರ ವಸತಿ ಸಮಸ್ಯೆ, ಕೊಳೆಗೇರಿ ಬದುಕು, ಮಿತಿ, ಸೆಳೆತ ಕೋಮು ಸೌಹಾರ್ದತೆ, ದೌರ್ಜನ್ಯ ಇವುಗಳ ಮೂಲಕ ಶೋಧಿಸಿದ್ದಾರೆ.

ಅಧ್ಯಾಯ ೨

ಆಯ್ದ ಲೇಖಕಿಯರ ಬದುಕು – ಬರಹ, ಬಾಲ್ಯಜೀವನ, ಶಿಕ್ಷಣ, ಕುಟುಂಬ, ಧರ್ಮ

೨.೧ – ಸಾರಾ ಅಬೂಬಕ್ಕರ್

೨.೨ – ಗಂಗಾಪಾದೇಕಲ್ಲು

೨.೩ – ಎ.ಪಿ. ಮಾಲತಿ

೨.೪ – ಪದ್ಮಾ ಶೆಣೈ

೨.೫ – ಸಬಿಹಾ ಭೂಮಿಗೌಡ

ಅಧ್ಯಾಯ-೨

ಆಯ್ದ ಲೇಖಕಿಯರ ಬದುಕು-ಬರಹ, ಬಾಲ್ಯ ಜೀವನ, ಶಿಕ್ಷಣ ಕುಟುಂಬ, ಧರ್ಮ

೨.೧ ಸಾರಾ ಅಬೂಬಕ್ಕರ್

ಸಾರಾ ಅವರ ಬರವಣಿಗೆಯ ಮೊದಲ ಘಟ್ಟವು ಹೆಣ್ಣಿನ ಆಳದ ದಿಗ್ಭ್ರಮೆಯನ್ನು ಕುರಿತದ್ದು. ಎಂದಿಗೂ ಒಂದೇ ಎನ್ನುವಂತೆ ಕಾಣುತ್ತಿರುವ ಬದುಕು ನಿಜದಲ್ಲಿ ಗಂಡಿಗೆ ಬೇರೆ, ಹೆಣ್ಣಿಗೆ ಬೇರೆ ಎನ್ನುವ ಕಟು ಸತ್ಯದ ಅನಾವರಣದ ಜೊತೆಗೇ ಇದು ಯಾಕೆ ಹೀಗೆ ಮತ್ತು ಹೀಗೆರಬೇಕಾಗಿಲ್ಲ ಅಲ್ಲವೆ ಎನ್ನುವ ಪ್ರಶ್ನಾರ್ಥಕ ದಿಗ್ಭ್ರಮೆಯಲ್ಲಿ ಇವರ ಕತೆ- ಕಾದಂಬರಿಗಳ ಹೆಣ್ಣು ಬದುಕನ್ನು, ಜೊತೆಯಲ್ಲಿರುವ ಗಂಡಸರನ್ನು ಮುಖಾಮುಖಿಯಗುತ್ತಾರೆ. ಎಲ್ಲ ಬಗೆಯಲ್ಲೂ ತಮ್ಮನ್ನು ನಿಯಂತ್ರಿಸಲು ಹತ್ತು-ಹಲವು ಗುನ್ನಾರಗಳನ್ನು ಸೃಷ್ಟಿಸುತ್ತಲೇ ಹೋಗುವ ವ್ಯವಸ್ಥೆಗೆ, ತಮ್ಮ ಬದುಕಿನ ಮಗ್ಗುಲ ಮುಳ್ಳುಗಳಾಗುರುವ ಗಂಡಸರಿಗೆ ತಮಗೆ ಸಾಧ್ಯವಿರುವ ರೀತಿಗಳಲ್ಲೆಲ್ಲ ಪ್ರತಿರೋಧಿಸಲು ಹವಣಿಸುತ್ತಾರೆ. ಈ ಪ್ರಕ್ರಿಯೆಯುದ್ದಕ್ಕೂ ಇವರ ಮಹಿಳಾ ಪಾತ್ರಗಳಲ್ಲಿ ಸ್ಥಾಯಿಯಾಗಿರುವ ಒಂದು ಗುಣವೆಂದರೆ ಅವರ ಕೊನೆಯಿಲ್ಲದ ಚಡಪಡಿಕೆ. ವ್ಯವಸ್ಥೆಯನ್ನು ಮನ:ಪೂರ್ವಕವಾಗಿ ಒಪ್ಪಲಾರದ ವ್ಯಗ್ರತೆಯಲ್ಲಿ, ಆದರೆ ವ್ಯವಸ್ಥೆಯನ್ನು ಮುರಿದು ಕಟ್ಟಲಾಗದ ಅಸಹಾಯಕತೆಯಲ್ಲಿ ಬದುಕಿನ ಆರಂಭದಿಂದ ಕೊನೆಯವರೆಗೆ ಚಡಪಡಿಸುತ್ತಲೇ ಹೋಗುತ್ತಾರೆ. ಗಂಡಸಿನ ಎಲ್ಲಾತಪ್ಪುಗಳೂ, ಹೆಣ್ಣಿಗೆ ಮಾಡುವ ಅತ್ಯಂತಿಕವಾದ ಅನ್ಯಾಯಗಳೂ ಅವರ ಅಜನ್ಮ ಸಿದ್ಧ ಹಕ್ಕು ಎನ್ನುವಂತೆ ಪ್ರತಿಪಾದನೆಯಾಗುತ್ತಾಹೋಗುವುದನ್ನು ಮಾತ್ರವಲ್ಲ, ತನ್ನ ಪಾತ್ರವೋ ಅಭಿಪ್ರಾಯವೋ ಯಾವುದೂ ಮುಖ್ಯವಾಗದೇ ನಿರಂತರ ನೋಯುತ್ತಲೇ ಸವೆಯುವ ಸತ್ಯವನ್ನು ಮಾತ್ರ ಪ್ರತಿಫಳಿಗೆಯೂ ಇಲ್ಲಿನ ಹೆಣ್ಣು ಅನುಭವಿಸುತ್ತಾಳೆ. ಒಂದು ಘಟ್ಟದಲ್ಲಿ ಇದು ತನ್ನ ಬದುಕೇ ಹೌದೆ ಎನ್ನುವ ಬಗೆಹರಿಯದ ದಿಗ್ಭ್ರಮೆಗೂ ಹೆಣ್ಣು ಒಳಗಾಗುತ್ತಾಳೆ. ಈ ಬಗೆಯ ದಿಗ್ಭ್ರಮೆಯನ್ನು, ಚಡಪಡಿಕೆಯನ್ನು ಹಿಡಿಯುವುದು ಯಾವ ಲೇಖಕರಿಗೂ ಬಹುದೊಡ್ಡ ಸವಾಲು. ಯಾಕೆಂದರೆ ಕಾಣುವುದು ಒಂದಾದರೆ, ಕಾಣದಿರುವುದು ನೂರಾರು. ಅಮೂರ್ತವಾದದ್ದನ್ನು ಅನುಭವರೂಪಿಯಾಗಿಸಿ, ಅಭಿವ್ಯಕ್ತಿಯ ಸಾಧನೆವಾಗಿಸುವುದು ಕಷ್ಟದ ಕೆಲಸ. ಸಾರಾ ಈ ಪ್ರಯತ್ನದಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ ಎಂದೇ ಅನ್ನಿಸುತ್ತದೆ. ಮಹತ್ವದ ಅಂಶವೆಂದರೆ ಈ ದಿಗ್ಭ್ರಮೆ, ವ್ಯಗ್ರತೆ, ವಿಷಾದ ಹೆಣ್ಣಿನ ಬದುಕಿನ ಎಲ್ಲಿ ಹಂತಗಳಲ್ಲಿ ಇದ್ದೇ ಇರುತ್ತದೆ ಎನ್ನುವುದನ್ನು ಸಾರಾ ಗುರುತಿಸುತ್ತಾರೆ ಎನ್ನುವುದು. ಹೆಣ್ಣು ದಿಗ್ಭ್ರಾಂತಿಯನ್ನು ವಿಧಾನ ಬೇರೆಯಾಗಬಹುದು. ಆದರೆ ದಿಗ್ಭ್ರಮೆ ಮಾತ್ರ ಮೂಲಸಂಗತಿ ಎನ್ನುವುದು ಸಾರಾ ಅವರ ನಿಲುವಾಗಿರುವಂತೆ ತೋರುತ್ತದೆ. ಅವರ ಎರಡನೆಯ ಘಟ್ಟದ ಕತೆ ಮತ್ತು ಕಾದಂಬರಿಗಳ ನಾಯಕಿಯರು ಈ ದಿಗ್ಭ್ರಮೆಯನ್ನು ಪ್ರತಿರೋದದ ದಾರಿಯಾಗಿಸುವಲ್ಲಿ ಯಶಸ್ವಿಯಾಗುತ್ತರೆ. ಅಮೂರ್ತ ಪ್ರತಿರೋಧದ ನೆಲೆಯಾಗಿಸುವಲ್ಲಿ ಅವರ ಪ್ರಯತ್ನಗಳಿವೆ .ಮೂಕ ಅಸಹಾಯಕತೆಯ ಶಕ್ತ ಬಂಡಾಯದ ದಾರಿಯಾಗುವ ಕಡೆಗಿನ ಚಲನೆಯೆಂದೂ ಇದನ್ನು ಗುರುತಿಸಲು ಸಾಧ್ಯ. ಇಷ್ಟಾಗಿಯೂ ವ್ಯವಸ್ಥೆಯ ಕೊನೆಯಿಲ್ಲದ ಶಕ್ತಿಯನ್ನು, ಸಾಧ್ಯತೆಗಳನ್ನು ಸಾರಾ ಅವರು ಕಡು ವಾಸ್ತವದ ವಿವರಗಳಲ್ಲಿ ಗುರುತಿಸಲು ಪ್ರಯತ್ನಿಸುತ್ತಾರೆ. ಹಿರಿಯರೇ ಮುಖ್ಯವಾಗಿ ತಾಯಂದಿರೆ ಹೆಣ್ಣು ಮಕ್ಕಳನ್ನು

ನಿಯಂತ್ರಿಸುವ, ವ್ಯವಸ್ಥೆಯ ವಶಕ್ಕೆ ಒಡ್ಡುವ ಚಿತ್ರವೊಂದು ಸಾರಾ ಅವರಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಇದೊಂದು ಕುತೂಹಲಕಾರಿ ಅಂಶ. ಹೆಣ್ಣಿನ ಆಳದ ದಿಗ್ಭ್ರಮೆಯ ಮೂಲಸೆಲೆಯೊಂದನ್ನು ಸಾರಾ ಇಲ್ಲಿ ಗಮನಿಸುತ್ತಾರೆ. ತನ್ನನ್ನು ಶಾಲೆಗೆ ಕಳುಹಿಸಲು ತಾಯಿಯೇ ಹಿಂಜರಿದು ವಿರೋಧಿಸಿದಾಗ ಆಗುವ ದಿಗ್ಭ್ರಮೆಯೇ, ಮುಂದೊಂದು ಘಟ್ಟದಲ್ಲಿ ತಾಯಿ ಯಾಕೆ ಹಾಗೆ ಮಾಡಿರಬಹುದು ಎನ್ನುವ ಸತ್ಯದ ಅನಾವರಣವಾದಾಗಲೂ ಆಗುತ್ತದೆಯಲ್ಲ! ಯಾಕೆ ಹಿರಿಯ ಹೆಣ್ಣುಮಕ್ಕಳು ಹೀಗೆ ವರ್ತಿಸುತ್ತಾರೆ ? ಅವರ ಒತ್ತಾಯ ಅಥವಾ ನಿಲುವು ವ್ಯವಸ್ಥೆಯ ಬಗೆಗಿನ ಒಪ್ಪಿಗೆಯಾಗಿರಲಂತೂ ಸಾಧ್ಯವೇ ಇಲ್ಲವಲ್ಲ. ವ್ಯವಸ್ಥೆಯನ್ನು ವಿರೋಧಿಸುವುದರಿಂದ ಆ ವಿರೋಧದಲ್ಲಿ ಅಚಿತಿಮವಾಗಿ ಸಿಗುವ ನೋವಿನ, ಸೋಲಿನ ತೀವ್ರತೆಯನ್ನು ತನ್ನ ಕರುಳಕುಡಿಗಳು ಎದುರಿಸದಿರಲಿ ಎನ್ನುವ ಮಾತೃವಾತ್ಸಲ್ಯದಲ್ಲಿ ಅವರು ಹೀಗೆ ಮಾಡುತ್ತಾರೆಯೇ? ವ್ಯವಸ್ಥೆಯ ಕ್ರೌರ್ಯದ ಬಗೆಗಿನ, ಬಲಿಷ್ಠತೆಯ ಬಗೆಗಿನ, ಸಕಾರಣ ಭಯವೇ? ಎರಡನೆಯ ಅಂಶವೇ ನಿರ್ಣಾಯಕವಾಗಿರಬಹುದೇನೋ. ಯಾಕೆಂದರೆ ಹೆಣ್ಣಿನ ಪ್ರತಿರೋಧಕ್ಕೆ ಅಧಿಕೃತತೆಯನ್ನು ವ್ಯವಸ್ಥೆ ಕೊಡುವುದಿಲ್ಲ ಎನ್ನುವ ಗೃಹೀತದಲ್ಲಿಯೇ ಸಾರಾ ಅವರ ಬಹುತೇಕ ಸ್ತ್ರೀಪಾತ್ರಗಳ ಪ್ರತಿರೋಧದ ನೆಲೆಗಳನ್ನು ಚರ್ಚಿಸಬೇಕು. ತನ್ನಿಂದ, ತನ್ನೊಬ್ಬಳಿಂದ ತನ್ನಂತಹ ಕೆಲವೇ ಕೆಲವರಿಂದ ವ್ಯವಸ್ಥೆ ಬದಲಾಗಲು ಸಾಧ್ಯವಿಲ್ಲ ಎನ್ನುವ ತಿಳುವಳಿಕೆಯ ಹಿನ್ನಲೆಯಲ್ಲಿ ಈ ಪಾತ್ರಗಳ ನಿಲುವುಗಳು–ನಡೆಗಳನ್ನು ಚರ್ಚಿಸಬಹುದು. ಸಿಮೋನ್ ದಿ ಬುವಾ ಹೆಣ್ಣಿನ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ಬದಲಾಗದೆ ಯಥಾಸ್ಥಿತಿಯಲ್ಲಿ ಉಳಿದಿರುವುದಕ್ಕೆ ಕೊಡುವ ಕಾರಣ ಅರ್ಥವಾಗುವುದು ಇಂಥ ಸನ್ನಿವೇಶಗಳಲ್ಲಿ. 'ಸಂಘಟನೆ ಕೊರತೆ' ಎಂದು ಸಿಮೋನ್ ದಿ ಬುವಾ ಹುರುತಿಸುವ ವಾಸ್ತವವು ಒಂದು ಜಾಗತಿಕ ವಿದ್ಯಮಾನವಾಗಿದೆ. ಇಲ್ಲಿ ಸಂಘಟನೆ ಎನ್ನುವುದು ಹೆಣ್ಣಿನ ಭೌದ್ಧಿಕ, ಮಾನಸಿಕ, ಜೈವಿಕ ಹೀಗೆ ಎಲ್ಲ ಬಗೆಯ ಸಂಘಟನೆಗಳ ಮಟ್ಟಿಗೂ ನಿಜವೇ ಆಗಿರುತ್ತದೆ. ಸಂಘಟನೆಗೆ ಎರಡೂ ಮೂಲಾಂಶಗಳಿರುತ್ತವೆ. ಒಂದು ಆತ್ಮವಿಶ್ವಾಸವಾದರೆ ಇನ್ನೊಂದು ಆವರಣ ಸೃಷ್ಠಿ. ಆದರೆ ಸಮುದಾಯವು ಅದರ ರಚನೆಯ ಸ್ವರೂಪದಲ್ಲಿಯೇ. (ಸಾಮಾಜಿಕ ರಾಜಕೀಯ ಧಾರ್ಮಿಕ ಸಾಂಸ್ಕೃತಿಕ) ಈ ಎರಡೂ ಹೆಣ್ಣಿಗೆ ಲಭ್ಯವಾಗದಿರುವ ಹಾಗೆ ನಿರಂತರವಾಗಿ ಎಚ್ಚರಿಕೆ ವಹಿಸುತ್ತಿರುತ್ತದೆ. ಕೌಂಟುವಿಕ ರಚನೆಯಲ್ಲಿ ಹೆಣ್ಣುಗಳ ನಡುವೆ ಸಾಮರಸ್ಯ ಕಷ್ಟವಾಗುವರ ಹಿಂದೆ ವಾಸ್ತವವಾಗಿ ಕೆಲಸ ಮಾಡುವುದು ಇದೇ ಅಂಶ. ಹೆಣ್ಣಿನ ಅಭದ್ರತೆಯ ನೆಲೆಯನ್ನು ದಿನದಿಂದ ದಿನಕ್ಕೆ ಭದ್ರಗೊಳಿಸುತ್ತಲೇ ಹೋಗುವುದರ ಮೂಲಕವೇ ಅವಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ವ್ಯವಸ್ಥೆ ಕಾರ್ಯೋನ್ಮುಖವಾಗಿರುತ್ತದೆ. ಈ ಪ್ರಯತ್ನದಲ್ಲಿ ಸೋಲು ಅಪರೂಪವೋ, ಅಪವಾದವೋ ಎನಿಸುವಷ್ಟು ಶಕ್ತ ಕಾರ್ಯಮಾದರಿ ಇದು. ಒಂದಲ್ಲ ಒಂದು ಮೂಲದಿಂದ ಅವಳ ಅತ್ಮವಿಶ್ವಾಸವನ್ನು ಕುಂದಿಸುತ್ತಲೇ ಅವಳ ಪ್ರತಿರೋಧದ ಕಾರ್ಯಕ್ಷಮತೆಯನ್ನು ಇದು ಕುಗ್ಗಿಸುತ್ತದೆ. ಸರಾ ಅವರ ಸ್ತ್ರೀಪಾತ್ರಗಳ ಮೂಲಾನುಭವ ಇದೇ. ಪ್ರತಿರೋಧದ ಮೂರ್ತ, ಕ್ರಿಯಾಶೀಲ ಸಧ್ಯತೆಗಳನ್ನು ನಾಶ ಮಾಡುತ್ತಲೇ ಹೋಗುವುದನ್ನು ಅದರ ಬಹುರೂಪಿ ಆಕರ್ಷಕ ವೇಷಗಳನ್ನು ಸಾರಾ ಅಬೂಬಕ್ಕರ್ ನಿರುದ್ವಿಗ್ನವಾಗಿಯೆ ಚಿತ್ರಿಸುತ್ತಾರೆ. ಮನೆಯ ಘೋಷಿತ ಯಜಮಾನನು ಬೇಜವಾಬ್ದಾರಿಯವನು, ಕುಟುಂಬವನ್ನು ಸಾಕಲು ಅಸಮರ್ಥನ ಆದಾಗಲೂ, ಕುಟುಂಬಕ್ಕೆ ಎರಡು ಹೊತ್ತಿನ ಗಂಜಿ ಕಾಣಿಸುತ್ತಿರುವವಳು ಹೆಣ್ಣೆ ಆದರೂ, 'ಯಜಮಾನ್ಯ' ಅವಳದಲ್ಲ. ಪಂಪನ ಮಾತೊಂದನ್ನು ಸ್ವಲ್ಪ ಪರಿವರ್ತಿಸಿ ಬಳಸಿಕೊಳ್ಳಬಹುದಾದರೆ

'ಅಕ್ಕಿಗೊಟ್ಟು ಮಡುಗೂಳ್ ಉಣ್ಣುವ' ವಿಲಕ್ಷಣ ಸನ್ನಿವೇಶದಲ್ಲಿ ಹೆಣ್ಣು ಮತ್ತೆ ಮತ್ತೆ ಸಿಕ್ಕಿ ಹಾಕಿಕೊಳ್ಳುವುದನ್ನು ಸಾರಾ ಅಪಾರ ಸೂಕ್ಷ್ಮತೆಯಲ್ಲಿ ಚಿತ್ರಿಸುತ್ತಾರೆ. ತಾನೇ ದುಡಿದು ಸಾಕುತ್ತಿರುವ ಸಂಸಾರದಲ್ಲಿಯೂ ತನಗೆ ಬೇಕಾದ್ದನ್ನು ಅವರು ಹಂಗಿನ ಭಾವದಿಂದ ಪಡೆಯಬಹುದೇ ಹೊರತು ಹಕ್ಕಿನಿಂದಲೇ ಹೆಣ್ಣಿನ ಶ್ರಮಕ್ಕೂ, ವ್ಯಕ್ತಿತ್ವಕ್ಕೂ ಯಾವ ಅಧಿಕೃತತೆಯೂ, ಮನ್ನಣೆಯೂ ಇಲ್ಲದ ದಮನಿತ ಸ್ಥಿತಿಯಲ್ಲಿ ಹೆಣ್ಣುಗಳ ಪ್ರತಿರೋಧಿಸಬೇಕಾಗಿರುವುದು ಬದುಕನ್ನೇ, ಪಿತೃಪ್ರಧಾನ ವ್ಯವಸ್ಥೆಯನ್ನೇ ಎನ್ನುವ ದ್ವಂದ್ವಕ್ಕೆ ಒಳಗಾಗುವುದನ್ನು ನಾವು ಗಮನಿಸಬಹುದು. ಆದರೆ ಸಾರಾ ಅವರ ಕೃತಿಗಳಲ್ಲಿನ ಹೆಣ್ಣು ಎಂದೂ ಬದುಕಿಗೆ ವಿಮುಖರಾದವರಲ್ಲ. ಬದುಕಿನ ಹೋರಾಟದಲ್ಲಿ ಕೈಚೆಲ್ಲಿ ಕುಳಿತವರೂ ಅಲ್ಲ. ಹೆಣ್ಣಿನ ಮಟ್ಟಿಗೆ ಜೀವನ ಎನ್ನುವುದು ಸಹಜವಾದದ್ದು, ಇರುವುದು ಎನ್ನುವುದಕ್ಕಿಂತ ಹೆಚ್ಚಾಗಿ ಕೂಡಮಾಡಲ್ಪಟ್ಟ ಬದುಕು ಎನ್ನುವುದನ್ನು ಮುಸ್ಲಿಂ ಹೆಣ್ಣುಮಕ್ಕಳ ಮಟ್ಟಿಗೆ ಮಾತ್ರ ನಿಜ ಎನ್ನುವ ಹಾಗಿಲ್ಲಬದಲಾಗಿ ಲೋಕದ ಹೆಣ್ಣು ಮಕ್ಕಳೆಲ್ಲರ ಪಾಡು ಎನ್ನುವ ಹರವಿನಲ್ಲಿ ಸಂದೇಹಾತೀತವಾಗಿ ಸಾರಾ ಅವರ ಪಾತ್ರಗಳು ಸಾಬೀತು ಪಡಿಸುತ್ತವೆ. ಮುಸ್ಲಿಂ, ಹಿಂದೂ, ಕ್ರೈಸ್ತ ಹೀಗೆ ಯಾವ ಧರ್ಮ, ಯಾವ ದೇಶಗಳಿಗೆ ಸೇರಿದ ಹೆಣ್ಣು ಮಕ್ಕಳಾದರೂ ಹೆಣ್ಣಿನ ಜೀವನಕ್ಕೆ ಇವುಗಳನ್ನು ಮೀರಿದ ಕೆಲವು ಸಾಮಾನ್ಯ ಗುಣಲಕ್ಷಣಗಳಿವೆ ಎನ್ನುವುದನ್ನು ಗ್ರಹಿಸಿರುವುದರಲ್ಲಿಯೇ ಸಾರಾ ಅವರ ಮಹಿಳಾ ಕೇಂದ್ರದ ಮಹತ್ವವಿದೆ.

'ಬದುಕಿನ ಶೋಧ'ವು ಸಾರಾ ಅವರ ಇನ್ನೊಂದು ಸಣ್ಣ ಕತೆಗಳ ಇನ್ನೊಂದು ಕೇಂದ್ರ ಎಂದು ಗುರುತಿಸಿರುವುದನ್ನು ಈ ಹಂತದಲ್ಲಿ ಸ್ಥೂಲವಾಗಿ ಚರ್ಚಿಸಬಹುದು. ಹಸಿವೆ, ಬಡತನ, ಬಡತನದ ಕಾರಣಕ್ಕಾಗಿ ಎದುರಿಸಬೇಕಾಗುವ ನೂರು ಬಗೆಯ ಅವಮಾನಗಳು ಸಾರಾ ಅವರ ಬದುಕಿನ ಶೋಧದ ಪ್ರಮುಖ ಅಂಶಗಳು. ಪರಿಹಾರವಿಲ್ಲದ ಶಾಪದಂತೆ ಕಾಡುವ ಬಡತನ ಮತ್ತು ಹಸಿವೆಗಳು ಮನುಷ್ಯನನ್ನು ಏನಲ್ಲ ಉಪಾಯಗಳನ್ನು ಸೃಷ್ಟಿಸಲು ಪ್ರಚೋದಿಸುತ್ತದೆ. ಎನ್ನುವುದರ ಬಗೆಗೆ ಸಾರಾ ಅವರಿಗೆ ತುಂಬ ಕುತೂಹಲವಿದೆ ಎನ್ನಿಸುತ್ತದೆ. ಕಳ್ಳತನವೋ, ಸುಳ್ಳೋ, ಮೋಸವೋ ಈ ಎಲ್ಲವನ್ನೂ ಸಾರಾ ಅಬೂಬಕ್ಕರ್ ಅವರು ನೈತಿಕ ನೆಲೆಯಲ್ಲಿ ನೋಡಲು ಪ್ರಯತ್ನಿಸುವುದಿಲ್ಲ. ಶುದ್ಧ ಮಾನವೀಯ ನೆಲೆಯಲ್ಲಿ ಪರಿಶೀಲಿಸಿದಾಗ ಈ ಎಲ್ಲವೂ ಮನುಷ್ಯ ಸಹಜ ನಡವಳಿಕೆಗಳಾಗಿ ಅವರಿಗೆ ಕಾಣಿಸುತ್ತವೆ. ಇದನ್ನು ಅಪರಾಧ ಎಂದೇ ಪರಿಗಣಿಸುವುದಾದರೆ, ವ್ಯವಸ್ಥೆಯೇ ಮೂಲ ಅಪರಾಧಿ ಅಲ್ಲವೇ ಎನ್ನಿಸುತ್ತದೆ ಅವರಿಗೆ, ವ್ಯವಸ್ಥೆಯ ಲೋಪದೋಷಕ್ಕೆ ಗುರಿಯಾಗಿ ಮನುಷ್ಯ ಮಾಡಬಹುದಾದ ತಪ್ಪಿಗೆ ಹೊಣೆಗಾರ ವ್ಯಕ್ತಿಯಲ್ಲ, ವ್ಯವಸ್ಥೆ ಎನ್ನುವುದರ ಬಗೆಗೆ ಸಾರಾ ಅವರಿಗೆ ಯಾವ ಅನುಮಾನವೂ ಇಲ್ಲ. ಪ್ರವಾಹ-ಸುಳಿಯ ಎರಡು ಭಾಗಗಳ ಕಾದಂಬರಿಯಲ್ಲಿ ಉದ್ದಕ್ಕೂ ಶೋಧಿತವಾಗುವುದು ಮನುಷ್ಯ ಬದುಕಿನ-ಮಾನವೀಯ ಸಂಬಧಗಳ ಪರಿಳಿತಗಳು ಮತ್ತು ಈ ಪರಿಳಿತಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ಆರ್ಥಿಕತೆ ಮತ್ತು ಬದುಕಿನ ಅಸಂಗತ ಚಲನಶೀಲತೆಗಳು. ಮಮ್ಮುಟಿಯ ಬದುಕಿನ ಪರಿಳಿಗಳ ಮೂಲಕ ಸಾರಾ ಅವರು ಬಡತನ-ಅವಮಾನಗಳು ಪ್ರಚೋದಿಸಬಹುದಾದ ಮಹತ್ವಾಕಾಂಕ್ಷೆ ಮತ್ತು ಕರ್ತೃತ್ವ ಶಕ್ತಿಗಳನ್ನು ಮಾತ್ರ ಗುರುತಿಸಿದ್ದರೆ ಒಬ್ಬ ಸಾಧಾರಣ ಲೇಖಕಿಯಾಗಿ ಉಳಿಯುತ್ತಿದ್ದರು. ಆದರೆ ಈ ಹೊರ ಆವರಣದ ಆಚೆಗೆ ಮನುಷ್ಯನ ಕೈಗೆ ಸಿಕ್ಕಿದೆ ಎಂದುಕೊಳ್ಳುವ ಬದುಕು, ಯಶಸ್ವಿಯೋ, ಸಾರ್ಥಕ ಎಂದು ಬೀಗುತ್ತಿರುವ ಹೊತ್ತಿಗೆ ಬೆರಳ ತುದಿಯಿಂದ

ನುಣುಚಿಕೊಂಡು ಮನುಷ್ಯನೆದುರು ನಿಂತು ನಕ್ಕು ಅಣಕಿಸುವ ಪರಿಯನ್ನು ಸಾರಾಹಿಡಿಯುವ ಪರಿ ಅಸಾಧಾರಣವಾದದ್ದು. ಸೊನ್ನೆಯಿಂದ ಸೊನ್ನೆಗೆ ವೃತ್ತದ ಪರಿಪೂರ್ಣತೆಯಲ್ಲಿ ಚಲಿಸಿದಂತೆ ಕಾಣುವ ಮಮ್ಮುಟಿಯ ಬದುಕಿನ ಮೂಲಕ ಸಾರಾ ಮಾಡಿಸುವ ಬದುಕಿನ ದರ್ಶನ ನಾಟಕೀಯವಾಗಿದ್ದೂ ಸರಳವಾಗಿದೆ ಎನ್ನುವುದೇ ಆ ಕೃತಿಯ ಹೆಚ್ಚುಗಾರಿಕೆಯಾಗಿದೆ.

ಹೆಣ್ಣು ಮತ್ತು ಬದುಕುಗಳನ್ನು ಬರವಣಿಗೆಯ ಕೇಂದ್ರವಾಗಿ ಹೊಂದಿರುವ ಸಾರಾ ಅವರ ಬರವಣಿಗೆ ಇನ್ನೂ ವಿಸ್ತೃತವಾದ ಅಧ್ಯಯನವನ್ನು ಅಪೇಕ್ಷಿಸುತ್ತದೆ.

ಬಾಲ್ಯಜೀವನ

ಕನ್ನಡ ಸರಸ್ವತ ಲೋಕಕ್ಕೆ ಹೊಸದೊಂದು ಕ್ರಾಂತಿಕಾರಕ ಅಲೆಯೂ ದಲಿತ– ಬಂಡಾಯದೊಡನೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದೆ. ಅದುವರೆಗು ನಿರ್ಲಕ್ಷಿಸಲ್ಪಟ್ಟು ಅದುಮಿಟ್ಟು ಧ್ವನಿಗಳು ಕೊರಳೆತ್ತಿದಾಗ ಅಪರಿಚಿತವಾಗಿದ್ದ ಅಜ್ಞಾತನಾಗಿದ್ದ ಮುಸ್ಲಿಂ ಸಂವೇದನೆಗಳು ಮೊದಲಬಾರಿಗೆ ಅಭಿವ್ಯಕ್ತಿ ಕಂಡುಕೊಂಡಿದ್ದರ ಫಲವಾಗಿ ಮುಸ್ಲಿಂ–ಸಮಾಜ–ಸಂಸ್ಥೆಯನ್ನು ಸಾಹಿತ್ಯಲೋಕಕ್ಕೆ ತೆರೆದು ತೋರಿಸುವ ಮೂಲಕ ಒಂದು ಭಿನ್ನ ಸಮಾಜದ ಸಮರ್ಪಕ ಚಿತ್ರಣವನ್ನು ಮಾಡಿಕೊಂಡ ಮುಸ್ಲಿಂ ಬರಹಗಾರ್ತಿಯರಲ್ಲಿ ಸಾರಾ ಅಬೂಬಕ್ಕರ್ ಅವರು ಕನ್ನಡದ ಶ್ರೇಷ್ಠ ಮುಸ್ಲಿಂ ಬರಹಗಾರ್ತಿಯಾಗಿದ್ದಾರೆ ದಿವಂಗತ ಪಿ.ಲಂಕೇಶ್ ಅವರ ಪ್ರೋತ್ಸಾಹದಿಂದ ಮುಸ್ಲಿಂ ಕುಟುಂಬದ ಹಿನ್ನಲೆಯಿಂದ ಬಂದು ಕನ್ನಡ ಸಾಹಿತ್ಯದಲ್ಲಿ ದೃಢವಾಗಿ ಹೆಜ್ಜೆಯಿಟ್ಟು ಮುಂದೆ ಬಂದವರಲ್ಲಿ ಸಾರಾ ಅಬೂಬಕ್ಕರ್ ಒಬ್ಬರಾಗಿದ್ದಾರೆ.

ಪಿ. ಮಹಮ್ಮದ್ ಮತ್ತು ಜೈನಾಬಿ ದಂಪತಿಗಳ ಏಕೈಕ ಸುಪುತ್ರಿಯಾಗಿ ಕಾಸರಗೋಡಿನ ಚಮನಾಡಿಯಲ್ಲಿ ೧೯೩೬ರಂದು ಹುಟ್ಟಿದ ಸಾರಾರವರು ಐದು ಜನ ಸಹೋದರ ಮುದ್ದಿನ ಕಣ್ಮಣಿಯಾಗಿ ಅಜ್ಜ, ಅಜ್ಜಿಯವರ ಪ್ರೀತಿಯ ಪೊಮ್ಮಗಳಾಗಿ ವಾತ್ಸಾಲ್ಯಮಯ ವಾತಾವರಣ ಪ್ರಜ್ಞಾವಂತ ಕುಟುಂಬದಲ್ಲಿ ಕೆಲವೊಂದು ಅಡ್ಡಿ ನಿರ್ಬಂಧಗಳ ನಡುವೆಯೂ ಎಸ್.ಎಸ್. ಎಲ್. ಸಿ. ಪರೀಕ್ಷೆಯನ್ನು ಬರೆದ ಸಾರಾ ಅವರು ಮುಂದೆ ಹೆಚ್ಚಾಗಿ ಓದಲಾಗಲಿಲ್ಲ ಕುಟುಂಬದವರಿಂದ ದೊರೆತ ಅಪಾರ ಪ್ರೋತ್ಸಾಹ ಪ್ರೇರಣೆಗಳಿಂದ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಪಡುತ್ತಿರುವ ಯಾತನಾಮಯ ಜೀವನವನ್ನು ಶೋಷಣೆ, ಅನ್ಯಾಯ, ದೌರ್ಬಲ್ಯ, ದಬ್ಬಾಳಿಕೆಯನ್ನು ತರಗಣ್ಣಿನಿಂದ ನೋಡಿ ಅವರು ನೋವುಗಳಿಗೆ ಸ್ಪಂದಿಸುವ ಕಾರ್ಯಾವನ್ನು ಕಥೆಕಾದಂಬರಿಗಳ ಮೂಲಕ ಕೈಗೊಂಡರು".[೧]

ಸಾರಾ ಅವರು ಮಾಲೆಯಾಳಂ ಮೂಲದವರಾಗಿದ್ದು, ಕನ್ನಡದಲ್ಲಿ ಸಾಹಿತ್ಯ ಕೃಷಿಗೈಯ್ಯುತ್ತಿರುವ ಮುಸ್ಲಿಂ ಲೇಖಕಿಯರಲ್ಲಿ ಅಗ್ರಗಣ್ಯರಾಗಿದ್ದಾರೆ. "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು" ಇವರ ಆತ್ಮಕಥನವಾಗಿದೆ. ಸಾರಾ ಅವರಿಗೆ ಪ್ರಕೃತಿಯೊಂದಿಗಿನ ಅವಿಆಭಾವ ಸಂಬಂಧ ಬಾಲ್ಯದಲ್ಲೇ ಬೆಸೆದುಕೊಂಡಿತ್ತು. ತಮ್ಮ ೨೧ನೇ ವಯಸ್ಸಿನಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಸಾರಾ ಅವರು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ "ಮುಸ್ಲಿಂ ಹೆಣ್ಣಿನ ಸ್ಪಂದನ" ಎಂಬ ತಲೆ ಬರಹದಡಿಯಲ್ಲಿ ಬರೆದ ಹಲವಾರು

ಲೇಖನಗಳ ಮೂಲಕ ರಚನೆಗಳ ಭದ್ರವಾದ ನೆಲೆಯನ್ನು ಕಂಡುಕೊಂಡರು? ಸ್ವ-ವಿವರಗಳನ್ನು ಮನೆತನ, ತಂದೆ-ತಾಯಿ, ಸಹೋದರ ಕೌಟುಂಬಿಕ ಹಿನ್ನಲೆಯನ್ನು ಕಥೆಯ ರೂಪದಲ್ಲಿ ಹಣೆದಿದ್ದಾರೆ ೧೯೮೫ರಲ್ಲಿ "ಸಹನಾ ಎಂಬ ಕಾದಂಬರಿಯನ್ನು ೧೯೯೦ರಲ್ಲಿ "ವಜ್ರಗಳು ಕಾದಂಬರಿಯನ್ನು ಬರೆದಿದ್ದಾರೆ. ಇವುಗಳ ನಂತರ "ತಳ ಬಡದ ದೋಣಿಯಲ್ಲಿ "ಕವನ ವಿರಾಮ" ಸುಳಿಯಲ್ಲಿ ಸಿಕ್ಕವರು 'ಪ್ರವಾಹ -ಸುಳಿ' ಮುಂತಾದ ಕಾದಂಬರಿಗಳು ಪ್ರಕಟವಾದವು "೧೯೮೯' ರಲ್ಲಿ ಚಪ್ಪಲಿಗ್ಗಳು '೧೯೯೨ರಲ್ಲಿ' ಪಯಣ ಮತ್ತು ಇತರ ಕಥೆಗಳು '೧೯೯೭ರಲ್ಲಿ ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಹಾಗೂ ಖೆಡ್ಡಾ ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಜೊತೆಗೆ 'ಅನಾವರಣ' ಹಾಗೇ 'ಲೇಖನಗುಚ್ಛ' ಎಂಬ ಅಂಕಣ ಬರಹಗಳ ಸಂಗ್ರಹಗಳೂ ಪ್ರಕಟವಾಗಿದೆ ಕಥೆ, ಕಾದಂಬರಿ ಲೇಖನಗಳೇ ಅಲ್ಲದೆ ಅನುವಾದ ಸಾಹಿತ್ಯದಲ್ಲೀ ಸಾರಾ ಅವರು ಕೈಯಾಡಿಸಿದ್ದಾರೆ. ಕಮಲದಾಸ್ ಅವರ 'ಮನೋಮಿ' ಬಿ.ಎಂ. ಸುಹರಾ ಅವರ 'ಬಲೆ' ನಾನಿನ್ನು ನಿದ್ರಿಸುವೆ' ಪಿ.ಕೆ. ಬಾಲಕೃಷ್ಣರವರ ಮಾಲಯಳಂ ಭಾಷೆಯ ಕಾದಂಬರಿಗಳನ್ನು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ. ಸಾರಾ ವರಿಗೆ ಸಂದಿಸಿರುವ ಪ್ರಶಸ್ತಿಗಳೆಂದರೆ 'ದಾನಚಿಂತಾಮಣಿ' ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುಪಮ ನಿರಂಜನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಹಾಗೂ ಶ್ರೇಷ್ಠ ಮಹಿಳಾ ಲೇಖಕಿಗೆ ಸಲ್ಲುವ, ಅತ್ತಿಮಬ್ಬೆ ಪ್ರಶಸ್ತಿ ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಭಾರತೀಯ ಭಾಶಾ ಸನ್ಮಾನ ಪ್ರಶಸ್ತಿ ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾರಾ ಅವರ ಶಾಲೆಯ ಹೆಸರು ಸಾರಾ ಬೇಬಿ. ಒಂದೇ ಹೆಣ್ಣು ಮಗು. ಎಲ್ಲರಿಗೂ ಭಾರಿ ಪ್ರೀತಿ. ಅಜ್ಜಿಗೆ ಮತ್ತೆ ಹೇಳುವುದೇ ಬೇಡ. ಅವರು ಸಾರಾ ಬೇಬಿಯನ್ನು ತನ್ನ ಮನೆಯಲ್ಲೇ ಹೆಚ್ಚಾಗಿ ಇರಿಸಿಕೊಂಡು ಅಲ್ಲಿಯೇ ಬೆಳೆದು ಒಂದು ಅಜ್ಜಿ ಸಾಕಿದ ಮಗುವಿನಂತೆ ಬೆಳೆದರು. ನಮ್ಮ ಮನೆಯಲ್ಲೂ ಸಾರಾ ಒಬ್ಬಳೇ ಹೆಣ್ಣು ಮಗುವಾದುದರಿಂದ ಸ್ವಾತಂತ್ರ್ಯ, ಬೇಕಾದಷ್ಟು ಅಕ್ಕರೆ ಇವುಗಳಿಂದ ಯಾವತರದ ಕಷ್ಟಗಳನ್ನು ಅನುಭವಿಸದೆ ಎಲ್ಲರ ಪ್ರೀತಿಗೆ ಪಾತ್ರರಾಗಿ ಬೆಳೆದರು. ನಮ್ಮ ಹಿರಿಯ ಅಣ್ಣನವರು ನಮಗೆಲ್ಲಾ ರೀತಿಯಲ್ಲಿಯೂ ನೆರವಾಗಿದ್ದರು. ತನ್ನ ೨೪ನೇ ವರ್ಷದಲ್ಲಿ ಮದ್ರಾಸಿನ ಲಾ ಕಾಲೇಜಿನಲ್ಲಿ ಕಲಿಯುತ್ತಿರುವಾಗ ರೋಗಭಾದಿತರಾಗಿ ನಿಧನರಾಗಿದ್ದರು. ಅವರು ಇರುವಾಗ ಸಾರಾ ಅವರಿಗೆ ದೊಡ್ಡಣ್ಣ ಎಂದರೆ ಪ್ರಾಣ. ಅಣ್ಣನಿಗೂ ಹಾಗೆಯೇ ಅಕ್ಕನ ಮೇಲೆ ತುಂಬಾ ಪ್ರೀತಿಯಿತ್ತು.

ಒಮ್ಮೆ ತನ್ನ ಅಜ್ಜಿಯವರು ತಮ್ಮ ಮನೆಗೆ ಔತಣಕ್ಕೆ ಬಂದಿದ್ದು, ಅವರು ಹಿಂದೆ ಹೋಗುವಾಗ ಅಕ್ಕನನ್ನು ಕರೆದುಕೊಂಡು ಹೋಗುತ್ತೇನೆಂದು ಅಣ್ಣಂದಿರೊಡನೆ ಒಂದು ಕುದುರೆಗಾಡಿ ತರಲು ಹೇಳಿದರು. ಆದರೆ ಯಾಕೋ ಅಣ್ಣಂದಿರು ಕೇಳಲಿಲ್ಲ. ಅದಕ್ಕೆ ಸಿಟ್ಟು ಮಾಡಿ ಅಕ್ಕನನ್ನು ಎತ್ತಿ ಕಂಕುಳಲ್ಲಿ ಕೂರಿಸಿ, ಕಾಲಿನಲ್ಲಿ ಆ ಕಾಲದಲ್ಲಿ ಮರದ ಮೆಟ್ಟನ್ನು ಹಾಕುತ್ತಿದ್ದವರು ಎರಡು ಕಿಲೋ ಮೀಟರಿನಷ್ಟು ನಡೆದುಕೊಂಡೇ ಹೋದರಂತೆ. ಆ ಮರದ ಮೆಟ್ಟನ್ನೂ ಹಾಕಿ ಸದಾ ಅವರಿಗೆ ಐದು ವರ್ಷವಾದಾಗ ಚಮನಾಡಿನಲ್ಲಿ ಅಜ್ಜಿಯ ಮನೆ ಹತ್ತಿರವಿರುವ ಮಲೆಯಾಳಂ ಕಲಿಸುವ ಶಾಲೆಗೆ ಸೇರಿಸಿದರು. ಅಲ್ಲಿಯೇ ಅರಬಿಕ್ ಕುರಾನ್ ಕೂಡ ಕಲಿಯುತೊಡಗಿದರು.

ನಮ್ಮ ತಂದೆಯವರು ವಿದ್ಯಾವಂತರು ಮತ್ತು ಕಾಸರಗೋಡಿನ ಪ್ರಶಸ್ತ ವಕೀಲರಾಗಿದ್ದರು. ಅವರಿಗೆ ಸಾರಾ ಅವರು ಬರೇ ಮಲೆಯಾಳ ಕಲಿತರೆ ಸಾಲದೆಂದು ತೋರಿತು. ಹಾಗೆ ಅವರು ಸಾರಾ ಅವರನ್ನು ಕಾಸರಗೋಡಿನಲ್ಲಿದ್ದ ಹುಡುಗಿಯರ ಶಾಲೆಯಲ್ಲಿ ಕನ್ನಡ ಕಲಿಯಲು ಸೇರಿಸಿದರು. ಅಲ್ಲಿಂದ ಸಾರಾ ಅವರು ಕನ್ನಡ ಕಲಿಯತೊಡಗಿದರು. ಆಗಿನ ನಮ್ಮ ಮುಸ್ಲಿಮರ ಪರಿಸ್ಥಿತಿಯಲ್ಲಿ ಹೆಣ್ಣುಮಕ್ಕಳು ಶಾಲೆಗೆ ಹೋಗಿ ಕಲಿಯಬಾರದು. ಹತ್ತು ವರ್ಷವಾಗುವುದರೊಳಗೆ ಮದುವೆ ಮಾಡಿಸಿ ಕಳುಹಿಸಬೇಕಾಗಿತ್ತು. ಆದರೆ ನಮ್ಮ ತಂದೆಯವರು ಇಂತಹ ವಿಷಯಗಳಲ್ಲಿ ಎದುರು ಅಭಿಪ್ರಾಯ ವ್ಯಕ್ತಪಡಿಸಿ ಸಾರಾ ಅವರನ್ನು ಕಾಸರಗೋಡಿನಲ್ಲಿರುವ ಮಿಶನ್ ಶಾಲೆಗೆ ಸೇರಿಸಿದರು. ಶಾಲೆಯು ಸುಮಾರು ತಮ್ಮ ಮನೆಯ ಹತ್ತಿರದಲ್ಲೇ ಇತ್ತು ಆಗ ನಾವು ಬಾಡಿಗೆಯ ಮನೆಯಲ್ಲಿ ವಾಸಿಸುತ್ತಿದ್ದೆವು. ತಮ್ಮ ಸುತ್ತಮುತ್ತಲಿನವರೆಲ್ಲಾ ಹಿಂದುಗಳಾಗಿದ್ದರು. ಹತ್ತಿರದ ಮುಸ್ಲಿಂ ಮನೆಯು ಸುಮಾರು ಒಂದು ಕಿಲೋಮೀಟರ್ ದೂರದಲ್ಲಿತ್ತು. ಸುತ್ತುಮುತ್ತಲಿನವರು ಕೆಲವು ನಾಯರ್ ಕುಟುಂಬಗಳನ್ನು ಬಿಟ್ಟರೆ, ಮತ್ತೆಲ್ಲರೂ ಗೌಡ ಸಾರಸ್ವತರೂ (ಕೊಂಕಣಿಯವರು) ಬ್ರಾಹ್ಮಣರೂ ಆಗಿದ್ದರು. ಆದರೆ ಆಗಿನ ಜನರು ನಮ್ಮನ್ನು ಮುಸ್ಲಿಮರೆಂದು ಬೇರೆಯಾಗಿ ಕಾಣುತ್ತಿರಲಿಲ್ಲ. ನಮ್ಮ ಅಣ್ಣಂದಿರ ಮತ್ತು ಸಾರಾ ಅವರ ಸ್ನೇಹಿತರೆಲ್ಲರೂ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ತಾಯಿ ಕೊಟ್ಟದ್ದನ್ನು ತಿನ್ನುತ್ತಿದ್ದರು. ನಾವೂ ಅವರ ಮನೆಗೆ ಹೋಗುತ್ತಿದ್ದೆವು ಯಾವ ಭೇದ ಭಾವವೂ ಇರಲಿಲ್ಲ.

ಸಾರಾ ಅವರು ಒಂಭತ್ತನೇ ಕ್ಲಾಸಿಗೆ ಪಾಸಾದಾಗ ನಮ್ಮ ಮಾವ ಸಮೇತ ಎಲ್ಲರೂ ಇನ್ನು ಶಾಲೆಗೆ ಕಳುಹಿಸುವುದು ಬೇಡ ಎಂದಿದ್ದರು. ಆದರೆ ತಂದೆಯವರು ಅದನ್ನ್ಯಾವುದನ್ನು ಕೇಳದೆ ಸಾರಾ ಅವರನ್ನು ಶಾಲೆಗೆ ಕಳುಹಿಸಿದರು. ಆಗ ನಾನು ಆರನೇ ಕ್ಲಾಸಿನಲ್ಲಿ ಮಲೆಯಾಳಂ ಶಾಲೆಯಲ್ಲಿ ಕಲಿಯುತ್ತಿದ್ದೆ. ಸಾರಾ ಅವರು ಹತ್ತನೇ ಕ್ಲಾಸಿಗೆ ಪಾಸಾದಾಗ ನಾವು ಬಾಡಿಗೆ ಮನೆ ಬಿಟ್ಟು ಸ್ವಂತ ಮನೆಗೆ ಒಕ್ಕಲಾದೆವು. ಅಲ್ಲಿಂದ ಶಾಲೆಗೆ ಸುಮಾರು ಒಂದು ಕಿಲೋಮೀಟರಿನಷ್ಟು ದೂರವಿತ್ತು. ಆದುದರಿಂದ ನನ್ನನ್ನು ಸಹಾ ಮಿಶನ್ ಶಾಲೆಗೆ ಸೇರಿಸಲಾಯಿತು. ಅಕ್ಕನೊಡನೆ ಗಾರ್ಡ್ ಆಗಿ ಶಾಲೆಗೆ ಹೋಗಲು ಮಲೆಯಾಳ ಕಲಿತ ನಾನು, ಕನ್ನಡದ 'ಅರ' 'ದನ' ಕೂಡಾ ಕಲಿಯದ ನಾನು ಕನ್ನಡ ಮೀಡಿಯಂ ಶಾಲೆಗೆ ಸೇರಿ ಕನ್ನಡ ಕಲಿಯತೊಡಗಿದೆ. ಅದೂ ೭ನೇ ಕ್ಲಾಸಿನಿಂದ.

ಸಾರಾ ಅವರು ಕಲಿಯಲು ಜಾಣರಾಗಿದ್ದರು. ಹಾಗೆಯೇ ಆಟಗಳಲ್ಲಿಯೂ ಚುರುಕಾಗಿದ್ದರು. ಎಷ್ಟು ಜಾಣರಾಗಿದ್ದರೂ ಏನು ಮಾಡುವುದು? ಎಸ್.ಎಸ್.ಎಲ್.ಸಿಯಲ್ಲಿ ಕೊನೆಗೊಂಡಿತು.

ಸಾರ ಅವರ ತಂದೆಯವರು ಯಾವಾಗಲೂ ಓದುತ್ತಾ ಇರುವವರು. ೧೯೩೦-೪೦ರ ಕಾಲದಲ್ಲಿ Time, Life, Reader's Digest ಮತ್ತು ಅನೇಕ Magazine ಗಳಿಗೆ ಚಂದಾದಾರರಾಗಿದ್ದು ಮಾತ್ರವಲ್ಲದೆ, ಇಂಗ್ಲೀಷ್ ಕಾದಂಬರಿಗಳನ್ನು ಸ್ವಂತವಾಗಿ ಖರೀದಿ ಮಾಡಿಕೊಂಡು ಮನೆಯಲ್ಲೇ ಒಂದು ಲೈಬ್ರರಿಯನ್ನೇ ಮಾಡಿದ್ದರು. ಈ ತೀಕ್ಷ್ಣ ಓದುವ ಅಭ್ಯಾಸ ನಮಗೆ ಯಾರಿಗೂ ಸಿಗದಿದ್ದರೂ ಸಾರಾ ಅವರಿಗೆ ಸಿಕ್ಕಿತು. ಅವರ ಎಸ್.ಎಸ್.ಎಲ್.ಸಿ ಆದ ಮೇಲೆ ಕಾಸರಗೋಡು ಪಂಚಾಯತ್ ಲೈಬ್ರರಿಯಿಂದ ನಾನು

ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ. ಆದರೆ ಕೆಲವೊಮ್ಮೆ ತನಗೆ ಬೇಕಾದ ಪುಸ್ತಕ ಸಿಗದಿದ್ದರೆ ನನ್ನನ್ನು ಬೈಯುವುದೂ ಸಾಧಾರಣವಾಗಿತ್ತು.

೧೯೫೩ ಅಕ್ಟೋಬರಲ್ಲಿ ಸಾರಾ ಅವರಿಗೆ ಮದುವೆಯಾಯಿತು. ಹಾಗಾಗಿ ನಮ್ಮನ್ನೆಲ್ಲಾ ಬಿಟ್ಟು ತನ್ನ ಭಾವನೊಡನೆ ಜೀವನ ನಡೆಸಲು ಶುರು ಮಾಡಿದರು. ಮದುವೆಯಾದ ಮೇಲೆಯೂ ಹೆಚ್ಚಾಗಿ ಅವರು ತಮ್ಮ ಮನೆಯಲ್ಲೇ ಇರುತ್ತಿದ್ದರು. ಒಮ್ಮೆ ಭಾವನವರಿಗೆ ಪಾಲ್ಘಾಟಿಗೆ ಟ್ರಾನ್ಸ್‌ಫರ್ ಆಗಿ ನಮಗೆಲ್ಲಾ ತುಂಬಾ ಬೇಸರವಾಯಿತು. ಅಲ್ಲಿ ಇಲ್ಲಿ ಟ್ರಾನ್ಸ್‌ಫರ್ ಆಗಿ ತಮಗೆಲ್ಲಾ ತುಂಬಾ ಬೇಸರವಾಯಿತು. ಅಲ್ಲಿ ಇಲ್ಲಿ ಟ್ರಾನ್ಸ್‌ಫರ್ ಆಗಿ ಕೊನೆಗೆ ಭಾಷಾವಾರು ಪ್ರಾಂತ್ಯವಾಗುವಾಗ ನಮ್ಮ ಭಾವನವರು ಕರ್ನಾಟಕಕ್ಕೆ ಕೊಟ್ಟು ಬೆಂಗಳೂರು, ಮಂಗಳೂರು ಮತ್ತಿತರ ಸ್ಥಳಗಳಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡಿ ಕೊನೆಗೆ ಮಂಗಳೂರಿನಲ್ಲಿ ರಿಟಯರ್ ಆಗಿ ಸ್ಥಿರವಾಗಿ ವಾಸವಾದರು. ಅವರು ಬೆಂಗಳೂರಲ್ಲಿರುವಾಗ ಸಾರಾ ಬರೆಯುವುದಕ್ಕೆ ಶುರು ಮಾಡಿದರು. ತಂದೆಯವರ ಆಶೀರ್ವಾದ ಮತ್ತು ಬೆಂಬಲ ಮತ್ತು ಸಲಹೆಗಳು ಸಿಕ್ಕಿದ್ದರಿಂದ ಸಾರಾ ಅವರು ಬರಹದಲ್ಲಿ ಪ್ರಖ್ಯಾತರಾದರು.

“ಸಾರಾ ಅವರು ಇಸ್ಲಾಂ ಮತವನ್ನೂ ಸರಿಯಾಗಿ ಅರ್ಥ ಮಾಡಿ ಕೊಂಡಿದ್ದಾರೆ. ನಮ್ಮ ಮುಸ್ಲಿಮರಲ್ಲಿರುವ ಕೆಲವು ಅನಾಚಾರಗಳು ಮತ್ತು ಅಧಾರ್ಮಿಕ ಆಚಾರಗಳನ್ನು ಅವರು ಖಂಡಿಸಿದ್ದಾರೆ ಮತ್ತು ಬಯಲಿಗೆ ತಂದಿದ್ದಾರೆ. ಅದರಲ್ಲಿ ಒಂದನ್ನು ‘ಚಂದ್ರಗಿರಿಯ ತೀರದಲ್ಲಿ’ ಎಂಬ ಪುಸ್ತಕದಲ್ಲಿ ಅವರು ತೋರಿಸಿಕೊಟ್ಟಿದ್ದಾರೆ. ಇಂತಹ ಹಲವು ಕೆಟ್ಟ ಆಚಾರಗಳು ತಮ್ಮ ಮತದಲ್ಲಿ ಇನ್ನೂ ಇವೆ. ಆದರೆ ಅದನ್ನೆಲ್ಲಾ ಹೊರಗೆಡಹಿದರೆ ಮತವನ್ನು ಅವಹೇಳನ ಮಾಡುತ್ತಾರೆ ಎಂದು ಕೆಲವರು ಅದನ್ನು ಆಕ್ಷೇಪಿಸುತ್ತಾರೆ”.[೨]

‘ಚಪ್ಪಲಿಗಳು’ ಸಣ್ಣಕಥೆ ಪ್ರಕಟವಾಗಿತ್ತು. ತನ್ನನ್ನು ಬಹುವಾಗಿ ತಟ್ಟಿದ ಕಥೆ ಅದು. ಆ ಕಾಲದ ಮುಸ್ಲಿಂ ಸಮುದಾಯದ ಗಂಡಸರಿಗೆ ತಮ್ಮ ಹೆಂಗಸರ ಬಗ್ಗೆ ಇರುವ ಹಗುರ ಭಾವನೆ ಹೇಗಿತ್ತು ಎಂದರೆ ಅವರು ಕಾಲಿನ ಚಪ್ಪಲಿಗೆ ಸಮಾನರು! ಚಪ್ಪಲಿಯನ್ನು ಎಲ್ಲಿಡಬೇಕೋ ಅಲ್ಲಿಯೇ ಇಡಬೇಕು ಎನ್ನುವವರು. ಕಥೆಯಲ್ಲಿ ಕಥಾನಾಯಕಿ ಸಮೀರಾ ತನ್ನ ಪತಿಯೊಂದಿಗೆ ಮಂಗಳೂರು ತಿರುಗಿದ್ದು, ಸಿನಿಮಾ, ಹೋಟೆಲ್‌ಗೆ ಹೋಗಿ ಮಜಾ ಮಾಡಿದ್ದು ತಿಳಿದು ಕೋಪದಲ್ಲಿ ಗುಡುಗಿದ ಅವಳ ತಂದೆ ಅಳಿಯನ ಮೇಲೆ ರೇಗಾಡುತ್ತ, “ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆ ಮೇಲಿಟ್ಟರೆ ಹೇಗೆ?” ಎನ್ನುವುದೂ, ಆಗ ಆಧುನಿಕ ಮನೋಭಾವದ ಅವಳ ಪತಿ, “ನಾನು ಚಪ್ಪಲಿಗೆ ಹುಟ್ಟಲಿಲ್ಲ. ನನಗೆ ಜನ್ಮ ನೀಡಿದವಳು ಒಂದು ಹೆಣ್ಣು” ಎನ್ನುವುದು ತುಂಬ ಮಾರ್ಮಿಕವಾಗಿದೆ. ತಿಳುವಳಿಕೆಯಿರುವ ಆತ ಸಮೀರಳ ಸುಖ ಸಂತೋಷ, ಆರೋಗ್ಯಕ್ಕಾಗಿ ಕೊನೆಗೆ ಅವಳ ಜೊತೆಯೇ ಉಳಿಯುವ ನಿರ್ಧಾರ ಮಾಡುವ ಮೂಲಕ ಸುಖಾಂತ್ಯವಾದ, ಆದರೆ ತುಂಬ ಮಾರ್ಮಿಕವಾದ ಈ ಕಥೆ.”[೩]

ಈ ಕಾರಣದಿಂದಲೇ ಸಾರಾಗೆ ತಮ್ಮ ಸಮುದಾಯದ ಅಥವಾ ಇನ್ನಾವುದೇ ಸಮಾಜದ ಹೆಣ್ಣುಮಕ್ಕಳು ಶೋಷಣೆಯಿಂದ ಮುಕ್ತರಾಗಲು ಮೊದಲು ವಿದ್ಯಾವಂತರಾಗಬೇಕು. ಸ್ವಾವಲಂಬಿಗಳಾಗಬೇಕು, ಆರ್ಥಿಕವಾಗಿಯೂ ಸಬಲರಾಗಬೇಕೆಂಬ ಕಾಳಜಿಯಿದೆ. ಅದು ಅವರ ಮಾತು, ಭಾಷಣದಲ್ಲೂ ವ್ಯಕ್ತವಾಗುವ ಅಂಶ.

ಸಾರಾ ಈವರೆಗೆ ಎಂಟಕ್ಕಿಂತ ಹೆಚ್ಚು ಕಾದಂಬರಿಗಳನ್ನು, ನಾಲ್ಕು ಕಥಾಸಂಕಲನಗಳನ್ನು, ಅನೇಕ ಮಲೆಯಾಳಿ ಕಾದಂಬರಿಗಳನ್ನು ಕನ್ನಡಕ್ಕೂ ಅನುವಾದ ಮಾಡಿದ್ದಾರೆ. ಇತ್ತೀಚೆಗೆ ಬಂದ[ಮಲೆಯಾಳಂ ಮೂಲ–ಆರ್.ಬಿ.ಶ್ರೀಕುಮಾರ] ಹೊಸ ಅನುವಾದಿತ ಕೃತಿ 'ಧರ್ಮದ ಹೆಸರಿನಲ್ಲಿ' ತುಂಬ ಚಿಂತನೆಗೆ ಹಚ್ಚುವ ಕೃತಿ. ಎರಡು ಲೇಖನ ಸಂಕಲನಗಳು, ಅಮೆರಿಕಾ ಪ್ರವಾಸ ಕುರಿತ ಒಂದು ಕೃತಿ. ಇವಲ್ಲದೆ ಆಕಾಶವಾಣಿಯಿಂದಲೂ, ದೂರದರ್ಶನದಿಂದಲೂ ಕಥೆ, ಚಿಂತನ, ಭಾಷಣದ ಪ್ರಸಾರ. ನಿರಂತರ ಸಾಹಿತ್ಯದ್ದೇ ಚಿಂತನೆ..

೨.೨ ಗಂಗಾ ಪಾದೇಕಲ್ಲು

ಇತ್ತೀಚಿನ ಮೂವತ್ತು ವರ್ಷಗಳ ಮಹಿಳಾ ಸಾಹಿತ್ಯವಲಯದಲ್ಲಿ ಗಂಗಾ ಪಾದೇಕಲ್ಲು ಹೆಸರು ಪರಿಚಿತವಾದುದು. ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಸಾಹಿತಿಗಳಾದ ಕೋಟಶಿವರಾಮ ಕಾರಂತರು ಹಾಗೂ ನಿರಂಜನ ಅವರ ಆಡುಂಬೊಲವಾದ ಪುತ್ತೂರು ಇವರ ಹುಟ್ಟೂರು. ಸಾಗರ– ಸಹ್ಯಾದ್ರಿಯ ಮಧ್ಯಬಿಂದುವಿನಂತಿರುವ ಪುತ್ತೂರು ಆಗ ಸುತ್ತಲಿನ ಹತ್ತೂರಿನ ಮಧ್ಯೆ ಇರುವ ಪುಟ್ಟಪೇಟೆ. ಗಂಗಾರತ್ನ ಎಂಬ ಮೂಲ ಹೆಸರಿನ ಇವರ ತಂದೆ ಪುತ್ತೂರಿನ ಹೆಸರಾಂತ ಮುಳಿಯ ಕುಟುಂಬದ ಮುಳಿಯ ಕೇಶವ ಭಟ್ಟರ ತಾಯಿ ಮೂಕಾಂಬಿಕಾ ಅಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರಲ್ಲಿ ಒಬ್ಬರಾಗಿದ್ದಾರೆ. ಧ್ರುವ ಚರಿತ್ರೆ, ಹರಿಲೀಲಾಮೃತ, ದ್ರೌಪದಿ, ವಸ್ತ್ರಾಪಹರಣ ಪ್ರಸಂಗಗಳ ಹಾಡುಗಳು ಅವರ ರಚನೆಗಳಾಗಿವೆ. ಅವರು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದರು.

ಮುಳಿಯ ಕೇಶವ ಭಟ್ಟ ಹಾಗೂ ಸರಸ್ವತೀ ಅಮ್ಮ ಅವರಿಗೆ ಮುಕಾಂಬಿಕಾ, ಕೃಷ್ಣ, ದೇವಕಿ, ಗೌರಿ, ಗಂಗಾಧರ, ಉದಯರತ್ನ, ಮತ್ತು ತಿಮ್ಮಪ್ಪಯ್ಯ ಎಂಬ ಒಂಭತ್ತು ಮಕ್ಕಳಲ್ಲಿ ಗಂಗಾರತ್ನ, ಏಳನೆಯ ಮಗಳಾಗಿದ್ದಾರೆ. ಕೃಷ್ಣ ಮುಂದೆ ಮುಳಿಯಕೃಷ್ಣ ಭಟ್ಟ ಎಂಬ ಹೆಸರಿನಿಂದ ವಿದ್ವಾಂಸರ ವಲಯದಲ್ಲಿ ಪರಿಚಿತರಾದರು.

"ತಂದೆ ಕೇಶವ ಭಟ್ಟ ಅವರು ಆಗಿನ ಕಾಲದಲ್ಲಿ ನಿತ್ಯ ಪತ್ರಿಕೆ ತರಿಸಿ ಓದುತ್ತಿದ್ದ ಪ್ರಜ್ಞಾವಂತ ಪ್ರಜೆಯಾಗಿದ್ದರು. ತಾಯಿ ಸರಸ್ವತೀ ಅಮ್ಮನವರು ಅಜ್ಜಿ ಮೂಕಾಂಬಿಕಾ ಅಮ್ಮನವರು ಹಾಡುಗಳನ್ನು ರಾಗವಾಗಿ ಹಾಡಬಲ್ಲವರಾಗಿದ್ದರು. ಹೀಗೆ ಮೂಕಾಂಬಿಕಾ ಅಮ್ಮನವರ ಸಾಹಿತ್ಯದ ಒಲವು, ಸರಸ್ವತೀ ಅಮ್ಮನ ಪ್ರೀತಿ, ಕೇಶವ ಭಟ್ಟರ ಓದಿನ ಮೇಲಿನ ಅಕ್ಕರೆ, ಅಣ್ಣ ಕೃಷ್ಣರ ಭಟ್ಟರ ಸಾಹಿತ್ಯ ಜ್ಞಾನ ಇವು ಗಂಗಾರತ್ನ ಅವರು ಬಾಲ್ಯದಲ್ಲೇ ಸಾಹಿತ್ಯದ ಬಗ್ಗೆ ಆಸಕ್ತಿ ತೋರಲು ಕಾರಣವಾಗಿದೆ"[೪].

೧೯೫೦ರ ದಶಕ ಸ್ವಾತಂತ್ರ್ಯ ಸಿಕ್ಕ ಹೊಸತು. ಸಾರ್ವತ್ರಿಕ ಶಿಕ್ಷಣ ಕಡ್ಡಾಯವಾಗಿದ್ದರೂ ಇಂದಿನ ಯಾವುವೇ ಅನುಕೂಲಗಳಿರಲಿಲ್ಲ. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದೆಂದರೆ ತುಂಬಿದ ಕುಟುಂಬಗಳಲ್ಲಿ ಅದರಲ್ಲೂ ಆರ್ಥಿಕ ಅನುಕೂಲಗಳಿಲ್ಲದ ಬ್ರಾಹ್ಮಣ ಕುಟುಂಬಗಳಲ್ಲಿ ಮರ್ಯಾದೆ ಎನಿಸುತ್ತಿರಲಿಲ್ಲ. ಸ್ವರ್ಣ ವ್ಯಾಪಾರವನ್ನೇ ಮಾಡುತ್ತಿದ್ದರೂ ಕೇಶವ ಭಟ್ಟರು ಆರ್ಥಿಕವಾಗಿ ಸದೃಢವಾಗಿರಲಿಲ್ಲ. ತುಂಬಿದ ಕುಟುಂಬದಲ್ಲಿ ಹೊಟ್ಟೆಗೆ ಬಟ್ಟೆಗೆ ಕೊರತೆ ಇಲ್ಲದೆ, ನೆಮ್ಮದಿಯಿಂದ ಬಾಳಬಹುದಾದಷ್ಟು ಸಂಪಾದನೆಯಷ್ಟೇ ಇತ್ತು. ಆಗಿನ ಕಾಲದಲ್ಲಿ ಮೇಲ್ವರ್ಗದ, ಮೇಲ್ಜಾತಿಯ ಹೆಣ್ಣು ಮಕ್ಕಳನ್ನು ಮಾತ್ರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿದ್ದರು. ಉಳಿದಂತೆ ಹೆಣ್ಣು ದೊಡ್ಡವಳಾದಳೆಂದರೆ ಮನೆಯಿಂದ ಹೊರಡುವುದು ಅವಳ ಮದುವೆಯ ದಿಬ್ಬಣದೊಂದಿಗೆ ಎಂದೇ ನಂಬಿಕೆ ಇತ್ತು. ಗಂಗಾರತ್ನ ಅವರ ಮನೆಯ ಸ್ಥಿತಿ ಇದಕ್ಕಿಂತ ಹೊರತೇನೂ ಆಗಿರಲಿಲ್ಲ. ಕೇಶವ ಭಟ್ಟರೂ ತಮ್ಮ ಮಕ್ಕಳಿಗೆ ಆಗಿನ ಕಾಲದ ಸಂಪ್ರದಾಯದಂತೆ ಶಿಕ್ಷಣ ಕೊಡಿಸಿದ್ದರು. ಏಳನೆಯ ತರಗತಿಯವರೆಗೆ ಶಾಲೆಗೆ ಹೋದ ಗಂಗಾರತ್ನ ಪಬ್ಲಿಕ್ ಪರೀಕ್ಷೆ ಆರಂಭವಾಗುವ ದಿನವೇ ಋತುಮತಿಯಾಗಿ ಮನೆಯ ಹೊರಗಿನ ಜಗಲಿಯಲ್ಲಿ ಕುಳಿತುಕೊಳ್ಳಬೇಕಾದುದರಿಂದ ಶಿಕ್ಷಣವೂ ಅವರಿಂದ ಹೊರಗಾಯಿತು. ಆಗಿನ ಕಾಲದಲ್ಲಿ ಶಾಲೆಗೆ ಸೇರಿಸುವಾಗಲೇ ಏಳೋ– ಎಂಟೋ ವರ್ಷಗಳಾಗುತ್ತಿದ್ದವು. ಹದಿಮೂರು–ಹದಿನಾಲ್ಕು ವರ್ಷಗಳಿಗೆ ಋತುಮತಿಯಾದರೆ ಅಲ್ಲಿಗೆ ಮನೆಯೇ ಗತಿಯಾಗುತ್ತಿತ್ತು.

ಶಾಲೆಯಲ್ಲಿ ಗಂಗಾರತ್ನಳ ಓದನ್ನು ಮೆಚ್ಚಿ ಬೆನ್ನು ತಟ್ಟಿದವರು ಸುನಂದಮ್ಮ ಟೀಚರ್. ಹಾಗೆಯೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದವರು ದೇವಪ್ಪಯ್ಯ ಮಾಸ್ಟ್ರು. ಹೆಣ್ಣು ಮಕ್ಕಳು ವೇಷಹಾಕಿ ನಾಟಕ, ನೃತ್ಯ ಮಾಡುತ್ತಾ ವೇದಿಕೆಯೇರುವುದು ಆಗಿನ ಕಾಲಕ್ಕೆ ಅಪರಾಧ ಎನಿಸಿತ್ತು. ಶಾಲಾ ವಾರ್ಷಿಕೋತ್ಸವದಲ್ಲಿ "ಯಾರೆಲ್ಲ ಡಾನ್ಸ್ ಮಾಡುತ್ತೀರಿ? ಎಂಬ ಶಿಕ್ಷಕರ ಪ್ರಶ್ನೆಗೆ ಸಹಜ ಆಸೆಯಿಂದ ಬಾಲಕಿ ಗಂಗಾ ಕೈ ಎತ್ತಿದ್ದಳು. ಸಂಜೆ ಮನೆಗೆ ಬಂದು ಅದನ್ನು ಹೇಳಿದಾಗ ಅದೆಲ್ಲ ಹೆಣ್ಣು ಮಕ್ಕಳಿಗೆ ಯಾಕೆ? ಎಂದು ತಂದೆ ತಾಯಿ ಇಬ್ಬರಿಂದಲೂ ವಿರೋಧ ವ್ಯಕ್ತವಾಯಿತು. ಗಂಗಾರತ್ನಳಿಗೆ ತಾನೇನು ಅಪರಾಧ ಮಾಡಿದ್ದೇನೆ ಎಂದು ಗೊತ್ತೇ ಆಗಲಿಲ್ಲ. ಮರುದಿನ ಬೆಳಗ್ಗೆ ತಮ್ಮ ಮನೆಯ ಸಮೀಪದಲ್ಲೇ ಮನೆ ಮಾಡಿದ್ದ ದೇವಪ್ಪಯ್ಯ ಮಾಸ್ತರ್ ಅವರ ಮನೆಗೆ ಹೋದ ಕೇಶವ ಭಟ್ಟರು ನೃತ್ಯದಿಂದ ತಮ್ಮ ಮಗಳ ಹೆಸರನ್ನು ತೆಗೆದು ಹಾಕುವಂತೆ ವಿನಂತಿಸಿದ್ದರು. ಆದರೆ ಮಕ್ಕಳ ಮನಸ್ಸನ್ನು ನೋಯಿಸಬಾರದು. ಅವರು ಡ್ಯಾನ್ಸ್ ಮಾಡಿದರೆ ತಪ್ಪೇನೂ ಇಲ್ಲ. ಎಂದು ಮಾಸ್ತರ್ ತಂದೆಯನ್ನು ಒಪ್ಪಿಸಿದರು. ಗಂಗಾರತ್ನ ಅವರು ಶಾಲಾ ವಾರ್ಷಿಕೋತ್ಸವದಲ್ಲಿ ಮಾತ್ರವಲ್ಲ. ತಮ್ಮ ಈವರೆಗಿನ ಬದುಕಿನಲ್ಲಿ ಮಾಡಿದ ಏಕೈಕ ಡ್ಯಾನ್ಸ್ ಆದಾಯಿತು.

ಗಂಗಾರತ್ನ ಅವರ ಶಾಲೆಯ ದಿನಗಳು ಬಹಳ ಸುಂದರವಾಗಿದ್ದವು. ಅಣ್ಣಂದಿರೂ ಅದೇ ಶಾಲೆಗೆ ಹೋಗುತ್ತಿದ್ದರಾದರೂ ತಂಗಿಯನ್ನು ತಮ್ಮೊಂದಿಗೆ ಕರೆದೊಯ್ದರೆ ಸ್ನೇಹಿತರ ಜೋಂಗಿಗೆ ಸಿಗಬೇಕಾಗುತ್ತದೆ ಎಂದು ಬಿಟ್ಟೇ ಹೋಗುತ್ತಿದ್ದರು. ಇದು 'ಕೂಸು' ಅವು 'ಮಾಣಿಗಳು', ಈ 'ಕೂಸ'ನ್ನು ಆ 'ಮಾಣಿಗಳು'

ಶಾಲೆಗೆ ಬಿಟ್ಟು ಹೋದವರೆ ಈ ಕೂಸು ಬೇರೆ ಕೂಸುಗಳೊಂದಿಗೆ ಶಾಲೆಗೆ ಹೋಗುತ್ತಿತ್ತು. ಶಾಲೆಗೆ ಹೋಗಿ ಬರುವಾಗೆಲ್ಲಾ ಶಾಲೆಯದ್ದೇ ಸುದ್ದಿ ಬಾಯಿ ತುಂಬಾ ಮಾತಾಡುತ್ತಿದ್ದವು.

ಶಾಲೆ ಬಿಟ್ಟ ಬಳಿಕ ಗಂಗಾರತ್ನಳಿಗೆ ಮನೆಯಲ್ಲಿ ಓದುವುದು ಮಾತ್ರ ಕೆಲಸ. ತಂದೆ ಕೇಶವ ಭಟ್ಟರು ಓದುವ ಆಸಕ್ತಿ ಇದ್ದವರು. ಅಣ್ಣ ಕೃಷ್ಣ ಭಟ್ಟ ಪುಸ್ತಕಗಳನ್ನು ಮನೆಗೆ ತಂದುಕೊಡುತ್ತಿದ್ದರು. ಅಣ್ಣ ಕೃಷ್ಣಭಟ್ಟ ಆಗಲೇ ಬರೆಯುತ್ತಿದ್ದು, ಅವರ ಒಂದು ಕಥಾಸಂಕಲನ ಪ್ರಕಟವಾಗಿತ್ತು. ಕೋಟ ಶಿವರಾಮ ಕಾರಂತರು ಸ್ಥಾಪಿಸಿದ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದ ಅವರು ಮನೆಗೆ ಸಾಕಷ್ಟು ಪುಸ್ತಕಗಳನ್ನು ತರುತ್ತಿದ್ದರು. ಶಾಲೆಯ ದಿನಗಳಲ್ಲಿ ಚಂದಮಾಮ, ಬಾಲಮಿತ್ರಗಳು ಗಂಗಾರತ್ನ ಅವರ ಭಾವಕೋಶಗಳನ್ನು ಉದ್ದೀಪನಗೊಳಿಸಿದ್ದವು. ಐದನೇಯ ತರಗತಿಯಲ್ಲಿದ್ದಾಗಲೇ ತ್ರಿವೇಣಿಯವರ ದೂರದಬೆಟ್ಟ ಕಾದಂಬರಿ ಓದಿ ಮುಗಿಸಿದ್ದರು. ಶಾಲೆ ಬಿಟ್ಟ ಬಳಿಕ ಓದುಬಿಟ್ಟು ಬೇರೆನೂ ಮಾಡಲಿಲ್ಲ. ರವೀಂದ್ರನಾಥ ಟಾಗೋರ್, ಹರಿಶ್ಚಂದ್ರ, ಗಳಗನಾಥರ ಕೃತಿಗಳನ್ನು ಕುತೂಹಲದಿಂದ ಓದಿದ್ದರು. ಎನ್. ನರಸಿಂಹಯ್ಯ ಅವರ ಪುರುಷೋತ್ತಮನ ಸಾಹಸಗಳು ಆಗ ಒಂದೂ ಬಿಡದೆ ಓದಿದ್ದರು. ಅಣ್ಣ ಶ್ಯಾಮ ಇವರೊಂದಿಗೆ ಓದುವುದಕ್ಕೆ ಸ್ಪರ್ಧೆ ನೀಡುತ್ತಿದ್ದುದರಿಂದ ಯಾವ ಪುಸ್ತಕವನ್ನು ಯಾರು ಮೊದಲು ಓದಿ ಮುಗಿಸಿದರು ಎನ್ನುವುದು ತುಂಬಾ ಮುಖ್ಯವಾಗಿತ್ತು. ಆದರೆ ಈ ಓದು ಅಷ್ಟಕ್ಕೇ ನಿಲ್ಲದೇ ಅವುಗಳ ಬಗ್ಗೆ ಚರ್ಚೆ ನಡೆದು ಮುಂದಿನ ಓದಿಗೆ ಸಹಾಯವಾಗುತ್ತಿತ್ತು. ಹಾಗೂ ಮುಂದಿನ ಬರಹಕ್ಕೆ ಇದೇ ಪ್ರೇರಣೆಯಾಯಿತು.

ಕರ್ನಾಟಕ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದ ಕೃಷ್ಣ ಭಟ್ಟರು ತಂಗಿಯ ಓದನ್ನು ನಿರಂತರ ಪ್ರೋತ್ಸಾಹಿಸುತ್ತಾ ಬಂದರು, ಕಸ್ತೂರಿ, ಪ್ರಜಾವಣಿ, ಪ್ರಬುದ್ಧ ಕರ್ನಾಟಕ, ಕತೆಗಾಗಿಯೇ, ಇದ್ದ ಕತೆಗಾರ, ಕರ್ಮವೀರ ದಂತಹ ನಿಯತಕಾಲಿಕೆಗಳನ್ನು ಅವರು ತರುತ್ತಿದ್ದರು. ಅಷ್ಟೇ ಅಲ್ಲದೆ ಸಂಘದಲ್ಲಿ ನಡೆಯುತ್ತಿದ್ದ ಸಭೆ ಸಮಾರಂಭಗಳಿಗೆ ತಪ್ಪದೆ ಕರೆದೊಯ್ಯುತ್ತಿದ್ದರು. ಸಾಹಿತ್ಯಾಸಕ್ತರ, ಬರಹಗಾರರ ಈ ಒಡನಾಟ ಗಂಗಾರತ್ನ ಅವರ ಓದುವ, ಬರೆಯುವ ಒಳ ತುಡಿತವನ್ನು ಇನ್ನಷ್ಟು ಹೆಚ್ಚಿಸಿತು. ಕನ್ನಡದ ಆಗಿನ ಹೆಸರಾಂತ ಬರಹಗಾರರಾದ ತ.ರಾ.ಸು ಅವರು ಗಂಗಾರತ್ನ ಅವರ ಮನೆಗೆ ಬಂದಿದ್ದು, ಇವರ ಓದನ್ನು ಮೆಚ್ಚಿಕೊಂಡಿದ್ದರು. ಅಣ್ಣ ಕೃಷ್ಣಭಟ್ಟರು ಶಿವರಾಮ ಕಾರಂತರ ಬಾಲವನಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದು, ತಮ್ಮೊಂದಿಗೆ ತಂಗಿಯನ್ನು ಕರೆದೊಯ್ಯುತ್ತಿದ್ದರು. ಅವರಿಬ್ಬರೂ ಗಹನವಾದ ಚರ್ಚೆ ನಡೆಸುತ್ತಿದ್ದರೆ, ಗಂಗಾರತ್ನ ಮೂಕ ಪ್ರೇಕ್ಷಕಿಯಾಗಿ ಕಿವಿಗೊಡುತ್ತಿದ್ದರು. ಈ ಮಧ್ಯೆ ಮನೆಯಲ್ಲೇ ಕುಳಿತು ಹಿಂದಿ ಭಾಷಾ ಕಲಿಕೆಗೆ ಸೇರಿದರು. ಆದರೆ ಅದು ಕೆಲವೇ ದಿನಗಳಲ್ಲಿ ತಾಯಿಗೆ ತಿಳಿದು 'ಕೂಸಿಂಗೆ ಎಂತಗೆ ಅದು' ಎಂಬಲ್ಲಿಗೆ ನಿಂತು ಹೋಯಿತು. ಗಂಗಾರತ್ನರಿಗೆ ಕಲಿಯುವ ಹುಮ್ಮಸ್ಸು ಇದ್ದಾಗ, ಅದು ಸಾಧ್ಯವಾಗದೇ ಎಲ್ಲ ಆಸೆಗಳನ್ನು ಒಬ್ಬ ಹೆಣ್ಣು ಮಗಳು ಎಂಬ ಕಾರಣಕ್ಕೆ ಮರೆಯಬೇಕಾಯಿತು.

ಓದು, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಆ ದಿನಗಳು ಅತ್ಯಂತ ಸುಂದರ ದಿನಗಳಾಗಿದ್ದವು. ಸುತ್ತಮುತ್ತಲ ನೆಂಟರು-ಬಂಧುಗಳೆಲ್ಲ ಅನುಕೂಲಸ್ಥರಾದರೂ ಇದ್ಯಾವುದರ ಪರಿವೆ ಇಲ್ಲದೆ ಓದಿನಲ್ಲಿ ಮೈಮರೆತ ದಿನಗಳಾಗಿದ್ದವು. ತಾಯಿಯ ತವರಿನವರು ಅನುಕೂಲಸ್ಥರಾಗಿದ್ದು, ಅಜ್ಜಿಯ ಮನೆಗೆ

ತಂದೆಯವರು ಕಳುಹಿಸುತ್ತಿದ್ದದ್ದು ಅಪೂರ್ವವಾಗಿತ್ತು. ಆರ್ಥಿಕವಾಗಿ ತಮಗಿಂತ ಕಡಿಮೆಯವರಾಗಿದ್ದ ಈ ಕುಟುಂಬವನ್ನು ಆ ಸಾಹುಕಾರರು ಸೇರಿಸಿಕೊಳ್ಳಲು ಹಿಂಜರಿಯುತ್ತಿದ್ದುದು ಕೇಶವ ಭಟ್ಟ ದಂಪತಿಗಳಿಗೆ ಅರಿವಾಗಿದ್ದುದರಿಂದ, ಮಕ್ಕಳನ್ನು ಅಲ್ಲಿಗೆ ಕಳುಹಿಸಿ ಸಣ್ಣವರಾಗಲು ಅವರ ಮನಸ್ಸು ಒಪ್ಪಿರಲಿಲ್ಲ. ಅದು ಗಂಗಾ ಅವರ ಬದುಕಿನಲ್ಲಿ ಕೊರತೆಯಾಗಲೀ ಇಲ್ಲ. ಬದಲಾಗಿ ಅಲ್ಲಿಯ ಬಗ್ಗೆ ಕಂಡ, ಕೇಳಿದ ಒಂದೆರಡು ಘಟನೆಗಳು ಮುಂದೆ ಕತೆಗಳಿಗೆ ವಸ್ತುವಾಗಿ ಅರಳಿಕೊಂಡಿವೆ. ಹೀಗೆ ಓದುತ್ತಾ ಮೈಮರೆತಿದ್ದ ಗಂಗಾರತ್ನ ಅವರ ಬದುಕು ಹದಿನಾರನೆಯ ವಯಸ್ಸಿನಲ್ಲಿ ಮದುವೆಯಾಗುವುದರೊಂದಿಗೆ 'ಪಂಜರದ ಪಕ್ಷಿ'ಯ ಹಾಡಿನಂತಾಯಿತು. ಗಂಗಾರತ್ನ ಬಂಟ್ವಾಳ ತಾಲೂಕಿನ ಕನ್ಯಾನ ಸಮೀಪದ ಪಾದೇಕಲ್ಲಿನ ಕೃಷಿಕ ಮನೆತನದ ಹಿರಿಯ ಮಗ ಮಾಧವ ಎಂಬ ತನಗಿಂತ ಹದಿಮೂರು ವರ್ಷಕ್ಕೆ ಹಿರಿಯನಾದ ವಿದ್ಯಾವಂತ ಯುವಕನ ಬಾಳಸಂಗಾತಿಯಾದರು. ಆರು ಜನ ಮೈದುನರು. ಐದು ಜನ ನಾದಿನಿಯರು ಅತ್ತೆ–ಮಾವ, ಗಂಡನನ್ನು ಕಳೆದುಕೊಂಡು ತವರು ಸೇರಿದ್ದ ಮಾವನವರ ಒಬ್ಬಾಕೆ ಅಕ್ಕ–ಹೀಗೆ ಅದು ದೊಡ್ಡ ಕುಟುಂಬವಾಗಿತ್ತು. ತುಂಬಿದ, ಸಮೃದ್ಧ ಬ್ರಾಹ್ಮಣ ಕುಟುಂಬಗಳಲ್ಲಿ ಆಗಿನ ಕಾಲದಲ್ಲಿ ಹೆಣ್ಣಿಗೆ ವೈಯಕ್ತಿಕ ಬದುಕು, ಸ್ಥಾನ ಇರುತ್ತಿರಲಿಲ್ಲ. ಅಲ್ಲಿ ಎಲ್ಲವನ್ನೂ ನಿಗ್ರಹಿಸುವವನು, ಅನುಗ್ರಹಿಸುವವನು ಪುರುಷನೇ ಆಗಿರುತ್ತಾನೆ.

ಕೃಷಿಯಲ್ಲಿ, ಕೃಷಿಕರಲ್ಲಿ ಅಪಾರ ಗೌರವ ಹಾಗು ಮಗಳು ಹಿರಿಸೊಸೆಯಾಗುತ್ತಾಳೆ ಎಂಬ ಅಭಿಮಾನ, ವಿದ್ಯಾವಂತ ಹುಡುಗ ಎಂಬೆಲ್ಲ ಕಾರಣಗಳಿಗೆ ಕೇಶವ ಭಟ್ಟರು ಮಗಳಿಗೆ ವಿವಾಹ ಮಾಡಿದರು. ಅವರ ಅಳಿಯ ಆಗಿನ ಕಾಲಕ್ಕೆ ಬಿ.ಎಸ್ಸಿ ಪದವೀಧರರಾಗಿದ್ದರು. ಅಷ್ಟೇ ಅಲ್ಲ ಆ ಪರಿಸರದಲ್ಲಿ ಪದವಿ ಮುಗಿಸಿದ ಮೊದಲಿಗರಾಗಿದ್ದರು. ಹಾಗಾಗಿ ಅವರನ್ನು ಬಿ.ಎಸ್ಸಿ ಮಾಧವ ಎಂದೇ ಕರೆಯುತ್ತಿದ್ದರು. ವಿವಾಹವಾಗಿ ಗಂಡನ ಮನೆ ಸೇರಿದ ಆ ದಿನಗಳ ಬಗ್ಗೆ ಗಂಗಾ ಅವರು ಹೀಗೆ ಬರೆದಿದ್ದಾರೆ "ನಿತ್ಯ ನಂದಾದೀಪ, ಪೂಜೆಗೆ ದಿನಾ ಅರ್ಧ ಸೇರಕ್ಕಿ ಅನ್ನದ ನೈವೇದ್ಯ, ಪ್ರತೀ ಶುಕ್ರವಾರದಿರುಳು ದುರ್ಗಾಪೂಜೆ, ನೈವೇದ್ಯ ಇತ್ಯಾದಿಗಳೊಂದಿಗೆ ಅಡುಗೆ, ಹಟ್ಟಿ ಕೆಲಸಗಳೆಂದು ಎಷ್ಟು ಮಾಡಿದರೂ ಮುಗಿಯದ ಕೆಲಸಗಳಿದ್ದ ಮನೆಯಲ್ಲಿ ನನಗೆ ಆತ್ಮೀಯರಾಗಿ ಯಾರೂ ಇರಲಿಲ್ಲ. ನನ್ನ ಗಂಡನಂತೂ ನನ್ನ ಪಾಲಿಗೆ ಯಜಮಾನನಂತಿದ್ದರಲ್ಲದೇ ಎಂದೂ ಸಖನಂತಿರಲಿಲ್ಲ. ಹಾಗಿದ್ದರೂ ನನ್ನ ಓದುವ ಆಸಕ್ತಿ ತಿಳಿದ ಆತ ಕಸ್ತೂರಿ, ಸುಧಾ ಪತ್ರಿಕೆಗಳಿಗೆ ಚಂದಾ ಕಳಿಸಿದ್ದರು. ತುಂಬಿದ ಕುಟುಂಬದಲ್ಲಿ ಹಿರಿಸೊಸೆಯಾಗಿದ್ದ ಗಂಗಾ ಅವರ ಓದು ಆ ಮನೆಯಲ್ಲಿ ಅಪರಾಧ ಎನಿಸಿತ್ತು. ಚಂದಾ ಕಟ್ಟಿದ್ದು ಆ ಮನೆಯೊಳಗೆ ಒಂದು ದೊಡ್ಡ ಯುದ್ಧದ ತಲ್ಲಣವನ್ನೇ ಉಂಟು ಮಾಡಿತ್ತು. ಕಸ್ತೂರಿ, ಸುಧಾ, ಪತ್ರಿಕೆಗಳು ಆರು ತಿಂಗಳ ಚಂದಾ ಮುಗಿಸಿ ಸುಮ್ಮನಾದವು. ಅಂತೂ ಮನೆಮಂದಿಗೆ ನೆಮ್ಮದಿಯಾದರೆ ಗಂಗಾರ ಮನಸ್ಸು ನೀರಿನಿಂದ ಹೊರಕ್ಕೆಸೆದ ಮೀನಿನ ಉಸಿರುಗಟ್ಟುವಿಕೆಯ ಅವಸ್ಥೆಗಿಳಿಯಿತು."[೫]

ಸೊಸೆಯೆಂದರೆ ಮನೆಗೆಲಸಕ್ಕೆ ಒಬ್ಬ ಸದಸ್ಯೆಯ ಸೇರ್ಪಡೆ ಎಂಬುದು ತುಂಬು ಕುಟುಂಬದ ಅಲಿಖಿತ ಸಂವಿಧಾನ. ಗಂಗಾರದ್ದು ಇದೇ ಸ್ಥಿತಿಯಾಯಿತು. ಅತ್ತೆಯೋ ಅತ್ತೆಯ ಮರ್ಜಿಯವರು ಸೊಸೆಗೆ ಸಲಿಗೆ ಸಿಕ್ಕಿದರೆ ತಲೆಮೇಲೆ ಕೂತಾಳು ಎಂಬ ನಂಬಿಕೆಗೆ ಜೋತುಬಿದ್ದಿದ್ದರು. ಹಾಗಾಗಿ ಸೊಸೆಯನ್ನು

ಹಿಡಿತವಲ್ಲಿಡಲು ತಮ್ಮಲ್ಲೆ ಬುದ್ಧಿಯನ್ನು ಉಪಯೋಗಿಸುತ್ತಿದ್ದರು. ಅದನ್ನು ಅನುಸರಿಸುವಲ್ಲಿ ಮನೆಯ ಸದಸ್ಯರ ಸಹಕಾರವಿತ್ತು. ಗಂಗಾ ಅವರು ಮನೆಯಲ್ಲಿ ಗಂಡನೊಂದಿಗೆ ಮಾತನಾಡುವುದೇ ಅಪೂರ್ವವಾಗಿತ್ತು. ಓದಿದ ಹುಡುಗಿ ಗಂಗಾ ಈ ಸಂಸಾರದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಲ್ಲಿ ಸೋತುಹೋಗಿ ಆತ್ಮಹತ್ಯೆಯ ಮನಸ್ಸು ಮಾಡಿ ವಿಷಕುಡಿದರು. ಆದರೆ ಸಕಾಲದಲ್ಲಿ ಮನೆಯವರಿಗೆ ತಿಳಿದು ಅವರ ಪ್ರಾಣ ಉಳಿಯಿತು ಅಗಿನ್ನೂ ಮದುವೆಯಾಗಿ ವರ್ಷವಾಗಿರಲಿಲ್ಲ. ಇದು ಅರವತ್ತು-ಎಪ್ಪತ್ತರ ದಶಕದಲ್ಲಿ ಓದಿದ, ನಾಗರಿಕ ಬದುಕಿಗೆ ಭಾವನಾತ್ಮಕವಾಗಿ ಸ್ಪಂದಿಸುವ ಬ್ರಾಹ್ಮಣ ಬರಹಗಾರ್ತಿಯೊಬ್ಬರ ಸಾಂಸಾರಿಕ ಬದುಕಿನ ಬದಲಾವಣೆಯಾಗಿ ದಾಖಲಾಗಬಲ್ಲುದು.

೧೯ರ ವಯಸ್ಸಿನಲ್ಲಿ ಮೊದಲ ಮಗಳು ಸವಿತ ಜನಿಸಿದಳು. ಅಲ್ಲಿಂದ ಮೂರು ವರ್ಷಗಳ ಬಳಿಕ ತುಂಬಿದ ಕುಟುಂಬ ಒಡೆಯಿತು. ಪುಟ್ಟ ಜಾಗದಲ್ಲೊಂದು ಪುಟ್ಟು ಮನೆ. ತವರಿನ ಸಹಕಾರದೊಂದಿಗೆ ಮನೆ ಕಟ್ಟಿ, ಕೃಷಿಯಲ್ಲೂ ಅಪಾರ ಆಸಕ್ತಿ ವಹಿಸಿದರು. ಜೀವನಕ್ಕೆ ಅವರಿಗೆ ಕೃಷಿಯೇ ಆಧಾರವಾಗಿತ್ತು. ಕನ್ಯಾನದಿಂದ ಕರೋಪಾಡಿಗೆ ಹೋಗಿ ಬಸ್ಸಿಳಿದು ಒಂದು ಕಿಲೊ ಮೀಟರ್ ಗುಡ್ಡತೋಟ ಕಳೆದು, ಸುತ್ತಮುತ್ತ ಇರುವ ಅಡಿಕೆ ಮರಗಳ ಮದ್ಯೆ ಅವರ ಒಂದು ಗುಬ್ಬಚ್ಚಿಗೂಡು. ಅದರಲ್ಲಿ ಈ ಸಂಸಾರ ನೆಮ್ಮದಿಯನ್ನು ಅರಸುತ್ತಿತ್ತು. ಆ ಮನೆಯಲ್ಲಿ ಅರ್ಥಿಕವಾಗಿ ನೆಮ್ಮದಿ ಕಾಣದಿದ್ದರೂ, ತವರಿಗೆ ಹೋದಾಗೆಲ್ಲ ಬಗಲ ತುಂಬ ಪುಸ್ತಕ ತಂದು ಓದಬಹುದಾದ ನೆಮ್ಮದಿ ಇತ್ತು. ಮನೆಗೆಲಸ, ತೋಟದ ಕೆಲಸ, ಗಂಡ-ಮಕ್ಕಳ ಆರೈಕೆ ಎಂಬೆಲ್ಲ ಬದ್ಧತೆಗಳನ್ನು ಒಪ್ಪಿಕೊಂಡು ಪೂರೈಸಿ, ಸುದಾರಿಸಿಕೊಂಡು ಓದಲು ಕುಳಿತುಕೊಳ್ಳುವ ಓದಿನ ಹಸಿವು ಗಂಗಾ ಅವರಿಗಿತ್ತು. ಗಂಡನಿಗೆ ಓದುವುದು, ಬರೆಯುವುದರ ಬಗ್ಗೆ ಆಸಕ್ತಿ ಇಲ್ಲ ಎಂದು ಅರಿವಾದಾಗ ಅವರು ಮಲಗಿದ ಮೇಲೆ ಅಡುಗೆಮನೆಯಲ್ಲಿ ಸೀಮೆಬುಡ್ಡಿ ಉರಿಸಿ ಅದರ ಬೆಳಕು-ಹೊಗೆಯಲ್ಲೇ ಓದಿ-ಬರೆಯುತ್ತಿದ್ದರು.

ಗಂಡ ಬುದ್ಧಿವಂತ ಕೃಷಿಕರಾಗಿದ್ದರು. ಆ ಕಾಲಕ್ಕಾಗಲೇ ಬಿ.ಎಸ್ಸಿ ಪದವೀಧರರಾಗಿದ್ದರೂ ಮನೆಯ ಹಿರಿಮಗನಾದುದರಿಂದ ಉದ್ಯೋಗಕ್ಕೆ ಸೇರದೆ, ಮನೆಗೆ ಅಂಟಿಕೊಂಡು ಕೃಷಿಯಲ್ಲಿ ತೊಡಗಿದರು. ಅವರಿಂದ ಕಿರಿಯರು ಕಲಿತು ಉದ್ಯೋಗ ಗಳಿಸಿ, ಭೂಮಿ ಹಾಗೂ ಉದ್ಯೋಗ ಎರಡರ ಮೂಲಕ ಅರ್ಥಿಕವಾಗಿ ಗಟ್ಟಿಗರಾದರು. ಇವರಾದರೋ ಮನೆ, ಕೃಷಿ ಎಂದು ನಂಬಿ ಕೃಷಿಯಲ್ಲೂ, ಅರ್ಥಿಕವಾಗಿಯೂ ಸೋತು ಹೋದರು. ಮಾಧವ ಭಟ್ಟರೂ ಮಡದಿಯಲ್ಲಿ ತಾನು ಕಲಿತ ವಿದ್ಯೆಗೆ ಒಳ್ಳೆ ಉದ್ಯೋಗ ಸಿಗುತ್ತಿತ್ತು. ಉದ್ಯೋಗಕ್ಕೆ ಹೋಗದೆ ಸೋತುಹೋದೆ. ಎಂದು ಅಲವತ್ತುಕೊಂಡದ್ದಿದೆ. ಮತ್ತು ಆ ಕೀಳರಿಮೆ ಅವರನ್ನು ಆಗಾಗ್ಗೆ ಕಾಡುತ್ತಿತ್ತು. ಅಡಿಕೆ ತೋಟದಲ್ಲಿ ವಿವಿಧ ಪ್ರಯೋಗಗಳೊಂದಿಗೆ ಹೆಚ್ಚು ಇಳುವರಿ ಪಡೆದುಕೊಳ್ಳಲು ಸದಾ ಶ್ರಮಿಸುತ್ತಿದ್ದ ಗಂಡನ ಆರೋಗ್ಯ ಅವರಿಗರಿವಿಲ್ಲದೆ ಕೆಟ್ಟುಹೋಗುತ್ತಿತ್ತು. ಬಹುಶಃ ಮಡದಿ ಗಂಗಾಗೂ ಅದರ ಅರಿವಿರಲಿಲ್ಲ

ಈ ಸಂದರ್ಭಗಳಲ್ಲಿ ಎರಡನೇಯ ಮಗಳು ಅರುಣಾ ಹುಟ್ಟಿದಳು. ಈ ಹೊತ್ತಿಗೆ ಗಂಗಾ ಅವರ ತವರು ತಂದೆ-ತಾಯಿ ಇಲ್ಲದ ಮನೆಯಾಗಿತ್ತು. ಒಂದೆಡೆ ಕೆಟ್ಟುಹೋದ ಕೃಷಿ. ಅದಕ್ಕಾಗಿಯೇ ಕೊರಗಿ,

ಮಡಿದು ಆರೋಗ್ಯ ಕೆಡಿಸಿಕೊಂಡ ಪತಿ, ಹೆಣ್ಣು ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಇವೆಲ್ಲ ಇದೇ ಸಂದರ್ಭದಲ್ಲಿ ಗಂಗಾ ಅವರನ್ನು ಹಣ್ಣು ಮಾಡಿತ್ತು. "ಈ ತುಮುಲ ತಲ್ಲಣಗಳ ದಿನಗಳಲ್ಲಿ ಅವರು ಬರೆದ ಮೊದಲ ಕತೆ ಜಾನಕಿಯ ಡೈರಿಯ ಕೆಲವು ಪುಟಗಳು ಸುಧಾದಲ್ಲಿ ಪ್ರಕಟಣೆಗಾಗಿ ಸ್ವೀಕೃತವಾಯಿತು. ಸುಧಾಕ್ಕೆ ಕತೆ ಕಳುಹಿಸಿ ಕಾಯುತ್ತಿದ್ದ ಗಂಗಾ ಅವರಿಗೆ ಮಗಳು ಸವಿತ ಶಾಲೆಯಿಂದ ಬರುವಾಗ ತಂದ ಪತ್ರವು ಪತ್ರಿಕೆಯ ಸ್ವೀಕೃತಿ ಕಾರ್ಡ್ ಎಂದು ತಿಳಿದಾಗ ಕೈಗೆ ಸಿಕ್ಕ ಆರು ಪೈಸೆಯನ್ನು ಮಗಳ ಕೈಗೆ ಬಹುಮಾನವಾಗಿತ್ತು. ಸಂಭ್ರಮಪಟ್ಟರು. ಆ ಕಾರ್ಡ್ ಕಷ್ಟದ ದಿನಗಳ ಮರಳುಗಾಡಿನ ಓಯಸಿಸ್ ಆಗಿತ್ತು."[೬]

ಇದೇ ತೃಪ್ತಿಯಲ್ಲಿ ಬೇರೆ ಬೇರೆ ಪತ್ರಿಕೆಗಳಿಗೆ ಕತೆ ಬರೆದವರಾದರೂ ಅವು ಪ್ರಕಟವಾಗಿರಲಿಲ್ಲ. ಮನೆಗೆಲಸ, ತೋಟದ ಕೆಲಸಗಳಲ್ಲಿ ಸಿಕ್ಕ ಸಮಯವನ್ನೆಂದೂ ಗಂಗಾ ಅವರು ಖಾಲಿ ಬಿಡಲಿಲ್ಲ. ಅವರಿಗೆ ಓದು ಎನ್ನುವುದು ಉಳಿದ ಕೆಲಸಗಳ ಹಾಗೆಯೇ ನಿರಂತರ ಕ್ರಿಯೆಯಾಯಿತು. ಹಗಲಿನ ದುಗುಡಗಳನ್ನು ರಾತ್ರಿ ದೀಪದ ಬೆಳಕಿನಲ್ಲಿ ಬರವಣಿಗೆಯಲ್ಲಿ ಕಳೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದೇ ಸಂದರ್ಭಗಳಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ಕತೆಗಳು ಪ್ರಸಾರವಾದವು. ಈ ಎಲ್ಲಾ ಕತೆಗಳನ್ನು ಸೇರಿಸಿ ಕಥಾ ಸಂಕಲನವೊಂದನ್ನು ತರಬೇಕೆಂಬ ಉತ್ಸಾಹದಲ್ಲಿದ್ದ ಅಣ್ಣ ಕೃಷ್ಣಭಟ್ಟರು ತೀರಿಕೊಂಡರು. ಬಾಲ್ಯದಿಂದಲೂ ಓದು ಬರಹಕ್ಕೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದ ಅಣ್ಣನ ಸಾವು ಗಂಗಾಗೆ ಅಘಾತವನ್ನೇ ತಂದು ಇದರೊಂದಿಗೆ ಹೃದಯ ಕೈಕೊಟ್ಟಿತ್ತು. ಒಂದೇ ವರ್ಷದಲ್ಲಿ ತಮ್ಮ ನಲ್ವತ್ತೆಂಟನೆಯ ವಯಸ್ಸಿನಲ್ಲಿ ಅವರ ಗಂಡ ಹೃದಯಾಘಾತದಿಂದ ತೀರಿಕೊಂಡಾಗ ಗಂಗಾಗೆ ಮೂವತ್ತನಾಲ್ಕು ವರ್ಷವಾಗಿತ್ತಷ್ಟೆ. ಆ ದಿನಗಳನ್ನು ಅವರು ಹೀಗೆ ನೆನಪಿಸಿಕೊಂಡಿದ್ದಾರೆ. ಬಹುಶಃ ನಮ್ಮ ಜೀವನ ಶೈಲಿ ತುಸು ಉತ್ತಮ ಮಟ್ಟದಲ್ಲಿ ಎಂದರೆ ತೋಟದ ಕೆಲಸಗಳಿಗೆ ಆಳುಗಳನ್ನಿಟ್ಟುಕೊಳ್ಳುವಂತೆ ಇರುತ್ತಿದ್ದರೆ, ಅವರ ಅಂತ್ಯ ಇಳನೇ ವಯಸ್ಸಿಗೆ ಬರುತ್ತಿರಲಿಲ್ಲವೋ ಏನೋ. ಆದರೆ ನಮ್ಮ ಅರ್ಥಿಕ ಸ್ಥಿತಿ ಅದಕ್ಕೆ ಅವಕಾಶ ನೀಡಿರಲಿಲ್ಲ. ಆ ದುಃಖ ನಿರ್ಭಾರ ದಿನಗಳನ್ನು ಎದುರಿಸಲು ನನ್ನ ಬರೆಯುವ ಅಭ್ಯಾಸ ಬಹಳ ಸಹಾಯಮಾಡಿತು ಎಂದು ನಾನಿಲ್ಲಿ ಹೇಳಬೇಕು. ಅವರ ಗಂಡ ಮರಣಿಸಿದಾಗ ಹಿರಿಯ ಕವಿತಾಳಿಗೆ ಹದಿನಾಲ್ಕುಗಿದ್ದರೆ, ಕಿರಿಯ ಅರುಣಾಳಿಗೆ ಏಳೂ ತುಂಬಿರಲಿಲ್ಲ. ಅಡಿಕೆ ತೋಟಕ್ಕಾಗಿ ದುಡಿದೂ ದುಡಿದೂ ಕೊನೆಗೆ ನನ್ನವರು ಅದಕ್ಕೆ ಅಹುತಿಯಾದ ಮೇಲೆ ತೋಟದ ಬಗ್ಗೆ ನನಗೆ ತೀವ್ರ ನಿರಾಸಕ್ತಿ ಜನಿಸಿತ್ತು.

"ಈ ಕಾಲಕ್ಕೆ ಗಂಗಾ ಅವರ ಮೊದಲ ಕಥಾಸಂಕಲನ "ಪುಲಪೇಡಿ ಮತ್ತು ಇತರ ಕತೆಗಳು" ಪ್ರಕಟವಾಯಿತು. ಈ ಕಥಾಸಂಕಲನ ಅವರನ್ನು ಸಾರಸ್ವತ ಲೋಕಕ್ಕೆ ಗಟ್ಟಿಯಾಗಿ ಪರಿಚಯಿಸಿತು. ಪುಲಪೇಡಿ ಕತೆ ನಾಡಿನಾದ್ಯಂತ ಚರ್ಚೆಗೆ ದಕ್ಕಿತು. ಮತ್ತು ಹೊನ್ನಳ್ಳಿಯಲ್ಲೊಮ್ಮೆ ಕಾದಂಬರಿ ಪ್ರಕಟಣೆಗೆ ಕಾರಣವಾಯಿತು. ಬದುಕಬೇಕಾದರೆ ಬರವಣಿಗೆ ಹೇಗೆ ಅನಿವಾರ್ಯವಾಯಿತೋ, ಹಾಗೇ ಗಂಗಾ ಅವರಿಗೆ ಬರವಣಿಗೆಯು ಮಾನಸಿಕ ಅನಿವಾರ್ಯವೂ ಆಯಿತು."[೭]

ಹೀಗೆ ಬದುಕು ಅವರೊಂದಿಗೆ ಕಾಡೇ ಗೂಡೇ ಆಡುತ್ತಿದ್ದಾಗ ಲೇಖಕಿಯರಾದ ಅನುಪಮಾ ನಿರಂಜನ ಮತ್ತು ವೈದೇಹಿ ಅವರ ಪರಿಚಯವಾಯಿತು. ಶ್ರೀಮತಿ ಎ.ಪಿ ಮಾಲತಿ ಅವರೂ ಪುತ್ತೂರಿನವರೆ ಆಗಿದ್ದು, ಅವರ ಪರಿಚಯವೂ ಆಗಲೇ ಆಗಿತ್ತು. ಜಿಲ್ಲೆಯ ಹಲವು ಲೇಖಕಿಯರ ಪರಿಚಯವಾಗಿ, ಅದೊಂದು ಬಳಗವಾಗಿ ಮುಂದೆ ಕರಾವಳಿ ಲೇಖಕಿಯರ ಮತು ವಾಚಕಿಯರ ಸಂಘವಾಗಿ ರೂಪುಗೊಂಡಿತು.

ಗಂಗಾ ಅವರು ಮಕ್ಕಳು ಬೆಳೆದು ದೊಡ್ಡವರಾದ ಮೇಲೆ, ಬರಹವನ್ನು ಗಂಭೀರವಾಗಿ ಪರಿಗಣಿಸಿ ಬರೆಯತೊಡಗಿದರು. ಕುಟುಂಬ ನಿರ್ವಹಣೆಯ ಜವಾಬ್ದಾರಿ, ಮಕ್ಕಳ ವಿದ್ಯಾಭ್ಯಾಸದ ಸವಾಲು ಅವರ ಮುಂದಿತ್ತು. ಇದು ಅವರಿಗೆ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸುವುದನ್ನು ಕಲಿಸಿತು. ಕರ್ತವ್ಯ, ಜವಾಬ್ದಾರಿಗಳು ಅವರ ಅನುಭವಗಳನ್ನು ಪಕ್ವಗೊಳಿಸಿದವು. ಚಿಕ್ಕಪುಟ್ಟ ಅನ್ನಿಸಬಹುದಾದ ಘಟನೆಗಳೂ ಕತೆಯಾಗುವಲ್ಲಿ ಈ ಅನುಭವವೇ ಆಧಾರವಾಯಿತು. ಬಾಲ್ಯದಿಂದ ಅನುಭವಿಸಿದ ಬಡತನ, ಸಮೃದ್ಧ ಕುಟುಂಬದ ದೌರ್ಬಲ್ಯದ ಎಳೆಗಳು ಕತೆ ಕಾದಂಬರಿಗಳದುವು. ಹಾಗಾಗಿ ಗಂಗಾ ಅವರು ಬರವಣಿಗೆಗೆ ಕುಳಿತಾಗ ಅವರಿಗೆ ವಸ್ತುವಿಗೆ ಬರಹ ಬರಲಿಲ್ಲ. ಸಾಮಾಜಿಕವಾಗಿ ಹೆಣ್ಣಿನ ಮೇಲೆ, ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಅವರ ಮನಸ್ಸನ್ನು ಕಲಕಿ ಕತೆಗಳಾದವು. ಸಮಕಾಲೀನ ಲೇಖಕಿಯರೆಲ್ಲ ಶ್ರೀಮಂತ ಅಥವಾ ಮಧ್ಯಮ ವರ್ಗದ ಹೆಣ್ಣುಮಕ್ಕಳ ಪ್ರೇಮಕತೆಗಳನ್ನು ಬರೆಯುತ್ತಿದ್ದಾಗ ಗಂಗಾ ಅವರು ಬಡಹೆಣ್ಣುಮಕ್ಕಳ, ಕೀಳುಜಾತಿಯ ಹೆಣ್ಣುಮಕ್ಕಳ ಬದುಕನ್ನು ಕತೆಗಾಗಿ ಆರಿಸಿಕೊಂಡು, ಅದಕ್ಕೆ ತನ್ನ ಸುತ್ತಲಿನ ಬದುಕನ್ನು ಮೇಳೈಸಿ ವಾಸ್ತವಕ್ಕೆ ಹತ್ತಿರವಾದ ಕತೆಗಳನ್ನು ಹೆಣೆದರು. ಅವರು ತಮ್ಮ ಕತೆಗಳ ಬಗ್ಗೆ ಹೀಗೆ ಹೇಳುತ್ತಾರೆ.

"ಬರೀ ಕಲ್ಪನೆ ಮಾತ್ರದಿಂದ ಸಾಹಿತ್ಯ ಸೃಷ್ಟಿಯಾಗಲಾರದು. ಆಗಬಾರದು ಕೂಡ ಎಂಬುದು ನನ್ನ ನಂಬಿಕೆ. ಹಾಗೆಂದು ಬದುಕಿನ ನಿಜ ಚಿತ್ರಣವನ್ನು ನೀಡಿದರೆ ಅದು ಕೇವಲ ವರದಿಯಾದೀತಷ್ಟೆ. ಹಾಗೆಂದು ತುಸು ಕಲ್ಪನೆ ಬೆರೆಸಿದ ನಿಜಬದುಕಿನ ಸಾಹಿತ್ಯಿಕ ಚಿತ್ರಣ ನನಗಿಷ್ಟ. ನನ್ನ ಬರಹಗಳಿರುವುದೂ ಹಾಗೆಯೇ. ಮಹಿಳೆ ಮಾತ್ರವೇ ಶೋಷಣೆಗೆ ಗುರಿಯಲ್ಲ ಎಂದು ಈ ಮುನ್ನ ಬರೆದಿದ್ದೆನಾದರೂ ಸ್ತ್ರೀ ಶೋಷಣೆ ಮಿಕ್ಕೆಲ್ಲವುಗಳಿಂದಲೂ ಜಾಸ್ತಿ ಪ್ರಮಾಣದಲ್ಲಿವೆ ಎಂಬುದು ಕೂಡಾ ನನ್ನ ಗಮನದಲ್ಲಿದೆ. ನಾನು ಕೂಡಾ ಈ ರೀತಿಗೆ ಒಳಗಾದವಳೆ. ಹಾಗೆಂದೆ ಇದ್ದೀತು ನನ್ನ ಬರಹಗಳಲ್ಲಿ ಅಂತಹ ಹೆಣ್ಣಿನ ಚಿತ್ರಣಗಳು ಜಾಸ್ತಿಯಾಗಿವೆ."[೮]

ಗಂಗಾ ಅವರು ಮಕ್ಕಳು ಬೆಳೆದು ದೊಡ್ಡವರಾದ ಮೇಲೆ, ಬರಹವನ್ನು ಗಂಭೀರವಾಗಿ ಪರಿಗಣಿಸಿ ಬರೆಯತೊಡಗಿದರು ಕುಟುಂಬ ನಿರ್ವಹಣಿಯ ಜವಬ್ದಾರಿ, ಮಕ್ಕಳ ವಿದ್ಯಾಭ್ಯಾಸದ ಸವಾಲು ಅವರ ಮುಂದಿತ್ತು. ಇದು ಅವರಿಗೆ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸುವುದನ್ನು ಕಲಿಸಿತು. ಕರ್ತವ್ಯ, ಜವಬ್ದಾರಿಗಳು ಅವರ ಅನುಭವವನ್ನು ಪಕ್ವಗೊಳಿಸಿದವು. ಚಿಕ್ಕಪುಟ್ಟ ಅನ್ನಿಸಿಬಹುದಾದ ಘಟನೆಗಳೂ ಕತೆಯಾಗುವಲ್ಲಿ ಈ ಅನುಭವವೇ ಆಧಾರವಾಯಿತು. ಬಾಲ್ಯದಿಂದ ಅನುಭವಿಸಿದ ಬಡತನ, ಸಮೃದ್ಧ ಕುಟುಂಬದ ದೌರ್ಬಲ್ಯದ ಎಳೆಗಳುಕತೆ ಕಾದಂಬರಿಗಳಾದವು. ಹಾಗಾಗಿ ಗಂಗಾ ಅವರು ಬರವಣಿಗೆಗೆ

ಕುಳಿತಾಗ ಅವರಿಗೆ ವಸ್ತುವಿಗೆ ಬರ ಬರಲಿಲ್ಲ. ಸಾಮಾಜಿಕವಾಗಿ ಹೆಣ್ಣಿನ ಮೇಲೆ, ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಅವರ ಮನಸ್ಸನ್ನು ಕಲಕಿ ಕತೆಗಳಾದುವು. ಸಮಕಾಲೀನ ಲೇಖಕಿಯರೆಲ್ಲ ಶ್ರೀಮಂತ ಅಥವಾ ಮಧ್ಯಮ ವರ್ಗದ ಹೆಣ್ಣುಮಕ್ಕಳ ಪ್ರೇಮಗೀತೆಗಳನ್ನು ಬರೆಯುತ್ತಿದ್ದಾಗ ಗಂಗಾ ಅವರ ಹೆಣ್ಣುಮಕ್ಕಳ, ಕೀಳುಜಾತಿಯ ಹೆಣ್ಣುಮಕ್ಕಳ ಬದುಕನ್ನು ಕತೆಗಾಗಿ ಆರಿಸಿಕೊಂಡು, ಅದಕ್ಕೆ ತನ್ನ ಸುತ್ತಲಿನ ಬದುಕನ್ನು ಮೇಳೈಸಿ ವಾಸ್ತವಕ್ಕೆ ಹತ್ತಿರದ ಕತೆಗಳನ್ನು ಹೆಣೆದರು. ಅವರು ತಮ್ಮ ಕತೆಗಳ ಬಗ್ಗೆ ಹೀಗೆ ಹೇಳುತ್ತಾರೆ, ‘ಬರೀ ಕಲ್ಪನೆ ಮಾತ್ರದಿಂದ ಸಾಹಿತ್ಯ ಸೃಷ್ಟಿಯಾಗಲಾರದು. ಆಗಬಾರದು ಕೂಡ ಎಂಬುದು ನನ್ನ ನಂಬಿಕೆ. ಹಾಗೆಂದು ಬದುಕಿನ ನಿಜ ಚಿತ್ರಣವನ್ನು ನೀಡಿದರೆ ಅದು ಕೇವಲ ವರದಿಯಾದೀತಷ್ಟೆ. ಹಾಗೆಂದು ತುಸು ಕಲ್ಪನೆ ಬೆರೆಸಿದ ನಿಜಬದುಕಿನ ಸಾಹಿತ್ಯಿಕ ನನಗಿಷ್ಟ. ನನ್ನ ಬರಹಗಳಿರುವುದೂ ಹಾಗೆಯೇ. ಮಹಿಳೆ ಮಾತ್ರವೇ ಶೋಷಣೆಗೆ ಗುರಿಯಲ್ಲ ಎಂದು ಈ ಮುನ್ನ ಬರೆದಿದ್ದೆನಾದರೂ ಸ್ತ್ರೀ ಶೋಷಣೆ ಮಿಕ್ಕೆಲ್ಲವುಗಳಿಂದಲೂ ಜಾಸ್ತಿ ಪ್ರಮಾಣದಲ್ಲಿದೆ ಎಂಬುದು ಕೂಡಾ ತ'ನ್ನ ಗಮನದಲ್ಲಿದೆ. ತಾನು ಕೂಡಾ ಈ ರೀತಿಗೆ ಒಳಗಾದವಳೆ. ಹಾಗೆಂದೇ ಇದ್ದೀತು ನನ್ನ ಬರಹಗಳಲ್ಲಿ ಅಂತಹ ಹೆಣ್ಣಿನ ಚಿತ್ರಣಗಳು ಜಾಸ್ತಿಯಾಗಿವೆ’’[೯].

ಎ.ಪಿ.ಮಾಲತಿ

“ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಮಾಲತಿಯವರ ತವರು. ೧೯೪೪ರ ಮೇ ಆರರಂದು ಜನಿಸಿದ ಮಾಲತಿಯವರ ತಂದೆ ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಗಣೇಶ ಕೃಷ್ಣಭಟ್ಟರು, ತಾಯಿ ಕಾವೇರಿ. ಈ ದಂಪತಿಗಳ ಇಬ್ಬರು ಹೆಣ್ಣು ಮಕ್ಕಳಲ್ಲಿ ಹಿರಿಮಗಳು ಮಾಲತಿ. ಇವರ ಹುಟ್ಟು ಹೆಸರು ಮೋಹಿನಿ ಎಂದಾಗಿತ್ತು. ಅಜ್ಜ-ಅಜ್ಜಿ, ತಂದೆ-ತಾಯಿ, ಒಬ್ಬ ಅಣ್ಣ, ಇಬ್ಬರು ತಮ್ಮಂದಿರು ಹಾಗೂ ಒಬ್ಬಳು ತಂಗಿಯ ಜೊತೆಗಿನ ತುಂಬು ಕುಟುಂಬದ ಪ್ರೀತಿಯ ಸವಿಯನ್ನು ಉಂಡ ಮೋಹಿನಿ, ಆಯುರ್ವೇದ ಪಂಡಿತರಾಗಿದ್ದ ತಮ್ಮ ತಾತ ಕೃಷ್ಣಭಟ್ಟರ ಪ್ರಭಾವದಿಂದ ಎಳವಯಸಿಲ್ಲೇ ಸಸ್ಯ ಪ್ರೀತಿಯನ್ನು ಬೆಳೆಸಿಕೊಂಡವರು.ಸಾಹಿತ್ಯ ಪ್ರಿಯೆ ತಾಯಿಯ ನೆರಳಲ್ಲಿ, ಅಜ್ಜಿ ಹೇಳುತ್ತಿದ್ದ ಕತೆಗಳನ್ನು ಕೇಳುತ್ತ, ಯಕ್ಷಗಾನ ಪ್ರಸಂಗ ಹಾಗೂ ಇತರ ಕೆಲವು ಗ್ರಂಥಗಳನ್ನು ರಚಿಸಿದ ಅಜ್ಜನಿಂದ ಬರವಣಿಗೆಯ ಗೀಳನ್ನು ಹತ್ತಿಸಿಕೊಂಡು’’[೧೦]

ತಮ್ಮ ಅಲೋಚನೆಗಳು, ಅನಿಸಿಕೆಗಳಿಗೆ ಬರಹದ ರೂಪವನ್ನು ಕೊಟ್ಟರು. ಹುಬ್ಬಳ್ಳಿಯಿಂದ ಪ್ರಕಾಶನ ಗೊಳುತ್ತಿದ್ದ ಅಂದಿನ ಕರ್ಮವೀರ ವಾರಪತ್ರಿಕೆಯಲ್ಲಿ ಮೋಹಿನಿ ಭಟ್ಟ ಎಂಬ ಹೆಸರಿನಲ್ಲಿ ಅವು ಪ್ರಕಟಗೊಂಡು, ಹೆಚ್ಚಿನ ಬರವಣಿಗೆಗೆ ಅವರನ್ನು ಪ್ರೇರೆಪಿಸಿದವು. ಆಕಾಶವಾಣಿಯಲ್ಲಿ ಶಾಲೆಯ ಪತ್ರಿಕೆಗಳಲ್ಲಿ, ವಾರ್ಷಿಕೋತ್ಸವದಲ್ಲಿ ನಾಟಕಗಳನ್ನು ಬರೆದು, ಅವುಗಳನ್ನು ಸ್ವತಃ ಸಂಯೋಜಿಸಿ, ಕಾರ್ಯಕ್ರಮದ ಯಶಸ್ಸಿಗಾಗಿ ಸದಾ ಕ್ರೀಯಾಶೀಲತೆಯಿಂದ ದುಡಿದು, ಎಲ್ಲರ ಮೆಚ್ಚುಗೆ ಪಡೆಯುತ್ತಿದ್ದ ಮೋಹಿನಿ ಇಂದಿಗೂ ಅದೇ ಉತ್ಸಾಹವನ್ನು ಬೆಳೆಸಿಕೊಂಡು ಬಂದಿದ್ದಾರೆ. ಬಾಲ್ಯದಲ್ಲಿ ಸಂಗೀತ, ನೃತ್ಯ ಕಲೆಗಳ, ಚಿತ್ರಕಲೆ, ಕಸೂತಿಯಂಥ ಲಲಿತಕಲೆಗಳ ಕುರಿತು ಬೆಳೆಸಿಕೊಂಡ ಆಸಕ್ತಿ ಮಾಲತಿಯವರ ಬರವಣಿಗೆಯಲ್ಲಿ

ಭಾವನೆಗಳನ್ನು, ಭಾವನೆಗಳಿಗೆ ಲಾಲಿತ್ಯವನ್ನು ತಂದಿದೆ. ಬಂಗಾಲಿಯಿಂದ ಅನುವಾದಗೊಂಡ ರವೀಂದ್ರನಾಥ ಟಾಗೋರರ ಕಾದಂಬರಿಗಳು, ಶರತ್‌ಚಂದ್ರರ ಕೃತಿಗಳು, ಶಿವರಾಮ ಕಾರಂತರ ಕಾದಂಬರಿಗಳ ಓದು ಮಾಲತಿಯವರ ಬರವಣಿಗೆ ಪ್ರಬುದ್ಧತೆಯನ್ನು ಒದಗಿಸಿವೆ.

ತಮ್ಮ ತಂದೆಯವರ ಉದ್ಯೋಗ ನಿಮಿತ್ತ ಧಾರವಾಡ, ಮುಂಬೈಯಂಥ ನಗರಗಳಲ್ಲೂ ವಾಸಮಾಡಬೇಕಾಗಿ ಬಂದ ಮಾಲತಿಯವರು ನಗರಜೀವನದ ಹಲವು ಮುಖಗಳನ್ನು ನೋಡಿದವರು. ಅಲ್ಲಿನ ಬದುಕಿನ ವೇಗವನ್ನು ಅನುಭವಿಸಿದವರು. ಆ ಅವಧಿಯಲ್ಲಿ ತಮ್ಮನ್ನು ಉತ್ಕಟವಾಗಿ ಕಾಡಿದ ಅನುಭವಗಳನ್ನೇ ಕತೆ, ಕಾದಂಬರಿಗಳ ರೂಪದಲ್ಲಿ ಕಟ್ಟಿದರು. ವಿವಾಹದ ಬಳಿಕವೂ ತವರಿನೊಂದಿಗೆ ಯಾವುದೇ ಆತಂಕವಿಲ್ಲದೆ ಮುಂದುವರಿದ ಬಾಂಧವ್ಯ ಮುಂಬೈಯ ಯಾಂತ್ರೀಕೃತ ಬದುಕನ್ನು ಪರಿಚಯಿಸಲು ಕಾರಣವಾದರೆ, ಪತಿಗೃಹದ ಬಾಂಧವ್ಯ ತೀರ ಗ್ರಾಮ್ಯ ಜೀವನದ ವಿಭಿನ್ನ ಮುಖಗಳನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡಿತು. ಮಾಲತಿಯವರ ಕತೆಗಳು ಮತ್ತು ಕಾದಂಬರಿಗಳಲ್ಲಿ ಈ ಎಲ್ಲ ಬಗೆಯ ಜೀವಾನಾನುಭವಗಳು ಹರಳುಗಟ್ಟಿವೆ.

ಪಿ.ಯು.ಸಿವರೆಗೆ ಶಿಕ್ಷಣ ಪಡೆದ ಮಾಲತಿಯವರು ಕಾಲೇಜು ವಿದ್ಯಾರ್ಥಿನಿಯಾಗಿದ್ದ ಅವಧಿಯಲ್ಲೇ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಚಿಕ್ಕಹಳ್ಳಿ ಆರ್ಯಾಪುವಿನ ಎ.ಪಿ ಗೋವಿಂದ ಭಟ್ಟರ ಜೊತೆ ವೈವಾಹಿಕ ಬದುಕನ್ನು ಪ್ರವೇಶಿಸಿದರು. ಪ್ರಸಿದ್ಧ ಅನುವಾದಕರಾದ ಮಾವ ಎ.ಪಿ ಸುಬ್ಬಯ್ಯ, ಅತ್ತೆ, ಪತಿ, ನಾದಿನಿ ಮತ್ತು ಎಲ್ಲ ಬಂಧುಗಳ ಸಹೃದಯತೆ ಮಾಲತಿಯವರ ಬರೆಯುವ ಆಸಕ್ತಿಗೆ ನೀರೆರೆಯಿತು. ಮೋಹಿನಿ ಮದುವೆಯಾಗಿ ಮಾಲತಿಯಾದರೂ ಅಲ್ಲಿ ಬದಲಾದುದು ಕೇವಲ ಅವರ ಹೆಸರೇ ಹೊರತು ವ್ಯಕ್ತಿತ್ವವಲ್ಲ. ಮದುವೆ ಹೆಣ್ಣಿನ ವ್ಯಕ್ತಿತ್ವವನ್ನೇ ಮಾರ್ಪಡಿಸಿ ಬಿಡುತ್ತದೆ ಎಂಬ ಮಾತಿಗೆ ಅಪವಾದವೆಂಬಂತೆ ಮಾಲತಿಯವರ ವ್ಯಕ್ತಿತ್ವ ಇನ್ನಷ್ಟು ಶೋಭೆಯನ್ನು ಪಡೆದುದು ವಿವಾಹಾನಂತರವೇ, ಮಾಲತಿಯವರು ಬದುಕಿನಲ್ಲಿ ತಮ್ಮ ವಿವಾಹದ ಬಳಿಕ ಪಡೆದ ಪಕ್ವತೆ, ಅನುಭವಗಳು ಶ್ರೀಮಂತಿಕೆಗಳು ಅವರ ಬರಹಗಳಲ್ಲಿ ಪ್ರತಿಬಿಂಬಿತವಾಗಿದೆ. ಇವು ಅವರ ಬರವಣಿಗೆ ಸಾಣೆ ಹಿಡಿದು ಮೆರುಗನ್ನು ನೀಡಿವೆ.

ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ, ಸಂಪೂರ್ಣವಾಗಿ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಪತಿ ಗೋವಿಂದ ಭಟ್ಟರಿಗೆ ಸರಿಯಾದ ಜೊತೆ ನೀಡಿದವರು ಮಾಲತಿಯವರು. ಹಳ್ಳಿಯ ತೋಟ, ಕೃಷಿ ಮನೆಗೆಲಸಗಳಲ್ಲೂ ಸಂತೃಪ್ತಿಯನ್ನು ಕಾಣಲು ಸಾಧ್ಯ ಎಂಬುದನ್ನು ಸ್ವಾನುಭವದಿಂದ ಮನಗಂಡವರು. ಹೀಗೆ ಪರಸ್ಪರರಿಗೆ ಬೆನ್ನೆಲುಬಾಗಿ, ಪ್ರೇರಕಶಕ್ತಿಯಾಗಿ ಹಾಲುಜೇನಿನಂತೆ ಸಮರಸ ಸಾಧಿಸಿದುದರಿಂದಲೇ ಮಾಲತಿಯವರ ಬರವಣಿಗೆ ಹೊಸ ಉತ್ಸಾಹವನ್ನು ಮೈಗೂಡಿಸಿಕೊಂಡು ಪುಷ್ಟಿಗೊಂಡಿದೆ. ಓರ್ವ ಗೃಹಿಣಿಯಾಗಿದ್ದು, ಕೌಟುಂಬಿಕ ಜವಾಬ್ದಾರಿಗಳ ಜೊತೆಗೆ ಸಾಹಿತ್ಯಿಕ ಹೊಣೆಯನ್ನೂ ಸಮರ್ಥವಾಗಿ ನಿಭಾಯಿಸಲು ಅವರಿಗೆ ಸಾಧ್ಯವಾಗಿದೆ. ಪತಿ, ಮಗ, ಸೊಸೆ ಮತ್ತು ಇಬ್ಬರು ಮೊಮ್ಮಕ್ಕಳೊಂದಿಗಿನ ಅವರ ಚಿಕ್ಕ ಸಂಸಾರವು ಪಿತ್ರಾರ್ಜಿತವಾಗಿ ಗೋಪಿಂದ ಭಟ್ಟರ ಪಾಲಿಗೆ ಬಂದ ಪುತ್ತೂರಿನ ಸಂಟ್ಯಾರು ಎಂಬಲ್ಲಿನ ಹಳ್ಳಿ ಮನೆಯಲ್ಲಿ ನೆಲೆಸಿದೆ. ಮಗ ಡಾ.ಎ.ಪಿ ರಾಧಾಕೃಷ್ಣ ಅವರು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ

ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ, ಮಗಳು ಎ.ಪಿ ಲಲಿತಾ ಮದುವೆಯಾಗಿ ಮೈಸೂರಿನಲ್ಲಿ ಸಣ್ಣ ಕೈಗಾರಿಕೆಯೊಂದನ್ನು ನಡೆಸುತ್ತಿದ್ದಾರೆ.

ಮಾಲತಿಯವರ ಬರಹ ಲೋಕವನ್ನು ಹೊಕ್ಕರೆ ನಮಗೆ ಅವರ ಹತ್ತೊಂಬತ್ತು ಕಾದಂಬರಿಗಳು, ಎರಡು ಸಣ್ಣ ಕಥಾಸಂಕಲನಗಳು ಹಾಗು ಏಳು ಸಂಕೀರ್ಣ ಕೃತಿಗಳು ದೊರಕುತ್ತವೆ. ಭಾಷೆಯ ಬಳಕೆ, ನಿರೂಪಣೆಯ ತಂತ್ರ, ವಸ್ತುವಿನ ಆಯ್ಕೆ ಮತ್ತು ನಿರ್ವಹಣೆ ಇವು ಯಾವುದರಲ್ಲೂ ಯಾವುದೇ ತೊಡಕಿಲ್ಲದೆ ಲೀಲಾಜಾಲವಾಗಿ ಮನಮುಟ್ಟುವಂತೆ ಬರೆಯುವ ಶೈಲಿ ಮಾಲತಿಯವರಿಗೆ ಕರಗತವಾಗಿದೆ. ಇದರ ಜೊತೆಗೆ ವಿಷಯ ವೈವಿಧ್ಯ ಮಾಲತಿಯವರ ಜನಪ್ರಿಯತೆಗೆ ಕಾರಣವಾಗಿದೆ. ಸಂಪ್ರದಾಯಬದ್ದವಾಗಿದ್ದುಕೊಂಡೇ ಪ್ರಗತಿಪರ ಎನ್ನುವುದಕ್ಕೂ ಮಿಗಿಲಾಗಿ ಜೀವಪರವಾದ ಆಶಾವಾದಿ ನಿಲುವುಗಳನ್ನು ತಮ್ಮ ಬರಹಗಳಲ್ಲಿ ಮಾಲತಿಯವರು ಪ್ರಕಟಿಸುತ್ತಾರೆ. ಸಂಪ್ರದಾಯಬದ್ದ ಸಮಾಜವು ಹೆಣ್ಣಿನ ಕುರಿತಾಗಿ ಹೊಂದಿರುವ ರೂಢಿಗತವಾದ ನಿಲುವುಗಳನ್ನು ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ಓದುಗರ ಮುಂದಿಡುವ ಮಾಲತಿಯವರು ಈ ಹಾದಿಯ ಸಂಘರ್ಷದ ಸ್ತರಗಳನ್ನು ಗುರುತ್ತಿಸುತ್ತಾರೆ. ಮತ್ತು ಕುಟುಂಬವನ್ನು ಒಳಗೊಂಡಂತೆ ಹೆಣ್ಣು ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಲು ಇರುವ ವಿಭಿನ್ನ ಸಾಧ್ಯತೆಗಳನ್ನು ಶೋಧಿಸುತ್ತಾರೆ. ಈ ಕಾರಣಗಳಿಂದಾಗಿ ಅವರು ಆಧುನೀಕರಣದ ರಭಸದ ನಡೆಯಲ್ಲಿ ಹೆಣ್ಣು ಸಿಕ್ಕಿ, ಕೊಚ್ಚಿಕೊಂಡು ಹೋಗದೆ, ಸಂಯಮದಿಂದ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳನ್ನು ಮುಂದಿಡುತ್ತಾರೆ.

ಕರಾವಳಿಯ ಜನಪ್ರಿಯ ಕತೆಗಾರ್ತಿಯಲ್ಲಿ ಒಬ್ಬರೆಂದು ಮಾಲತಿಯವರನ್ನು ಇದೀಗ ಗುರುತಿಸಲಾಗುತ್ತಿದೆ. ಸಾಹಿತ್ಯ ಕ್ಷೇತ್ರವನ್ನೂ ಬಿಡದೆ ಕಾಡುತ್ತಿರುವ ರಾಜಕೀಯದ ಭೂತ ಸಾಹಿತ್ಯ ಚರಿತ್ರೆಯ ಕಟ್ಟೋಣದಲ್ಲಿ ಇಲ್ಲಿನ ಲೇಖಕಿಯರನ್ನು ಕತ್ತಲಲ್ಲಿರಿಸಿದೆ. ಇದನ್ನೂ ಮೀರಿ ತಮ್ಮ ಬರವಣಿಗೆಯ ಅಂತಃಶಕ್ತಿಯಿಂದ ತಾವೇ ತಾವಾಗಿ ಬೆಳಕಿಗೆ ಬಂದ ಮುಖ್ಯರಲ್ಲಿ ಮಾಲತಿಯವರೂ ಒಬ್ಬರು. ಸಾಹಿತ್ಯ ವಲಯದ ಪ್ರಚಾರದ ಅಭಿಲಾಷೆಯಾಗಲಿ ಹಣದ ಲೋಭವಾಗಲೀ ಅವರನ್ನು ಕಾಡಿಲ್ಲ. ಅಷ್ಟರಮಟ್ಟಿಗೆ ಅವರು ಎಲ್ಲದರಿಂದ ಮುಕ್ತರಾಗಿ ತಮ್ಮ ಬರಹದ ಲೋಕವನ್ನು ಕಟ್ಟಿದರು. ಗುರುತಿಸಲಾದ ಸ್ಥಿತಿಗೆ ತಳ್ಳಿದ ಪರಿ ಅವನು ಮತ್ತು ಮಗ ಹಾಗೂ ಹೊಣೆ ಕತೆಗಳ ವಸ್ತುವಾಗಿದೆ. ಮನುಷ್ಯನ ವ್ಯಕ್ತಿತ್ವದ ಬಾಹ್ಯರೂಪ ಸಮಾಜವನ್ನು ಪ್ರಭಾವಿಸುವುದನ್ನು ತಿಳಿಸುವುದಕ್ಕೆ ಮಾನ ತೆಗೆದ ಉಡುಪು ಹಾಗು ಅವನು ಮತು ಮಗು ಕತೆಗಳು ಬಳಕೆಯಾಗಿವೆ. ಸಂಬಂಧಗಳನ್ನು ಮೀರಿ ಬೆಳೆಯಬೇಕಾದ ಮಾನವ ಪ್ರೇಮ, ಹದಿಹರೆಯ ಯುವಕ-ಯುವತಿಯರ ಕುರಿತ ಕತೆಗಾರ್ತಿಯ ಕಾಳಜಿ ವಸಂತದ ಹೂವುಗಳು, ರಕ್ಷಣೆ, ತಿರುವು- ಈ ಕತೆಗಳಲ್ಲಿ ವ್ಯಕ್ತವಾಗುತ್ತದೆ.

"'ಸಂಜೆ ಬಿಸಿಲು' (೨೦೦೪) ಅವರ ಎರಡನೆಯ ಕಥಾಸಂಕಲನವಾಗಿದೆ. ಹತ್ತೊಂಬತ್ತು ಕತೆಗಳ ಈ ಸಂಕಲನ ಬೆಂಗಳೂರಿನ ೨೦೦೪ರ ಸಾಲಿನ ಕಥಾರಂಗಂ ಪ್ರಶಸ್ತಿಗೆ ಭಾಜನವಾಗಿದೆ".[೧೧]

ಈ ಸಂಕಲನವ 'ಕೊರಮನ ಹೆಂಡತಿ' ಕತೆ ಅವರ 'ಕಾಡು ಕರೆಯಿತು' ಕಾದಂಬರಿಯನ್ನು ನೆನಪಿಸದರೆ 'ಚಿನ್ನದ ಬಳೆಗಳು' ಕತೆಯು ಎಲ್ಲೋ ಒಂದು ಅವರ 'ಪುಣ್ಯದ ಎಣ್ಣೆ' ಕಾದಂಬರಿಯನ್ನು ಮನಸ್ಸಿಗೆ ತರುತ್ತದೆ. ಹಿಂತಿರುಗಿ ಪಡೆದದ್ದು ಮತ್ತು 'ವಕ್ರರೇಖೆ' ಕತೆಗಳಲ್ಲಿ ಲಕ್ಷದೀಪೋತ್ಸವ ಮತ್ತು ರೈಲ್ವೇ ನಿಲ್ದಾಣದ ಜನರ ನಿಗ್ಗಿನಲ್ಲಿ ಕಳೆದು ಹೋಗಿ, ಧೀರ್ಘಕಾಲದ ಬಳಿಕ ಮರಳಿ ದೊರಕಿದ ಮಗಳ ಕುರಿತು ನಿರ್ಧಾರ ತೆಗೆದುಕೊಳ್ಳುವ ನಿರ್ಣಾಯಕ ಸಂಗತಿಯನ್ನು ಸಕಾರಾತ್ಮಕವಾಗಿ ನಿರ್ವಹಿಸಿದರೆ, 'ನಿರ್ಮಲ' ಕತೆಯು ಅಪಘಾತದಲ್ಲಿ ಸತ್ತು ಶಾಶ್ವತವಾಗಿ ದೂರಾದ ಎಳೆಮಗನ ತಾಯಿ ತನ್ನ ಮಾನಸಿಕ ಸ್ತಿಮಿತವನ್ನು ಕಳೆದುಕೊಂಡು ಅನುಭವಿಸುವ ನೋವನ್ನು ಹೇಳುತ್ತದೆ. 'ಹಿಂತಿರುಗಿ ಪಡೆದದ್ದು' ಮತ್ತು 'ವಕ್ರರೇಖೆ' ಈ ಎರಡು ಕತೆಗಳಲ್ಲಿ ಚಿಕ್ಕಪ್ರಾಯದಲ್ಲಿ ತಪ್ಪಿಸಿಕೊಂಡ ಮಕ್ಕಳು ಹುಡುಗಿಯರಾಗಿದ್ದಾರೆ. ಭವಾನಿಯ ಸಂದರ್ಭದಲ್ಲಿ ಅವಲ ಮನಸ್ಸಿನ ಅಭಿಪ್ರಾಯಕ್ಕೆ ಬೆಲೆ ಕೊಡಲು ತಯಾರಾಗುವ ಹೆತ್ತ ತಂದೆ ಅವಳಿಗೆ ತಮಗಿಂತ ಉತ್ತಮ ಭವಿಷ್ಯ ಕೊಡಬಲ್ಲ ಸಾಕು ತಂದೆ-ತಾಯಿಯರಿಗೆ ಅವಳನ್ನು ಒಪ್ಪಿಸುವ ನಿರ್ಧಾರಕ್ಕೆ ಬಂದರೆ, ಬೇಬಿಯ ಸಂದರ್ಭದಲ್ಲಿ ಸಮಾಜದಲ್ಲಿ ಪ್ರತಿಷ್ಟಿತರಾದ ತಂದೆ-ತಾಯಿ ಭಾವನಾತ್ಮಕ ನೆಲೆಯಿಂದ ಅವಳನ್ನು ಸ್ವೀಕರಿಸುವ ನಿರ್ಧಾರಕ್ಕೆ ಬರುವುದು ಓದುಗರ ನೆಲೆಯ ತೀರ್ಮಾನವು ಆಗಿದೆ. 'ನಿರ್ಮಲ' ಕತೆಯಲ್ಲಿ ತೀರಿಕೊಂಡ ಮಗು ಬಯಸಿ ಪಡೆದ ಗಂಡುಮಗುವಾಗಿದೆ ಎಂಬುದು ಮುಖ್ಯ. ಆದರೆ ಇಲ್ಲೆಲ್ಲ ಮಕ್ಕಳ ತಂದೆಯ ಬೇಜವಾಬ್ದಾರಿಯಿಂದ ಸಂಭವಿಸಿದ ಅಚಾತುರ್ಯದಿಂದ ನರಳುವವರು ತಾಯಂದಿರಾಗಿದ್ದಾರೆ.

ಈ ಸಂಕಲನದಲ್ಲಿ ಉಳಿದಂತೆ 'ಕಲ್ಲು ಕರಗಿತು' ಚಿನ್ನದ ಬಳೆಗಳು ಮತ್ತುಅತೃಪ್ತ ಆತ್ಮಗಳು ಹೆಚ್ಚು ಮುಖ್ಯವಾಗುತ್ತವೆ. ಮೊದಲು ಎರಡು ಕತೆಗಳಲ್ಲಿ ಬಂಗಾರದ ಆಭರಣಗಳ ಕುರಿತ ಸ್ತ್ರೀಯರ ಚಿಂತನೆಯ ವಿಭಿನ್ನ ಮುಖಗಳನ್ನು ಪ್ರಕಟಿಸಲಾಗಿದೆ. 'ಕಲ್ಲು ಕರುಗಿತು' ಕತೆಯಲ್ಲಿ ಹೊನ್ನಮ್ಮ 'ತನ್ನದು' ಎಂಬ ವ್ಯಾಮೋಹದ ಜೊತೆಗೆ ತನ್ನ ಬದುಕಿನ 'ಸುಭದ್ರತೆ'ಯ ದೃಷ್ಟಿಯಿಂದ ತನ್ನ ಚಿನ್ನವನ್ನು ಮಗಳಿಗೆ ಕೊಡಲು ಒಪ್ಪುವುದಿಲ್ಲ. ಆದರೆ 'ಚಿನ್ನದ ಬಳೆಗಳು' ಕತೆಯಲ್ಲಿ ಶಾರದೆಯ ಸಂದರ್ಭದಲ್ಲಿ ಅದು ತಲೆತಲಾಂತರದಿಂದ ಬಂದ ಸಾಂಪ್ರಾದಾಯಿಕ ಜವಾಬ್ದಾರಿಯ, ಅಧಿಕಾರದ ಸಂಕೇತವಾಗಿದೆ. ಇದರಲ್ಲಿ ಮಾವಯ್ಯ ಅದನ್ನು ಪರಂಪರೆಯ ರಕ್ಷಣೆಯ ದೃಷ್ಟಿಯಿಂದ ನೋಡಿದರೆ, ಎರಡನೇಯ ಸೊಸೆ ಆಧುನಿಕ ದೃಷ್ಟಿಯಿಂದ ವಿವೇಚಿಸಿ, ಬಳೆಗಳನ್ನು ಶಾರದೆಗೆ ಹಿಂದಿರುಗಿಸುವ ಮೂಲಕ ಜಾಣತನದಿಂದ ಕುಟುಂಬ ಸೌಹಾರ್ದತೆಯನ್ನು ಉಳಿಸಿಕೊಳ್ಳಲು ಬಳಸಿಕೊಳ್ಳುತ್ತಾಳೆ. ಆದರೆ ಇದಕ್ಕಿಂತ ಭಿನ್ನವಾಗಿ 'ಅತೃಪ್ತ ಆತ್ಮಗಳು' ಕತೆಯು ನೈತಿಕ ತಳಹದಿಯ ಮೇಲೆ ಸಂಪತ್ತಿನ (ಬಂಗಾರ ಮತ್ತು ಭೂಮಿ) ಸಂಗ್ರಹದ ಮೌಲ್ಯವನ್ನು ಪ್ರತಿಪಾದಿಸುತ್ತದೆ. ಹಾಗಾಗಿ ನಾಲ್ಕನೆಯ ತಲೆಮಾರಿನ ಈಶ್ವರ ಬಂಗಾರದ ಸೊಂಟಪಟ್ಟಿಯ ಒಡತಿ ಆಲೀಮಾಳ ಇತಿಹಾಸವನ್ನು ಕೆದಕ ಹೊರಡುತ್ತಾನೆ.

'ಇಲ್ಲದವರು' ಕತೆ ಭವಿಷ್ಯದ ಕುರಿತ ಗಂಡು-ಹೆಣ್ಣಿನ ಚಿಂತನೆಗಳ ಮುಖಾಮುಖಿಯಾಗಿದೆ. ನಾಲ್ವರು ಹೆಣ್ಣು ಮಕ್ಕಳ ತಾಯಿ ಸಾವಿತ್ರಿ ತನ್ನ ಪತಿಯ ಸಾವಿನಿಂದ ಅನುಭವಿಸುವ ಅತಂತ್ರತೆ. ಈ ಸಂದರ್ಭವೂ

ಅನಾವರಣಗೊಳಿಸುವ ಬಂಧುಗಳ ಸ್ವಾರ್ಥಬುದ್ಧಿ ಇಲ್ಲಿ ಮುಖ್ಯವಾಗುತ್ತದೆ. ಅಲ್ಲಿಯತನಕ ದುರ್ಬಲವಾಗಿ ಕಾಣುವ ಸಾವಿತ್ರಿಯ ವ್ಯಕ್ತಿತ್ವ ಕತೆಯ ಕೊನೆಯಲ್ಲಿ ಅರೆಯುವ ಕಲ್ಲಿನ ಅಡಿಯಿಂದ ಹೂತಿಟ್ಟ ಚಿನ್ನ-ಹಣವನ್ನು ಹೊರತೆಗೆಯುವ ವೇಳೆಗೆ ಸಂಪೂರ್ಣ ಬದಲಾಗಿಬಿಡುತ್ತದೆ. ಎಂಬಲ್ಲಿ ಹೊಸ ಬದುಕಿನ ಕುರಿತು ಸ್ತ್ರೀ ಚಿಂತನೆಯ ಧನಾತ್ಮಕ ಅಂಸವನ್ನು ಕತೆ ಒಳಗೊಂಡಿದೆ. ಬೆಂಗಳೂರು ಆಕಾಶವಾಣಿಯಿಂದ ಈ ಕತೆ ನಾಟಕರೂಪದಲ್ಲಿ ಬಿತ್ತರಗೊಂಡಿದೆ.

ಇವುಗಳಲ್ಲದೆ, 'ವಿಶ್ವಾಸ' ಮತ್ತು 'ಅಪವಾದ' ಕತೆಗಳು ಎರಡು ಮುಖಗಳ ವಸ್ತುವನ್ನು ಪ್ರತ್ಯೇಕವಾಗಿ ನಿರ್ವಹಿಸುವ ಕಾರಣಕ್ಕೆ ಗಮನಸೆಳೆಯುತ್ತವೆ. ಅಲ್ಪಸಮಯದ ಪರಿಚಯವಾದರೂ ರಮೇಶ ರಾಯರಲ್ಲಿ ದೊಡ್ಡ ಮೊತ್ತಕ್ಕೆ ವಿಶ್ವಾಸವಿಡುವ ವೆಂಕಟೇಶ ಪ್ರಭುಗಳು ಒಂದೆಡೆಯಾದರೆ, ದೀರ್ಘಕಾಲದ ಒಡನಾಟವಿದ್ದರೂ, ಅನಿರೀಕ್ಷಿತ ಬೆಳವಣಿಗೆಯೊಂದು ಕಾರಣವಾಗಿ ಅಪ್ಪಣ್ಣನ ಪ್ರಮಾಣಿಕತೆಯನ್ನೇ ಅಪಮಾನಿಸುವ ವಠಾರದ ಮಂದಿ ಇನ್ನೊಂದೆಡೆ ಇದ್ದಾರೆ. ಇಲ್ಲಿ ಬಾಯಿಮಾತಿನ ವ್ಯವಹಾರದ ಹಿಂದಿನ ಜನಬದುಕಿನ ಮಾದರಿಯ ಎಲ್ಲವನ್ನು ದಾಖಲೆಯ ಮೂಲಕವೇ ಸಾದಿಸುವ ಆಧುನಿಕರ ಮಾದರಿಗಳು ಇವೆ. ಹಾಗೆಯೆ ತಮ್ಮ ಕಾರ್ಯಸಾಧನೆಯ ಉದ್ದೇಶವಿರುವ ವಠಾರದ ಮಂದಿ ಅಪ್ಪಣ್ಣನಲ್ಲಿ ಇಟ್ಟ ವಿಶ್ವಾಸ ಕೇವಲ ಟೊಳ್ಳುತನದ್ದು ಎಂಬುದೂ ಆದುನಿಕ ಜಗತ್ತಿನ ಇಂದಿನ ಸೋಗಲಾಡಿತನದ ವಾಸ್ತವವಾಗಿದೆ.

ಲೇಖಕಿಯಾಗಿ ಅವರ ಬರವಣಿಗೆಗಳು ಕೇವಲ ಸ್ತ್ರೀ ಜಗತ್ತಿನ ಚಿತ್ರಣಕ್ಕಷ್ಟೇ ಸೀಮಿತಗೊಳ್ಳದೆ ಪುರುಷ ಪಾತ್ರಗಳನ್ನು ಪುರುಷ ಜಗತ್ತನ್ನೂ ದಕ್ಕಿಸಿಕೊಂಡಿದೆ. ಅವರ ಪ್ರಭುದ್ದ ವೈಚಾರಿಕತೆಯ ಮನಸ್ಸಿಗೆ ಸ್ತ್ರೀತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯಾತ್ಮಕ ಈ ಮೂರು ಸ್ತರಗಳನ್ನು ಗ್ರಹಿಸಲು ಸಾಧ್ಯವಾಗಿದೆ. ಹೀಗಾಗಿ ಇವುಗಳಿಗೆ ಪೂರಕವೆನಿಸುವ ಚಿತ್ರಣ ಅವರ ಕಾದಂಬರಿಗಳಲ್ಲಿ ನಮಗೆ ದೊರಕುತ್ತದೆ. ಅವರ ಕೃತಿಗಳಲ್ಲಿ ಮಾವ ಅಳಿಯನ ಪ್ರತಿಷ್ಠೆಯ ನಡುವೆ ನಲುಗುವ ಹೆಣ್ಣು ಇದ್ದಾಳೆ (ಸಂಜೆ ಬಿಸಿಲು ಕತೆಯ ಅಮ್ಮಯ್ಯ) ತನ್ನ ಸ್ವಂತಿಕೆಗಾಗಿ ದೃಢನಿರ್ದಾರಗಳನ್ನು ಕೈಗೊಂಡು ಒಂದು ಹಂತದಲ್ಲಿ ಕೌಟುಂಬಿಕ ಬದುಕು, ಪತಿ, ಮಕ್ಕಳು, ಸಂಸಾರವನ್ನು ತ್ಯಾಗಮಾಡುವ ಪ್ರಬುದ್ಧಳಾದ ದಿಟ್ಟ ಹೆಣ್ಣು ಇದ್ದಾಳೆ. (ಖಾಲಿ ಮನೆಯ ಕುಮುದ, ನೂಪುರಗಾನದ ಗಾಯತ್ರಿ, ಮಂದಾರ'ದ ಅನುರಾಧ) ಸಾಮಾಜಿಕ ಮೌಲ್ಯಗಳನ್ನು ಗೌರವಿಸುವ, ಕೌಟುಂಬಿಕ ಪರಿಮಿತಿಗಳನ್ನು ನಿಬಾಯಿಸಬಲ್ಲ ಸಾಮರ್ಥ್ಯವಂತೆಯೂ ಇದ್ದಾಳೆ. (ಇಲ್ಲದವರು ಕತೆಯ ಸಾವಿತ್ರಿ, ಬೆಳಕು ಕತೆಯ ಸುಮಾ, ಅರ್ಹತೆಯ ಸುಮತಿ).

"ಆಕಾಶವಾಣಿಯಲ್ಲಿ ಮಾಲತಿಯವರ ಲೇಖನಗಳ ಜೊತೆಗೆ ಅವರ ಸಣ್ಣಕತೆಗಳು ಪ್ರಸಾರಗೊಂಡಿವೆ. ಅಲ್ಲದೆ, ಅವುಗಳಲ್ಲಿ ಸಂಜೆ ಬಿಸಿಲು ಕಥಾಸಂಕಲನದ ಯೋಗ, ಕತೆಯನ್ನು ಲಕ್ಷ್ಮಣಾಚಾರ್ ಅವರು ಮಲೆಯಾಳಂ ಭಾಷೆಗೂ ಅರ್ಹತೆ, ಸಂಕೀರ್ಣ ಬರವಣಿಗೆಗಳು."[೧೨]

ಸುಮಾರು ಏಳು ಸಂಕೀರ್ಣ ಕೃತಿಗಳನ್ನು ರಚಿಸಿರುವ ಮಾಲತಿಯವರು ತಾನು ನಂಬಿರುವಂತೆ ಸಾಹಿತ್ಯಕ್ಕಿರುವ ಸಾಮಾಜಿಕ ಜವಾಬ್ದಾರಿಯನ್ನು ಗಟ್ಟಿಗೊಳಿಸಿದವರು ಈ ನಿಟ್ಟಿನಲ್ಲಿ ಅವರ ಗ್ರಾಮೀಣ

ಮಹಿಳೆಯರು ಸುಖದ ಹಾದಿ(೧೯೮೧) ಎಂಬ ಸಾಹಿತ್ಯಿಕ ಪ್ರಯತ್ನಗಳಿಗೆ ಕ್ರಮವಾಗಿ ೧೮೭೮ ಮತ್ತು ೧೯೮೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಬಹುಮಾನ ಹಾಗು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಲಭಿಸಿವೆ. ಇವುಗಳಲ್ಲದೆ, ಮಹಿಳೆ, ಸಮಾಜ ಕಲ್ಯಾಣ (೧೯೮೮) ಮಕ್ಕಳ ಪಾಲನೆ (೧೯೯೦), ದಿವ್ಯಪಂಥ (ಸ್ತ್ರೀಯರಿಗಾಗಿ) (೧೯೯೦) ಸಮಯದ ಸದುಪಯೊಗ (೧೯೯೪) ಗಳೆಂಬ ಕೃತಿಗಳು ಸಾಮಾಜಿಕ ಕಳಕಳಿಯ ಗುರುತ್ವದ ಪ್ರಕಟವಾಗಿದೆ. ಜೊತೆಗೆ ಹಳ್ಳಿಗೆ ಬಂದ ಎಳೆಯರು ಎಂಬ ಮಕ್ಕಳ ಕತೆಯನ್ನೂ ಪ್ರಕಟಿಸಿದಾರೆ.

ಮಾನವ ತನನ ಬುದ್ದಿ ಮತು ಮನಸ್ಸುಗಳ ಮೇಲೆ ಹತೋಟಿ ಸಾದಿಸುವ ಮೂಲಕ ಸಾಂಸರಿಕ ಬದುಕನ್ನು ಸುಖಮಯಗೊಳಿಸಬಹುದು ಎಂಬುದಕ್ಕೆ ಹದಿಮೂರು ಲೇಖನಗಳನೊಳಗೊಂಡ ಸುಖದ ಹಾದಿ ಕೃತಿ ದಾರಿ ತೊರಿಸುತ್ತದೆ. ವ್ಯಕ್ತಿಯ ಬುದ್ದಿ, ಮನಸ್ಸು ಮತ್ತು ಶರೀರಗಳಲ್ಲಿ ವ್ಯಾಪಿಸಿರುವ ಸುಖಾಪೇಕ್ಷೆಯ ಮೂಲವನ್ನು ಅದರ ವ್ಯಾಪಕತೆಯನ್ನು ಇದರಲ್ಲಿ ಮಾಲತಿಯವರು ವಿವರಿಸಿ, ವಿಶ್ಲೇಷಿಸಿದ್ದಾರೆ. ದೈನಂದಿನ ಜಂಜಾಟಗಳ ನಡುವೆಯೂ ನಮ್ಮನ್ನು ಕಾಡುವ ಒಂಟಿತನ, ನೋವು, ಕೀಳುರಿಮೆಗಳನ್ನು ಗೆಲ್ಲುವ ಮಾರ್ಗವನ್ನು ಈ ಕೃತಿ ಸೂಚಿಸುತ್ತದೆ. ಮಹಿಳೆಯರನ್ನೇ ಗಮನದಲ್ಲಿಟ್ಟುಕೊಂಡು ಬರೆದ ಲೇಖನಗಳ ಸಂಕಲನ ದಿವ್ಯಪಥ ಮಹಿಳೆ ವಿವಿದ ವಯೋಮಾನಗಳಲ್ಲಿ ಎದುರಿಸುವ ಸಮಕೀರ್ಣ ಸನ್ನಿವೇಶಗಳ ಸ್ವರೂಪ ಮತ್ತು ವಿನ್ಯಸ, ಸ್ವಾವಲಂಬನೆಯ ಅಗತ್ಯ. ಸಂತೋಷ ಮತು ಶಾಂತಿಯನ್ನು ಸಾಧಿಸುವ ಬಗೆಯ ಕುರಿತಂತೆ ಈ ಕೃತಿ ಹೇಳುತ್ತದೆ. ಕುಟುಂಬ, ಕುಟುಂಬದಲ್ಲಿ ಹೆಣ್ಣು ಕುಟುಂಬ ಮತ್ತು ಮಕ್ಕಳ ಕುರಿತು ಅವಳ ಹೊಣೆಗಾರಿಕೆ, ಇವುಗಳ ನಿರ್ವಹಣೆಯಲ್ಲಿ ಆಕೆ ಅಳವಡಿಸಿಕೊಳ್ಳಬೇಕಾದ ಶಿಸ್ತು ಮೊದಲಾದ ಸಕಾರಾತ್ಮಕ ಗುಣಗಳು, ಬದುಕನ್ನು ಹಸನಾಗಿಸುವ ಸುಖದ ಸೂತ್ರ ಹೆಣ್ಣಿನ ಒಳಿತಿನ ಕುರಿತು ಸಮಾಜ ಮತು ಸಮಾಜದ ಒಳಿತಿನಲ್ಲಿ ಹೆಣ್ಣು ಈ ಎಲ್ಲ ಅಂಶಗಳನ್ನು ಈ ಕೃತಿಗಳು ಒಳಗೊಂಡಿವೆ. ಸ್ತ್ರೀವಾದಿ ದೃಷ್ಟಿಕೊನದಿಂದ ಬದುಕನ್ನು ವಿವೇಚಿಸುವ ಮಾಲತಿಯವರ ಆಶಾವಾದಿ ಜೀವನ ದೃಷ್ಟಿ ಅವರ ಈ ಎಲ್ಲ ಕೃತಿಗಳಲ್ಲಿ ಗೋಚರಿಸುತ್ತದೆ.

ಹೀಗೆ ಕಥೆ, ಕಾದಂಬರಿ ಹಾಗೂ ಲೇಖನ ಸಂಗ್ರಹಗಳ ಮೂಲಕ ಅವರು ಅಭಿವ್ಯಕ್ತಿಸುವ ಗ್ರಾಮೀಣ ನಗರ ಜೀವನ, ಮಹಿಳೆಯರ ಸರ್ವಾಂಗೀಣ ಅಭಿವೃಧ್ದಿ, ಆರೋಗ್ಯ ಶಿಶುಪಾಲನೆ, ವೈಚಾರಿಕತೆ, ಉಳಿತಾಯದ ಮಾರ್ಗಗಳಂತಹ ಬಹುಮುಖಿ ಆಸಕ್ತಿಗಳು ಮಾಲತಿಯವರ ಪ್ರಬುದ್ದ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

'ಇಲ್ಲದವರು' ಕತೆ ಭವಿಷ್ಯದ ಕುರಿತ ಗಂಡು-ಹೆಣ್ಣಿನ ಚಿಂತನೆಗಳ ಮುಖಾಮುಖಿಯಾಗಿದೆ. ನಾಲ್ವರು ಹೆಣ್ಣುಮಕ್ಕಳು ತಾಯಿ ಸಾವಿತ್ರಿ ತನ್ನ ಪತಿಯ ಸಾವಿನಿಂದ ಅನುಭವಿಸುವ ಅತಂತ್ರತೆ, ಈ ಸಂದರ್ಭವು ಅನಾವರಣಗೊಳಿಸುವ ಬಂಧುಗಳ ಸ್ವಾರ್ಥಬುದ್ಧಿ ಇಲ್ಲಿ ಮುಖ್ಯವಾಗುತ್ತವೆ. ಅಲ್ಲಿಯತನಕ ದುರ್ಬಲವಾಗಿ ಕಾಣುವ ಸಾವಿತ್ರಿಯ ವ್ಯಕ್ತಿತ್ವ ಕತೆಯ ಕೊನೆಯಲ್ಲಿ ಅರೆಯುವ ಕಲ್ಲಿನ ಅಡಿಯಿಂದ ಹೂತಿಟ್ಟ ಚಿನ್ನ ಹಣವನ್ನು ಹೊರತೆಗೆಯುವ ವೇಳೆಗೆ ಸಂಪೂರ್ಣ ಬದಲಾಗಿರುತ್ತದೆ ಎಂಬಲ್ಲಿ ಹೊಸ ಬದುಕಿನ ಕುರಿತ ಸ್ತ್ರೀ ಚಿಂತನೆಯ

ಧನಾತ್ಮಕ ಅಂಶವನ್ನು ಕತೆ ಒಳಗೊಂಡಿದೆ. ಬೆಂಗಳೂರು ಆಕಾಶವಾಣಿಯ ಈ ಕತೆ ನಾಟಕ ರೂಪದಲ್ಲಿ ಬಿತ್ತರಗೊಂಡಿದೆ.

ಇವುಗಳಲ್ಲದೆ, 'ವಿಶ್ವಾಸ' ಮತ್ತು 'ಅಪವಾದ' ಕತೆಗಳು ನಂಬಿಕೆಯ ಎರಡು ಮುಖಗಳು ವಸ್ತುವನ್ನು ಪ್ರತ್ಯೇಕವಾಗಿ ನಿರ್ವಹಿಸುವ ಕಾರಣಕ್ಕೆ ಗಮನಸೆಳೆಯುತ್ತವೆ. ಅಲ್ಪಸಮಯದ ಪರಿಚಯವಾದರೂ ರಮೇಶರಾಯರಲ್ಲಿ ದೊಡ್ಡ ಮೊತ್ತಕ್ಕೆ ವಿಶ್ವಾಸವಿಡುವ ವೆಂಕಟೇಶ ಪ್ರಭುಗಳು ಒಂದೆಡೆಯಾದರೆ, ದೀರ್ಘಕಾಲದ ಒಡನಾಟವಿದ್ದರೂ, ಅನಿರೀಕ್ಷಿತ ಬೆಳವಣಿಗೆಯೊಂದಿಗೆ ಕಾರಣವಾಗಿ ಅಪ್ಪಣ್ಣನ ಪ್ರಾಮಾಣಿಕತೆಯನ್ನೇ ಅಪಮಾನಿಸುವ ವಠಾರದ ಮಂದಿ ಇನ್ನೊಂದೆಡೆ ಇದ್ದಾರೆ. ಇಲ್ಲಿ ಬಾಯಿಮಾತಿನ ವ್ಯವಹಾರದ ಹಿಂದಿನ ಜನಬದುಕಿನ ಮಾದರಿಯ ಎದುರು ಎಲ್ಲವನ್ನು ದಾಖಲೆಯ ಮೂಲಕವೇ ಸಾಧಿಸುವ ಆಧುನಿಕರ ಮಾದರಿಗಳೂ ಇವೆ. ಹಾಗೆಯೇ ತಮ್ಮ ಕಾರ್ಯಸಾಧನೆಯ ಉದ್ದೇಶವಿರುವ ವಠಾರದ ಮಂದಿ ಅಪ್ಪಣ್ಣನಲ್ಲಿ ಇಟ್ಟ ವಿಶ್ವಾಸ ಕೇವಲ ಟೊಳ್ಳುತನದ್ದು ಎಂಬುದೂ ಆಧುನಿಕ ಜಗತ್ತಿನ ಇಂದಿನ ಸೋಗಲಾಡಿತನದ ವಾಸ್ತವವಾಗಿದೆ.

"ಆಕಾಶವಾಣಿಯಲ್ಲಿ ಮಾಲತಿಯವರ ಲೇಖನಗಳ ಜೊತೆಗೆ ಅವರ ಸಣ್ಣಕತೆಗಳೂ ಪ್ರಸಾರಗೊಂಡಿವೆ. ಅಲ್ಲದೆ, ಅವುಗಳಲ್ಲಿ ಸಂಜೆಬಿಸಿಲು ಕಥಾಸಂಕಲನದ 'ಯೋಗ' ಕತೆಯನ್ನು ಲಕ್ಷ್ಮಣಾಚಾರ್ ಅವರು ಮಲೆಯಾಳಂ ಭಾಷೆಗೂ, 'ಅರ್ಹತೆ' ಕತೆಯನ್ನು ಪ್ರಮೋದ ಕುಮಾರ ಅವರು ತೆಲುಗು ಭಾಷೆಗೂ ಅನುವಾದಿಸಿದ್ದಾರೆ". [೧೩]

ಸುಮಾರು ಏಳು ಸಂಕೀರ್ಣ ಕೃತಿಗಳನ್ನು ರಚಿಸಿರುವ ಮಾಲತಿಯವರು, ತಾನು ನಂಬಿರುವಂತೆ ಸಾಹಿತ್ಯಕ್ಕಿರುವ ಸಾಮಾಜಿಕ ಜವಾಬ್ದಾರಿಯನ್ನು ಗಟ್ಟಿಗೊಳಿಸಿದವರು. ಈ ನಿಟ್ಟಿನಲ್ಲಿ ಅವರ 'ಗ್ರಾಮೀಣ ಮಹಿಳೆಯರು'(೧೯೭೮), 'ಸುಖದ ಹಾದಿ'(೧೯೮೧) ಎಂಬ ಸಾಹಿತಿಕ ಪ್ರಯತ್ನಗಳಿಗೆ ಕ್ರಮವಾಗಿ ೧೯೭೮ ಮತ್ತು ೧೯೮೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ಹಾಗೂ ಕರ್ನಾಟಕ ಸಾಹಿತ್ಯ ಪರಿಷತ್ತಿನ ಬಹುಮಾನಗಳು ಲಭಿಸಿವೆ. ಇವುಗಳಲ್ಲದೆ, 'ಮಹಿಳೆ: ಸಮಾಜ ಕಲ್ಯಾನ' (೧೯೮೮), 'ಮಕ್ಕಳ ಪಾಲನೆ'(೧೯೯೦), 'ದಿವ್ಯಪಥ'(ಸ್ತ್ರೀಯರಿಗಾಗಿ) (೧೯೯೦), 'ಸಮಯದ ಸದುಪಯೋಗ' (೧೯೯೪) ಗಳೆಂಬ ಕೃತಿಗಳೂ ಸಾಮಾಜಿಕ ಕಳಕಳಿಯ ಗುರುತ್ವದ ನೆಲೆಯಲ್ಲಿ ಪ್ರಕಟವಾಗಿದೆ. ಜೊತೆಗೆ 'ಹಳ್ಳಿಗೆ ಬಂದ ಎಳೆಯರು' (೧೯೭೯) ಎಂಬ ಮಕ್ಕಳ ಕತೆಯನ್ನೂ ಪ್ರಕಟಿಸಿದ್ದಾರೆ.

ಹೀಗೆ ಕಥೆ, ಕಾದಂಬರಿ ಹಾಗೂ ಲೇಖನ ಸಂಗ್ರಹಗಳ ಮೂಲಕ ಅವರು ಅಭಿವ್ಯಕ್ತಿಸುವ ಗ್ರಾಮೀಣ–ನಗರ ಜೀವನ, ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ, ಆರೋಗ್ಯ, ಶಿಶುಪಾಲನೆ, ಉಳಿತಾಯದ ಮಾರ್ಗಗಳಂತಹ ಬಹುಮುಖಿ ಆಸಕ್ತಿಗಳು ಮಾಲತಿಯವರ ಪ್ರಬುದ್ಧ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

೧೯೯೪ರಲ್ಲಿ ಕರಾವಳಿ ಲೇಖಕಿಯರು ಮತ್ತು ವಾಚಕಿಯರ ಸಂಘವು ನಡೆಸಿದ ಜಿಲ್ಲಾಮಟ್ಟದ ಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮಾಲತಿಯವರು, ೨೦೦೫ರಲ್ಲಿ ಪುತ್ತೂರಿನ ಕೆದಂಬಾಡಿಯಲ್ಲಿ ನಡೆದ ಪುತ್ತೂರು ತಾಲೂಕು ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯೂ ಆಗಿದ್ದರು. ೧೯೯೨ರಲ್ಲಿ ಪುತ್ತೂರಿನ ಡಾನ್ ಬಾಸ್ಕೋ ಕ್ಲಬ್ ಮಾಲತಿಯವರಿಗೆ ತನ್ನ ಗೌರವವನ್ನು ಸಲ್ಲಿಸಿದೆ. ಅಲ್ಲದೆ, ೧೯೯೪ರಲ್ಲಿ ಹಿರೀಮಗಳೂರಿನ ಕೋದಂಡರಾಮ ದೇವಸ್ಥಾನದ ಭಾರ್ಗವ ಪ್ರಶಸ್ತಿ ಸಲ್ಲಿಸುವ ಮೂಲಕ ತನ್ನನ್ನು ತಾನು ಗೌರವಿಸಿಕೊಂಡಿದೆ.

೩. ಪದ್ಮಾ ಶೆಣೈ

"ಪದ್ಮಾ ಅವರು ೧೯೩೩ ನೇ ಇಸವಿ ನವೆಂಬರ್ ೩೦ರಂದು ಮದ್ರಾಸಿನಲ್ಲಿ ಜನಿಸಿದರು. ಇವರ ತಂದೆ ರಾಮ ಬಾಳಿಗ; ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಲಲ್ಲಿ ಪಾಂಡಿತ್ಯವಿದ್ದ ವಿದ್ವಾಂಸರು. ತಾಯಿ ಲಕ್ಷ್ಮೀದೇವಿ. ಬಾಲ್ಯದ ದಿನಗಳನ್ನು ಬೇರೆ ಬೇರೆ ಊರುಗಳಲ್ಲಿ ಕಳೆದ ಪದ್ಮಾ ಅವರು ಮೆಟ್ರಿಕ್ ಮುಗಿಸಿದ ನಂತರ ನೆಲೆ ನಿಂತದ್ದು ಉಡುಪಿಯಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಸಾಂಸ್ಕೃತಿಕ ಕೇಂದ್ರವೆಂದು ಪ್ರಸಿದ್ಧವಾಗಿದ್ದ ಉಡುಪಿ, ತನ್ನ ಶೈಕ್ಷಣಿಕ ಹಾಗೂ ಆರ್ಥಿಕ ರಂಗದ ಸಾಧನೆಗಳ ಮೂಲಕ ಪ್ರಗತಿ ಪಥದಲ್ಲಿ ಸಾಗುತ್ತಿರುವ ನಗರವಾಗಿ ಗುರುತಿಸಿಕೊಳ್ಳುವ ಹವಣಿಕೆಯಲ್ಲಿದ್ದ ಕಾಲ. ಆಗಷ್ಟೇ ಜಿಲ್ಲೆಯಲ್ಲಿ ಕಾಲೂರಿದ ಬ್ಯಾಂಕಿಂಗ್ ಉದ್ದಿಮೆ ಮಹಿಳೆಯರಿಗೆ ಪ್ರಾಶಸ್ತ್ಯ ನೀಡಿದ ಫಲವಾಗಿ, ನೂರಾರು ಸುಶಿಕ್ಷಿತ ಯುವತಿಯರು ಬ್ಯಾಂಕ್ ಸೇರುವಂತಾಯಿತು. ಹೀಗೆ ಬ್ಯಾಂಕ್ ನೌಕರಿಗೆ ಸೇರಿದವರಲ್ಲಿ ಪದ್ಮಾ ಕೂಡಾ ಒಬ್ಬರು".[೧೪]

ವಾಣಿಜ್ಯ ಕ್ಷೇತ್ರದ ದುಡಿಮೆ ಇವರಿಗೆ ಆರ್ಥಿಕ ನೆಲೆಗಟ್ಟನ್ನು ಕಲ್ಪಿಸುವುದರೊಂದಿಗೆ, ಸಮಾನ ಅಭಿರುಚಿಯ ಸ್ನೇಹಿತೆಯರನ್ನೂ ಸಂಪಾದಿಸಿಕೊಟ್ಟಿತು. ಹೊರ ಜಗತ್ತಿನ ಮುಕ್ತ ಅವಕಾಶದಲ್ಲಿ ಅವರ ಹವ್ಯಾಸ, ಅಭಿರುಚಿಗಳು ಸ್ಪಷ್ಟರೂಪವನ್ನು ತಾಳುವಷ್ಟರಲ್ಲಿ ಮದುವೆ ಪ್ರಸ್ತಾಪ ಬಂತು. ವಿವಾಹವಾದ ನಂತರ ಅವರು ನೌಕರಿ ಬಿಟ್ಟು, ಪೂರ್ಣ ಪ್ರಮಾಣದಲ್ಲಿ ಗೃಹಿಣಿ ಬದುಕನ್ನು ಆರಿಸಿಕೊಂಡರು. ಪತಿ ಮೋಹನ ಶೆಣೈ ಮತ್ತು ಇಬ್ಬರು ಗಂಡುಮಕ್ಕಳ ಸುಖೀ ಸಂಸಾರ ಅವರದಾಯಿತು. ಪತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯನಿರ್ವಾಹಕರಾಗಿದ್ದುದರಿಂದ, ದಕ್ಷಿಣಕನ್ನಡದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯನ್ನು ಹುಟ್ಟು ಹಾಕುವುದರಲ್ಲಿ ಪದ್ಮಾ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಶಿಬಿರಗಳನ್ನು ಏರ್ಪಡಿಸುವುದು, ಮಹಿಳೆಯರನ್ನು ಸಂಘಟಿಸುವುದು, ಧರ್ಮ, ಸಂಸ್ಕೃತಿಯ ಪ್ರಚಾರ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮನೆ, ಮಕ್ಕಳ ಜವಾಬ್ದಾರಿಯೂ ಸೇರಿದಂತೆ ಬಿಡುವಿಲ್ಲದ ದುಡಿಮೆಯಲ್ಲಿ ತೊಡಗಿಸಿಕೊಂಡಿರುವಾಗಲೇ ಪತಿ ರಾಜಕೀಯ ಮೀಸಾ ಬಂಧಿಯಾಗಿ ಸೆರೆಮನೆ ಸೇರಿದ್ದು ಅವರ ಪಾಲಿಗೆ ಸತ್ವಪರೀಕ್ಷೆಯೇ ಆಯಿತು.

ಬದುಕು ನೀಡಿದ ಸವಾಲನ್ನು ಕೆಚ್ಚೆದೆಯಿಂದ ಎದುರಿಸಿದ ಪದ್ಮಾ ಶೆಣೈ "ಹೆಣ್ಣು ಅಸಹಾಯಕಳಾದರೆ ಸಮಾಜ ಅವಳನ್ನು ಯಾವ ರೀತಿ ಶೋಷಿಸುತ್ತದೆ"[೧೫] ಎಂಬ ಸತ್ಯವನ್ನು ಕಣ್ಣಾರೆ ನೋಡಿ ಅನುಭವಿಸಿದರು.

ಪತಿಯ ವ್ಯಾಪಾರ ವಹಿವಾಟುಗಳನ್ನು ಏಕಾಂಗಿಯಾಗಿ ನಿರ್ವಹಿಸಬೇಕಾದ ಪ್ರಸಂಗಗಳಲ್ಲಿ ಅವರಿಗೆ ಆಸರೆಯಾಗಿ ಒದಗಿದ್ದು ಹೆತ್ತ ತಂದೆಯ ಪ್ರೋತ್ಸಾಹದ ನುಡಿಗಳು ಹಾಗೂ ಆಪ್ತವರ್ಗದ ಸಹಾಯ ಹಸ್ತಗಳು. ಓರ್ವ ಗೃಹಿಣಿಯಾಗಿ ಅವರು ಸಂತೃಪ್ತ ಬದುಕನ್ನು ನಡೆಸಿದ್ದಾರೆ. ಪತಿಯ ಸಹಕಾರ ಪ್ರೋತ್ಸಾಹಗಳಿಂದ ಓದು, ಬರೆಹ, ಸಾಮಾಜಿಕ–ಸಾಹಿತ್ಯಕ ಚಟುವಟಿಕೆಗಳಲ್ಲಿ ಸಂಪೂರ್ಣ ರೀತಿಯಲ್ಲಿ ತೊಡಗಿಸಿಕೊಂಡ ತೃಪ್ತಿ ಅವರಿಗಿದೆ. ಮೇಧಾವಿ ಮಕ್ಕಳಿಬ್ಬರು ವೈದ್ಯರಾಗಿ ದೇಶವಿದೇಶಗಳಲ್ಲಿ ಖ್ಯಾತಿ ಪಡೆದು ಅವರ ಮನಸ್ಸಿಗೆ ನೆಮ್ಮದಿಯನ್ನು ನೀಡಿದ್ದಾರೆ. ಸದ್ಯ ಆಧ್ಯಾತ್ಮಿಕತೆಯ ಕಡೆಗೆ ಮನಸ್ಸನ್ನು ಹರಿಯ ಬಿಟ್ಟು ವಿಶ್ರಾಂತ ಬದುಕನ್ನು ನೆಮ್ಮದಿಯಲ್ಲಿ ಕಳೆಯುತ್ತಿರುವ ಪದ್ಮಾ ಶೆಣೈಯವರು ಪ್ರಚಾರಕ್ಕೆಳಸದ ಸ್ವಭಾವದವರು. ಸಾಹಿತ್ಯವನ್ನು ಸಾಧನೆಯಾಗಿ ತಾನು ಪಡೆಯಲಿಲ್ಲ ಎಂದು ನಮ್ರವಾಗಿ ಒಪ್ಪಿಕೊಳ್ಳುವ ಈ ಲೇಖಕಿ ಸಾಹಿತ್ಯ ತಪಸ್ಸಾಗಬೇಕು, ಸಾಹಿತ್ಯ ಸರಸ್ವತಿ ಆರಾಧ್ಯ ದೈವವಾಗಬೇಕು ಎನ್ನುವ ಕನಸು ಕಂಡವರು. ಅವರ ಈ ಕನಸಿನ ಸ್ವರೂಪವನ್ನು ಅವರ ಕೃತಿ ಅವಲೋಕನದಿಂದ ತಿಳಿದುಕೊಳ್ಳಬಹುದಾಗಿದೆ.

ಪದ್ಮಾರಿಗೆ ಬಾಲ್ಯದಲ್ಲಿ ಸಂಗಾತಿಯಾಗಿದ್ದ ಓದುವ ಹವ್ಯಾಸ, ಸಾಹಿತ್ಯದಲ್ಲಿ ಒಲವು ಬೆಳೆಸಿಕೊಳ್ಳಲು ಬಹುಮುಖ್ಯ ಕಾರಣವೆನಿಸಿದೆ. ರಾಮಕೃಷ್ಣನ ಪರಮ ಭಕ್ತರಾಗಿದ್ದ ತಂದೆಯ ಪ್ರಭಾವದಲ್ಲಿ ಅವರು ಹದಿಹರೆಯದಲ್ಲಿಯೇ 'ಗೊಸ್ಪೆಲ್ ಆಫ್ ಶ್ರೀ ರಾಮಕೃಷ್ಣ' ಓದಿ ಮುಗಿಸಿದ್ದರು. ನಂತರ ಇಂಗ್ಲಿಷ್ ಕಾದಂಬರಿಗಳಲ್ಲಿ ಆಸಕ್ತಿ ಚಿಗುರೊಡೆಯಲು ತಂದೆಯೇ ಕಾರಣರಾದರು. ಡೇಲ್ ಕಾರ್ನಿಜ್, ಜಿಮ್ ಕೊರ್ಬೆಟ್, ರವೀಂದ್ರನಾಥ ಟಾಗೋರ್ ಜತೆ ಬಂಕಿಮಚಂದ್ರ, ಶರತ್ಚಂದ್ರ, ಕಾರಂತ, ಅ.ನ.ಕೃ, ಪುರಾಣಿಕ, ಕಟ್ಟೀಮನಿ ಮೊದಲಾದ ಜನಪ್ರಿಯ ಲೇಖಕರ ಸಾಹಿತ್ಯ ರಚನೆಗಳನ್ನು ಓದಿಕೊಳ್ಳುವುದು ಹರೆಯದ ಪ್ರಿಯ ಹವ್ಯಾಸವಾಗಿತ್ತು. ಅವರಿಗೆ.

ಸಾಹಿತ್ಯದಲ್ಲಿ ಮೂಡಿದ ಒಲವಿನಿಂದ ಪ್ರೇರಣೆ ಪಡೆದು ಅವರು ಕತೆಗಳನ್ನು ಬರೆಯಲಾರಂಭಿಸಿದರು. ಪ್ರಕಾಶ, ರಾಯಭಾರಿ, ನವಯುಗ ಮೊದಲಾದ ಸ್ಥಳೀಯ ಪತ್ರಿಕೆಗಳಲ್ಲಿ ಅವರ 'ಪ್ರಭಾ', 'ಸುಧ', 'ಉಷಾ' ಮೊದಲಾದ ನೀಳ್ಗತೆಗಳು ಬೆಳಕಿಗೆ ಬಂದವು. ಹಿಂದಿ ನಾಟಕಗಳನ್ನು ಬರೆದು ಸ್ನೇಹಿತರ ಜತೆ ಅಭಿನಯಿಸಿ ಅವರು ಪ್ರದರ್ಶನ ನೀಡುತ್ತಿದ್ದರು. ಮದುವೆಯಾದ ನಂತರ ಸಾಂಸಾರಿಕ ಜವಾಬ್ದಾರಿಗಳಿಂದ ಕೆಲವರ್ಷ ಬರೆವಣಿಗೆ ಹಿನ್ನಲೆಗೆ ಸರಿದರೂ, ಅವರೊಳಗೆ ಹುದುಗಿದ್ದ ಸಾಹಿತ್ಯದ ಒಲವು ಮತ್ತೆ ಚಿಗುರಿಕೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ''.'ದೂರದ ಆಸೆ', 'ಹರಿದ ಗಾಳಿಪಟ,' 'ನೂಲಿನಂತೆ ಸೀರೆ,' 'ತಾತ್ತ್ವಿಕ ಕಥೆಗಳು' ಅವರ ಕಥಾಸಂಕಲನಗಳು''.[೧೬]

''ಪದ್ಮಾ ಶೆಣೈಯವರು ತಾವು ಬರೆದು ಪ್ರಕಟಿಸಿದ ನಲ್ವತ್ತಕ್ಕೂ ಅಧಿಕ ಸಂಖ್ಯೆಯ ಸಣ್ಣಕತೆಗಳಲ್ಲಿ ವೈವಿಧ್ಯಮಯ ವಸ್ತುಗಳನ್ನು ಆಯ್ಕೆ ಮಾಡಿ ನಿರ್ವಹಿಸಿದ್ದಾರೆ. ಸರಳ ಭಾಷೆ ಮತ್ತು ಸುಲಲಿತ ಶೈಲಿಯನ್ನುಳ್ಳ ಈ ಕತೆಗಳು ಮನುಷ್ಯ ಸಂಬಂಧಗಳಿಗೆ ಹೆಚ್ಚಿನ ಒತ್ತನ್ನು ನೀಡಿವೆ. ವಾದ, ಚರ್ಚೆಗಳಿಂದ ಪರಿಹಾರ ಕಾಣದ ಎಷ್ಟೋ ಕೌಟುಂಬಿಕ ಸಮಸ್ಯೆಗಳು ಪರಸ್ಪರ ತಿಳಿವಳಿಕೆ ಹಾಗೂ ಅರ್ಥೈಸುವಿಕೆಯ ಮೂಲಕ ಹಗುರವಾಗುತ್ತವೆ

ಎಂಬುದನ್ನು ಈ ಕತೆಗಳು ನಿರೂಪಿಸುತ್ತವೆ. ಕಾದಂಬರಿಗಳಲ್ಲಿ ಮಾನವ ಬದುಕಿನ ಸಮಸ್ಯೆಗಳಿಗೆ ಕಾರಣವಾಗುವ ಮಾನಸಿಕ ದ್ವಂದ್ವಗಳಿಗೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಅವರು ವಿಶೇಷ ಗಮನವನ್ನು ಹರಿಸಿದ್ದು ಕಂಡುಬರುತ್ತದೆ'.[೧೬]. ಮನುಷ್ಯನ ಸಂಸ್ಕಾರ ಮತ್ತು ನಂಬಿಕೆಗಳು ಸಂಘರ್ಷಕ್ಕೆ ಒಳಗಾಗಿ ಪರಿವರ್ತನೆ ಹೊಂದುವ ವಿಧಾನ, ಬದಲಾಗುತ್ತಿರುವ ಜೀವನ ಮೌಲ್ಯ, ಬದುಕಿನ ಒತ್ತಡ ಹಾಗೂ ಮಾನಸಿಕ ತೊಳಲಾಟಗಳು ಈ ಎಲ್ಲವನ್ನೂ ಗುರಿಯಾಗಿಟ್ಟುಕೊಂಡು ಶಾಂತಿ, ನೆಮ್ಮದಿಯನ್ನು ಅರಸಿ ಮನುಷ್ಯ ನಡೆಸುವ ಹುಡುಕಾಟ–ಇವಿಷ್ಟು ಅವರ ಕಾದಂಬರಿಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ.

ಐದು ಬಾರಿ ಅಮೆರಿಕಾ ದೇಶಕ್ಕೆ ಪ್ರಯಾಣ ಬೆಳೆಸಿ, ಹಲವು ದಿನಗಳವರೆಗೆ ಅಲ್ಲಿ ವಾಸ್ತವ್ಯ ಹೂಡಿದ ಅನುಭವದ ಆಧಾರದಲ್ಲಿ ಅವರು ಬರೆದ ಪ್ರವಾಸ ಕಥನ 'ಅಮೆರಿಕಾ–ವಾಸ ಪ್ರವಾಸ' ಓದುಗರ ಹಾಗೂ ವಿಮರ್ಶಕರ ವಿಶೇಷ ಗಮನವನ್ನು ಸೆಳೆದಿರುವ ಕೃತಿಯಾಗಿದೆ. ಇದರಲ್ಲಿ ವೈಯಕ್ತಿಕ ಅನುಭವಕ್ಕಿಂತ ಹೆಚ್ಚಾಗಿ ಅಮೇರಿಕಾ ದೇಶದ ಸಾಮಾಜಿಕ ಸ್ಥಿತಿಗತಿ, ಅಲ್ಲಿನ ಸಂಬಂಧಗಳಲ್ಲಿ ಉಂಟಾಗಿರುವ ಬಿರುಕು, ಜೊತೆಗೆ ಮನುಷ್ಯ ಬೆಳೆಸಿಕೊಂಡು ಬಂದ ಕ್ರೌರ್ಯ ಭವಿಷ್ಯದ ಬದುಕಿನಲ್ಲಿ ಉಂಟುಮಾಡಬಹುದಾದ ಹಾನಿಯ ಸಂಭಾವ್ಯತೆಯ ಕುರಿತು ದೀರ್ಘ ಎನಿಸುವಷ್ಟು ಚಿಂತನೆ ಇದೆ.

ಇವರ ಭಾರತೀಯ ಸ್ತ್ರೀ ಸಂಸ್ಕೃತಿ ಮತ್ತು ಸಮಾಜ ಅಂತರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಂಡ ಕೃತಿ. ರಾಷ್ಟ್ರೋತ್ಥಾನ ಸಂಸ್ಥೆಯ ವತಿಯಿಂದ ದ್ರೌಪದಿ, ಸಖೂಬಾಯಿ, ಫಿರೋಜ್ ಶಾ ಮೆಹ್ತಾ, ಛತ್ರಸಾಲ ಮತ್ತು ಮಹಾಸಂನ್ಯಾಸಿ ಮೊದಲಾದವರ ಜೀವನಚರಿತ್ರೆಗಳನ್ನು ಇವರು ಬೆಳಕಿಗೆ ತಂದಿದ್ದಾರೆ. ಭಾರತದಾದ್ಯಂತ ಧರ್ಮದ ಬೆಳಕನ್ನು ಪಸರಿಸಿ, ಅದ್ಭುತವಾಗ್ಮಿ ಹಾಗೂ ಘನ ವಿದ್ವಾಂಸರೆಂದು ಜಗದ್ವಿಖ್ಯಾತರಾದ ಶಂಕರಾಚಾರ್ಯರ ಜೀವನ ವಿವರಗಳಿರುವ 'ಮಹಾಸಂನ್ಯಾಸಿ' ಕನ್ನಡ ಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ. ಇತ್ತೀಚಿಗಿನ ವರ್ಷಗಳಲ್ಲಿ ಆಧ್ಯಾತ್ಮದಲ್ಲಿ ವಿಶೇಷ ಒಲವನ್ನು ಬೆಳೆಸಿಕೊಂಡಿರುವ ಈ ಲೇಖಕಿ 'ಆನಂದ ಕುಟೀರದ ಮಹಾತ್ಮ ಅಜ್ಜ,' 'ಆನಂದೋಪಷತ್ತು' ಎಂಬ ಎರಡು ಆಧ್ಯಾತ್ಮಿಕ ಗ್ರಂಥಗಳನ್ನು ಮತ್ತು 'ತಾತ್ತ್ವಿಕ ಹಾಡುಗಳು' ಎಂಬ ಗೀತ ಸಂಗ್ರಹವನ್ನು ಬೆಳಕಿಗೆ ತಂದಿದ್ದಾರೆ.

ಪದ್ಮಾ ಶೆಣೈಯವರ ಒಟ್ಟು ಸಾಹಿತ್ಯವನ್ನು ನೋಡಿದಾಗ, ಅವರ ಕೃತಿ ರಚನೆಯ ಹಿನ್ನಲೆಯಲ್ಲಿ ಕಾರ್ಯವೆಸಗಿರುವ ಎರಡು ಬಹುಮುಖ್ಯ ಅಂಶಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಅವುಗಳಲ್ಲಿ ಒಂದು–ಆಯಾ ಕಾಲಘಟ್ಟದ ಸಾಮಾಜಿಕ ಹಾಗೂ ಸಾಹಿತ್ಯಕ ವಿಚಾರಗಳಿಗೆ ಆದ್ಯತೆ ನೀಡಿ ಅವರು ವಸ್ತುವನ್ನು ಆಯ್ಕೆ ಮಾಡಿರುವುದು. ಎರಡನೆಯದು ಸಾಮಾಜಿಕ ಜವಾಬ್ದಾರಿಯಲ್ಲಿ ಈ ವಸ್ತುವನ್ನು ನಿರ್ವಹಿಸಿರುವುದು. ಈ ಎರಡು ಕಾರಣಗಳಿಂದ ಕನ್ನಡದ ಇತರ ಕತೆಗಾರ್ತಿಯರಿಗಿಂತ ಇವರು ಭಿನ್ನರಾಗಿ ಗೋಚರಿಸುತ್ತಾರೆ.

ಪದ್ಮಾ ಶೆಣೈಯವರು ಬರೆವಣಿಗೆಯನ್ನು ಪ್ರಾರಂಭಿಸಿದುದು ಸ್ವಾತಂತ್ರ್ಯೋತ್ತರ ಅವಧಿಯಲ್ಲಿ, ಐವತ್ತರ ದಶಕದಲ್ಲಿ ಸಣ್ಣಕತೆಗಳನ್ನು, ಅರವತ್ತರ ದಶಕದಲ್ಲಿ ಕಾದಂಬರಿಗಳನ್ನು ಅವರು ಪ್ರಕಟಿಸಿದ್ದಾರೆ.

ಕರ್ನಾಟಕವಲ್ಲಿ ಓದುಗವರ್ಗ ನಾಯಕಿ ಪ್ರಧಾನ ಕಾದಂಬರಿಗಳತ್ತ ಆಕರ್ಷಣೆ ಬೆಳೆಸಿಕೊಂಡ ಕಾಲದಲ್ಲಿ ಅವರ ಸ್ತ್ರೀ ಕೇಂದ್ರಿತ ಕಾದಂಬರಿ 'ರಸ ವಿರಸ' ಪ್ರಕಟವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಮಹಿಳೆಯರಿಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತಿದ್ದ ಅವಧಿಯಲ್ಲಿ ಬಂದ ಬಹುತೇಕ ಕತೆ, ಕಾದಂಬರಿಗಳೂ ಇಂತಹ ಸದವಕಾಶಗಳಿಂದ ಮಹಿಳೆಯರ ಬದುಕು ಸ್ಥಿತ್ಯಂತರ ಹೊಂದುತ್ತಿರುವ ವಿಧಾನವನ್ನು ಹಾಗೂ ಅದರ ಸಾಧಕ ಬಾಧಕಗಳನ್ನು ದಾಖಲಿಸಿವೆ. ತ್ರಿವೇಣಿ, ಅನುಪಮಾ, ಬಲ್ಲಾಳ, ಇನಾಂದಾರ್, ನಿರಂಜನ ಮೊದಲಾದವರ ಕಾದಂಬರಿಗಳನ್ನು ಇಲ್ಲಿ ಉದಾಹರಿಸಬಹುದು. ಪದ್ಮಾ ಶೆಣ್ಯೆಯವರು ಮೊದಲು ಬರೆದಿರುವ ಕಾದಂಬರಿಗಳಲ್ಲಿ ಕೂಡಾ ಇದೇ ಹಿನ್ನಲೆಯ ಚರ್ಚೆಗಳು, ವಾಗ್ವಾದಗಳು ಇವೆ. ಆದರೆ ಇವೆಲ್ಲವುಗಳ ಹಿನ್ನಲೆಯಲ್ಲಿ ಕಾರ್ಯವೆಸಗಿರುವುದು ಸ್ತ್ರೀಪರ ಮನಸ್ಸು ಎನ್ನುವುದಕ್ಕಿಂತ ಹೆಚ್ಚಾಗಿ ಸ್ವಸಂಸ್ಕೃತಿಯ ಮೇಲುಗಾರಿಕೆಯನ್ನು ಸಾಧಿಸುವ ಪ್ರಾಂಜಲ ಮನೋಸ್ಥಿತಿ ಎಂದು ಕರೆಯಬಹುದೇನೋ. ಈ ಹಿನ್ನಲೆಯಿಂದ ನೋಡಿದಾಗ ಲೇಖಕಿ ಹೊಸಗನ್ನಡದ ಮೊದಲ ಹಂತದ ಬರಹಗಾರ ನಿಲುವನ್ನು ಹೆಚ್ಚು ಹೋಲುತ್ತಾರೆ.

ತಮ್ಮ ಬಹುತೇಕ ಕೃತಿಗಳಲ್ಲಿ ಆಧುನಿಕ ಮನೋಭಾವಕ್ಕೆ ಪರವಾದ ಧೋರಣೆಯನ್ನು ಲೇಖಕಿ ವ್ಯಕ್ತಪಡಿಸುವರಾದರೂ, ಸಂಪ್ರದಾಯ, ಆಚರಣೆಗಳಿಗೆ, ಸಂಸ್ಕೃತಿ ಕುರಿತಾದ ವಿಚಾರಗಳಿಗೆ ಅವರ ಆದ್ಯತೆ ಸಲ್ಲುತ್ತಿರುವುದನ್ನು ಗಮನಿಸಬಹುದು. ಮನುಷ್ಯ ಸಂಬಂಧಗಳಲ್ಲಿ ಪರಸ್ಪರ ಪ್ರೀತಿ, ಗೌರವ, ವಿಶ್ವಾಸಗಳಿರುವುದು ಸಮಾಜ ಸ್ವಾಸ್ಥ್ಯಕ್ಕೆ ಅತ್ಯಗತ್ಯವೆನ್ನುವ ಧೋರಣೆ ಅವರದು. ಪ್ರಗತಿಪರ ವಿಚಾರಗಳಾದರೂ, ಮನುಷ್ಯ ಸಂಬಂಧಗಳಲ್ಲಿ ಅವು ಬಿರುಕನ್ನು ಉಂಟು ಮಾಡುವುದಾದರೆ, ಅಂಥವುಗಳಿಗೆ ಅವಕಾಶ ನೀಡಲಾಗದು ಎನ್ನುವ ಮನೋಭಾವವನ್ನು ಅವರು ಇಲ್ಲಿ ವ್ಯಕ್ತಪಡಿಸಿದ್ದಾರೆ. ಸಾಮುದಾಯಿಕ ಹಿತಚಿಂತನೆಯಲ್ಲಿ ಮೂಡಿಬಂದ ಕೃತಿಗಳು ಇವೆ

"ಪದ್ಮಾ ಶೆಣ್ಯೆಯವರ ಬರೆವಣಿಗೆಯ ಆಕರ್ಷಣೆ ಇರುವುದು ಅವರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುವ ಜೀವನ ಪ್ರೀತಿಯುಲ್ಲಿ. ನೊಂದವರ ಬದುಕಿಗೆ ಆಧಾರವಾಗಬಲ್ಲ ಸಣ್ಣಪುಟ್ಟ ಪಾತ್ರಗಳನ್ನು ಅವರು ಸೃಷ್ಟಿಸಿದ್ದಾರೆ. ಪಾತ್ರಗಳ ವೈಭವೀಕರಣಕ್ಕಿಂತ ಹೆಚ್ಚಾಗಿ ಕಾರ್ಯಸಾಧನೆಗೆ ಪ್ರಾಮುಖ್ಯವಿರುವುದು ಅವರ ಕೃತಿಗಳ ವೈಶಿಷ್ಟ್ಯವಾಗಿದೆ".[೧೮]

ಕೌಟುಂಬಿಕ ಪರಿಸರದ ಸೀಮಿತ ಅವಕಾಶವನ್ನು ಬಳಸಿ, ಹಲವು ಉತ್ತಮ ಗ್ರಂಥಗಳನ್ನು ರಚಿಸಿ, ಕನ್ನಡದ ಪ್ರಮುಖ ಮಾನವತಾವಾದಿ ಲೇಖಕಿಯಾಗಿ ಗುರುತಿಸಿಕೊಂಡಿರುವ ಪದ್ಮಾ ಶೆಣ್ಯೆಗೆ ಬಹುಮಾನ, ಪ್ರಶಸ್ತಿಗಳು ಲಭಿಸಿವೆ. ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘದ ಸ್ಥಾಪಕ ಅಧ್ಯಕ್ಷ ಸ್ಥಾನ, ಕರ್ನಾಟಕ ಲೇಖಕಿಯರ ಸಂಘದ ರಾಜ್ಯಮಟ್ಟದ ಸಮ್ಮೇಳನದ ಅಧ್ಯಕ್ಷ ಸ್ಥಾನ ಮೊದಲಾದ ಗೌರವಗಳು ದೊರೆತಿವೆ. ಓದುಗರು ಅವರನ್ನು ಜನಪ್ರಿಯ ಲೇಖಕಿಯಾಗಿ ಗುರುತಿಸಿಕೊಂಡಿದ್ದಾರೆ. ಎಪ್ಪತ್ತೈದರ ಇಳಿವಯಸ್ಸಿನಲ್ಲಿ ಅವರು ಬೆಳಕಿಗೆ ತಂದ ಗೀತೆಗಳ ಸಂಗ್ರಹ ಅವರ ಜತ್ತದ ಕ್ರಿಯಾಶೀಲತೆಗೆ ಒಂದು ಶ್ರೇಷ್ಠ ಉದಾಹರಣೆಯಾಗಿದೆ.

೪. ಡಾ। ಸಬಿಹಾಭೂಮಿಗೌಡ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬರೆಯುತ್ತಿರುವ ಕನ್ನಡದ ಪ್ರಮುಖ ಲೇಖಕಿಯರಲ್ಲಿ ಗುರುತಿಸುವ ಒಂದು ಹೆಸರು ಡಾ.ಸಬಿಹಾ ಭೂಮಿಗೌಡ ಅವರದ್ದು . ಸಂಕಲನ, ಸಂಶೋಧನೆ, ವಿಮರ್ಶೆ, ಸೃಜನಶೀಲ ಬರವಣಿಗೆಗಳಲ್ಲಿ ತೊಡಗಿಕೊಂಡ ಅವರ ಬರಹಗಳಲ್ಲಿ ವೈವಿಧ್ಯತೆಯಿದೆ; ಆತ್ಮನಿರೀಕ್ಷಣೆಯ ಮೂಲಕ ಸ್ವಂತಿಕೆಯ ಛಾಪನ್ನು ಮೂಡಿಸುವ ದಿಟ್ಟತನವಿದೆ. ಬರಹ ಕೆಲವರಿಗೆ ಅನಿವಾರ್ಯ; ಕೆಲವರಿಗೆ ಆಕಸ್ಮಿಕ. ಕೆಲವರಿಗೆ ವೃತ್ತಿ; ಕೆಲವರಿಗೆ ಪ್ರವೃತ್ತಿ. ಅನೇಕ ಪ್ರಕಾರದ ಬರಹಗಳನ್ನು ಬರೆದು ಬರಹಗಾರರೆನಿಸಿಕೊಳ್ಳುವುದು ಬೇರೆ, ಕೆಲವೇ ಕೆಲವು ಬರಹಗಳನ್ನು ಬರೆದು ಬರಹದ ಮೂಲಕವೇ ಗುರುತಿಸಲ್ಪಡುವುದು ಬೇರೆ. ಈವರೆಗಿನ ಎರಡು ವಿಮರ್ಶಾ ಸಂಕಲನ, ಒಂದು ಕಥಾ ಸಂಕಲನ, ಒಂದು ಕಾವ್ಯ ಸಂಕಲನ ಹಾಗೂ ಹಲವು ಸಾಹಿತ್ಯ ಪ್ರಕಾರದ ಸಂಪಾದನೆ, ಸಂಕಲನ, ಸಂಘಟನೆಯ ಮೂಲಕ ನಾಡಿಗೆ ಚಿರಪರಿತರಾಗಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕಿಯಾಗಿ, ವಿಭಾಗದ ಮುಖ್ಯಸ್ಥೆಯಾಗಿ ವೃತ್ತಿ ಜೀವನವನ್ನು ಆರಂಭಿಸಿದ ವಿದ್ಯಾರ್ಥಿಗಳ ಮೆಚ್ಚಿನ 'ಸಬಿಹಾಮೇಡಂ', ಸರಳತೆ, ಶಿಸ್ತುಬದ್ಧ ಜೀವನ, ಸಹೃದಯತೆಗೆ ಹೆಸರಾದವರು. ಸದಾ ಲವಲವಿಕೆಯಿಂದಿರುವ, ಏನಾದರೂ ಹೊಸದನ್ನು ಮಾಡಿತೋರಿಸುವ ಹಂಬಲವುಳ್ಳ ಸಬಿಹಾ ಅವರದು. ಉತ್ಸಾಹಪೂರ್ಣ ಕ್ರಿಯಾಶೀಲ ಮನೋವೃತ್ತಿ. ಹಿಡಿದ ಕೆಲಸವನ್ನು ಪಟ್ಟುಬಿಡದೆ ಮಾಡುವ ಛಲ, ಕಾರ್ಯತನ್ಮಯತೆ, ಜೀವನದ ಎಂತಹ ಸಂದರ್ಭದಲ್ಲೂ ಎದೆಗುಂದದೆ ಮುನ್ನಡೆಯುವ ಆತ್ಮಸ್ಥೈರ್ಯ ಅವರ ವ್ಯಕ್ತಿತ್ವದ ಮೂಲದ್ರವ್ಯಗಳು.

"ಸಬಿಹಾ ಅವರು ಜನಿಸಿದ್ದು ಜುಲೈ೪,೧೯೫೯ರಂದು. ಗದಗ ಜಿಲ್ಲೆಯ ರೋಣ ತಾಲೂಕಿನ ಗಜೇಂದ್ರಗಡ ಅವರ ಜನ್ಮ ಸ್ಥಳ. ತಾಯಿ ಸಾಹಿರ, ತಂದೆ ಎಂ.ಆರ್. ಗಜೇಂದ್ರಗಡ, ಸುರತ್ಕಲ್ ಎನ್.ಐ.ಟಿ. ಇಂಜಿನೀಯರ್ ಕಾಲೇಜಿನಲ್ಲಿ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಸಬಿಹಾ ಅವರ ಒಡ ಹುಟ್ಟಿದವರಲ್ಲಿ ಒಬ್ಬ ಸಹೋದರ, ಮೂವರು ಸಹೋದರಿಯರು. ಅವರು ಹುಟ್ಟಿದ್ದು ಗದಗ ಜಿಲ್ಲೆಯಾದರೂ ಬೆಳೆದದ್ದು, ಶಿಕ್ಷಣ ಪಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಅವರ ತಂದೆ ತಾಯಿ ಎಂದೂ ಧರ್ಮ, ಸಂಪ್ರದಾಯಗಳೆಂದು ಗೊಡ್ಡು ಆಚಾರಗಳ ಸಂಕುಚಿತ ದೃಷ್ಟಿಯನ್ನು ಅವರಲ್ಲಿ ಬೆಳೆಸಲಿಲ್ಲ. 'ಸರ್ವಧರ್ಮ ಸಮಭಾವದ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸುವುದಕ್ಕಾಗಿ ರಾಮಾಯಣ, ಮಹಾಭಾರತದ ಕಥೆಗಳನ್ನು ನಮ್ಮ ತಂದೆಯವರು ಹೇಳುತ್ತಿದ್ದರು"[೧೯]

ಸಬಿಹಾ ನೆನಪಿಸಿಕೊಳ್ಳುತ್ತಾರೆ. ಪದವಿಯನ್ನು ಸುರತ್ಕಲ್‌ನ ಗೋವಿಂದದಾಸ್ ಕಾಲೇಜಿನಲ್ಲಿ ಪೂರೈಸಿ, ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಥಮ ರ್‍ಯಾಂಕ್‌ನೊಂದಿಗೆ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಮುಂದೆ ಗುರುಗಳಾದ ಡಾ.ಬಿ.ಎ.ವಿವೇಕ ರೈಗಳ ಮಾರ್ಗದರ್ಶನದಲ್ಲಿ 'ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಸಣ್ಣಕಥೆಗಳ ಹುಟ್ಟು ಬೆಳವಣಿಗೆ (೧೮೪೩–೧೯೪೭). ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ೧೯೯೨ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿಯೇ ಕನ್ನಡ ಉಪನ್ಯಾಸಕಿಯಾಗಿ ವೃತ್ತಿ ಜೀವನ ಆರಂಭಿಸಿದ ಸಬಿಹಾ, ಪ್ರಸ್ತುತ ವಿಭಾಗದ ಮುಖ್ಯಸ್ಥೆಯಾಗಿ, ಡಾ.

ಶಿವರಾಮ ಕಾರಂತ ಪೀಠದ ನಿರ್ದೇಶಕರಾಗಿ ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸುಮಾರು ೨೫ ವರ್ಷಗಳ ಪ್ರಾಧ್ಯಾಪನ ಹಾಗೂ ೧೬ ವರ್ಷಗಳ ಸಂಶೋಧನ ಅನುಭವ ಹೊಂದಿರುವ ಸಬಿಹಾ ವೃತ್ತಿ–ಪ್ರವೃತ್ತಿಯನ್ನು ಸಮದೂಗಿಸಿಕೊಂಡು ಕೆಲಸ ಮಾಡಿ ತೋರಿಸುವ ಗುಣವನ್ನು ರೂಢಿಸಿಕೊಂಡಿದ್ದಾರೆ.

ವೈವಾಹಿಕ ಬದುಕಿನಲ್ಲೂ ಅವರು ಮಾಡಿದ ಕ್ರಾಂತಿ ಸಾಮಾನ್ಯವಾದುದೇನಲ್ಲ. ಸಹಪಾಠಿ ಗೆಳೆಯ ಭೂಮಿಗೌಡ ಅವರನ್ನು ಬಾಳ ಸಂಗಾತಿಯಾಗಿ ಸ್ವೀಕಾರ ಮಾಡಿಕೊಳ್ಳುವ ಮೂಲಕ ಅಂತರ್ ಧರ್ಮಿಯ ವಿವಾಹ ಬಂಧನವನ್ನು ಆಯ್ಕೆ ಮಾಡಿಕೊಂಡರು, ಭೂಮಿಗೌಡರ ನೇರ, ನಿರ್ಭಿಡೆಯ ವ್ಯಕ್ತಿತ್ವ ಅವರನ್ನು ಸಹಜವಾಗಿ ಆಕರ್ಷಿಸಿತು. ಭೂಮಿಗೌಡರು ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಪ್ರಗತಿಪರ ವಿಚಾರವಾದಿ ಧೋರಣೆಯ ಮನೋವೃತ್ತಿವುಳ್ಳವರು. ಒಂದರ್ಥದಲ್ಲಿ ಸಬಿಹಾ ಅವರ ಬರಹ –ಬದುಕಿಗೆ ಪ್ರೇರಣೆಯಾದವರು. ದಾಂಪತ್ಯ ಮತ್ತು ಬೌದ್ಧಿಕ ಸಾಂಗತ್ಯಕ್ಕೆ ಜೊತೆಯಾದವರು. ಮಗಳು ಅರಿಲ್ ಜೊತೆ ಆದರ್ಶ ಮತ್ತು ವೈಚಾರಿಕತೆಯನ್ನು ಒಟ್ಟಾಗಿ ಬದುಕಿನಲ್ಲಿ ಅಳವಡಿಸಿಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಡಾ. ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಸಾಧನೆ ವೈವಿಧ್ಯಮಯ ಕ್ಷೇತ್ರಗಳನ್ನು ಒಳಗೊಂಡು ಹೆಚ್ಚು ವಿಸ್ತೃತ ಆಯಾಮವನ್ನು ಪಡೆದುಕೊಳ್ಳುತ್ತದೆ. ಸಾಹಿತ್ಯ ವಿಮರ್ಶೆ, ಸ್ತ್ರೀವಾದಿ ಅಧ್ಯಯನ, ಭಾಷಾ ವಿಜ್ಞಾನ, ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಾವ್ಯ ಕಥೆ, ಪ್ರಬಂಧ, ಸಂಪಾದನೆ, ಸಂಕಲನ, ಸಂಶೋಧನೆ, ಸಂಕಲನ, ಸಂಶೋಧನೆ ಮೊದಲಾದವು ಸಬಿಹಾ ಅವರ ಆಸಕ್ತಿಯ ಕ್ಷೇತ್ರಗಳು, ಪ್ರಮುಖ ಸ್ತ್ರೀವಾದಿ ಚಿಂತಕಿಯರಲ್ಲಿ ಒಬ್ಬರನ್ನಾಗಿಯೂ ಅವರನ್ನು ಗುರುತಿಸಬಹುದು. ಆದರೆ ಅವರಲ್ಲಿ ನಾವು ಗುರುತಿಸುವುದು 'ರ್‍ಯಾಡಿಕಲ್ ಫೆಮಿನಿಸಂ' ಧೋರಣೆಗಳನ್ನಲ್ಲ. ಪ್ರತಿಭಟನೆ, ಹೋರಾಟಗಳನ್ನು ಅತ್ಯಂತ ಅನಿವಾರ್ಯ ನೆಲೆಯಲ್ಲಿ ಮಾತ್ರ ಕೈಗೆತ್ತಿಕೊಳ್ಳುವ ಆಶಯಕ್ಕೆ ಬದ್ಧರಾಗಿ ಸಾಧ್ಯವಾದಷ್ಟು ಬದುಕಿನ ಸಮನ್ವಯತೆ ಕಡೆಗೆ ತುಡಿಯುವ ಸಂವೇದನೆಯೊಂದನ್ನು ಅವರ ಸಾಹಿತ್ಯ ರೂಪಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಭಟಿಸುವುದು ಒಂದು ಬಗೆಯಾದರೆ ಬದುಕನ್ನು ಸಮದೃಷ್ಟಿಯಿಂದ ಸ್ವೀಕರಿಸುತ್ತಾ ಆತ್ಮಗೌರವಕ್ಕೆ ಧಕ್ಕೆ ಬರುವಲ್ಲೆಲ್ಲ ಎಚ್ಚರಿಸುವ ಜಾಗೃತ ಸಂವೇದನೆಯ ನೆಲೆ ಇನ್ನೊಂದು. ದಾಂಪತ್ಯವನ್ನು 'ಪಥ್ಯ'ವಾಗಿಸದೆ 'ಸತ್ಯ'ವಾಗಿಸುವ ಹಂಬಲ ಇದರ ಪ್ರಧಾನ ಉದ್ದೇಶ. ಇದು ಲಿಂಗಭೇದದ ಸಿದ್ಧಮಾದರಿಯೊಂದನ್ನು ಮೀರಿ ಯೋಚಿಸುವ ಸ್ತ್ರೀವಾದದ ನಾಲ್ಕನೇ ಆಯಾಮದ ಚಿಂತನೆಯ ಕ್ರಮವೂ ಹೌದು. ಈ ಬಗೆಯ ಚಿಂತನೆಯ ಹೊಳವುಗಳನ್ನಿಟ್ಟು ಬರೆಯುವ ಕನ್ನಡದ ಪ್ರಮುಖ ಲೇಖಕಿಯರ ಸಾಲಿಗೆ ಸಬಿಹಾ ಸೇರುತ್ತಾರೆ. ವೈದೇಹಿಯವರಂತೆ ಸ್ತ್ರೀವಾದ ಅವರಲ್ಲಿ 'ತಣ್ಣನೆ ಪ್ರತಿಭಟನೆ'ಯಾಗಿ, ಅಂತರಂಗದ ಶಕ್ತಿಯಾಗಿ ಹೊರಹೊಮ್ಮುತ್ತದೆಯೆ ವಿನಃ ಬಾಹ್ಯ ಆರ್ಭಟವಾಗಿ ಅಲ್ಲ. ಅಲ್ಲದೆ ಸಬಿಹಾ ತನ್ನನ್ನು ಒಬ್ಬ ಮುಸ್ಲಿಂ ಲೇಖಕಿಯೆಂದೂ ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲು ಬಯಸುವುದಿಲ್ಲ. ಧರ್ಮಕ್ಕಿಂತಲೂ ಮಾನವೀಯತೆ ದೊಡ್ಡದೆಂದು ಅವರು ಭಾವಿಸುತ್ತಾರೆ. ಅವರ ಸಾಹಿತ್ಯ ಕೂಡ ಇದನ್ನೆ ಪ್ರತಿಪಾದಿಸುತ್ತದೆ.

ಡಾ.ಸಬಿಹಾ ಅವರ ಸಾಹಿತ್ಯ ಸಾಧನೆಯ ಪರಿಚಯ ಮಾಡಿಕೊಳ್ಳುವ ಪೂರ್ವದಲ್ಲಿ ಅವರ ಸಂಘಟನಾ ಸಾಮರ್ಥ್ಯವನ್ನು ಶ್ಲಾಘಿಸಬೇಕು. ವಿಭಾಗದಲ್ಲಿ ಅವರು ಸಂಯೋಜಿಸಿದ ಹಲವು ವಿಚಾರ ಸಂಕಿರಣಗಳು ಇದಕ್ಕೆ ಸಾಕ್ಷಿ. ಅಲ್ಲದೆ ಕರಾವಳಿ ಲೇಖಕಿಯರ ವಾಚಕಿಯರ ಸಂಘದ ನಿರಂತರ ಒಡನಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಮಹಿಳಾ ಚಿಂತನೆಯ ಗತಿ ರೂಪು ಪಡೆಯಲು ಈ ಸಂಘಟನೆ ಪೂರವಾಗಿ ಬಂದಿದೆ.

'ಬಗೆ'' 'ನಿಲುಮೆ' ಸಬಿಹಾ ಅವರ ಎರಡು ವಿಮರ್ಶಾ ಸಂಕಲನಗಳು. ಸ್ತ್ರೀವಾದಿ ಸಾಹಿತ್ಯ ಚಿಂತನೆಯ ಕ್ರಮಕ್ಕೆ ಹೊಸ ಕಸುವು ನೀಡುವ ಇಲ್ಲಿಯ ಬರಹಗಳು ಸ್ತ್ರೀವಾದಿ ಅಧ್ಯಯನದ ತಾತ್ವಿಕಗೊಂದು ಚೌಕಟ್ಟು ನಿರ್ಮಾಣ ಮಾಡುತ್ತವೆ. ಪೌರಾಣಿಕ ಸ್ತ್ರೀ ಪ್ರತಿಮೆಗಳನ್ನು ಅಂದಿನ ಕಾಲದ ಅಗತ್ಯತೆಯ ಹಿನ್ನಲೆಯಲ್ಲಿ ಇಂದಿಗೆ ಆಪ್ತಗೊಳಿಸುವ ರೀತಿ ಇಲ್ಲಿನ ಕೆಲವು ಲೇಖನಗಳಲ್ಲಿ ವಿಶೇಷವಾಗಿ ಕಾಣಬುಹುದು. 'ಜನ್ನನ ಕಾವ್ಯಗಳು: ಹೆಣ್ಣನ್ನು ಪಳಗಿಸುವ ವ್ಯವಸ್ಥೆಯ ಕನ್ನಡಿ', 'ಶಕುಂತಲೆಗೆ ಹೊನ್ನ ಶೂಲ' ವಿಮರ್ಶಾತ್ಮಕ ಲೇಖನಗಳು ಗಮನಾರ್ಹ. ಮಾಸ್ತಿಯವರ ಕಥೆಯಾಧರಿಸಿ ತೊಡಗುವ ಶಕುಂತಲೆಯ ಬಗೆಗಿನ ಜಿಜ್ಞಾಸೆ ಉದಾತ್ತೀಕರಿಣದ ನೆಲೆಯನ್ನು ಮೀರಿ ನೆಲೆಯನ್ನು ಮೀರಿ ಅಸ್ತಿತ್ವವಿಲ್ಲದ ಮಹಿಳೆಯ ಪ್ರತಿನಿಧೀಕರಣವಾಗಿ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗುತ್ತದೆ. ಇಲ್ಲೆಲ್ಲಾ ವಿಮರ್ಶಕಿ ಮಾನವೀಯ ನಿಲುವು ತಳೆಯುತ್ತಾರೆ. ಹೆಣ್ಣು ಹೆಣ್ಣನ್ನು ಅರ್ಥೈಸುವ ಸಂವೇದನಾತ್ಮಕ ವಿಮರ್ಶಾ ವಿಧಾನವನ್ನು ವಿವಿಧ ಸಾಹಿತ್ಯ ಕೃತಿಗಳ ಮರುಚಿಂತನಾ ಕ್ರಮಕ್ಕೆ ಅನ್ವಯಿಸಿ ನೋಡುವ ಪ್ರಯತ್ನ ಅಭಿನಂದನೀಯ. ಮುಖ್ಯವಾಗಿ ದಕ್ಷಿಣ ಕನ್ನಡ ಮಹಿಳೆಯರ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡುವ ಮೂಲಕ ಅಲ್ಲಿಯ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಸಬಿಹಾ ಅವರು ನೀಡಿದ ಕೊಡುಗೆ ಅಪೂರ್ವ ಎಂಬುದರಲ್ಲಿ ಎರಡು ಮಾತಿಲ್ಲ.

ದಕ್ಷಿಣ ಕನ್ನಡದ ಜಿಲ್ಲೆಯ ಸಣ್ಣ ಕಥೆಗಳ ಮೇಲೆ ನಡೆಸಿದ ಸಂಶೋಧನೆಯನ್ನು ಆಧರಿಸಿ ಹೊರತಂದ ಕಥಾಸಂಕಲನ 'ಕರಾವಳಿಯ ಕತೆಗಳು', ೧೯೩೦ ರಿಂದ ೧೯೪೭ರ ಅವಧಿಯಲ್ಲಿ ಜಿಲ್ಲೆಯ ಪತ್ರಿಕೆಗಳಲ್ಲಿ ಬಂದ ಪ್ರಮುಖ ಕಥೆಗಳನ್ನು ಒಳಗೊಂಡಿದೆ. ಇಲ್ಲಿರುವ ಒಂದೊಂದು ಕಥೆಗಳೂ, ಕಥಾ ಲೇಖಕರೂ ನಮಗೆ ಮುಖ್ಯರಾಗುತ್ತಾರೆ. ತೆರೆಯ ಮರೆಗೆ ಸಂದ ಇಲ್ಲಿಯ ಬಹುಪಾಲು ಲೇಖಕರ ಕಥೆಗಳು ನಮಗೆ ದೊರೆಯದೆ ಹೋಗಿದ್ದರೆ ಇಂತಹ ಅಮೂಲ್ಯ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೋ ಏನೋ. ಸಬಿಹಾ ಅವರು ಬಹಳಷ್ಟು ಶ್ರಮವಹಿಸಿ ಅವುಗಳನ್ನು ಒಂದೆಡೆ ಸಂಕಲಿಸುವ ಕಾರ್ಯವನ್ನು ಮಾಡಿದ್ದಾರೆ. ಸ್ವಾತಂತ್ರಪೂರ್ವ ದೇಶೀಯ ಚಿಂತನಕ್ರಮವೊಂದು ಸಮಕಾಲೀನ ಸಮಸ್ಯೆಗಳಿಗೆ ಹೇಗೆ ಮುಖಾಮುಖಿಯಾಗಿದೆ. ಎಂಬುದನ್ನು ತಿಳಿಯಲು ಇದೊಂದು ಆಕರ ಗ್ರಂಥ. ಅವಿಭಜಿತ ದ.ಕ. ಜಿಲ್ಲೆಯ ಮೊದಲ ಮುಸ್ಲಿಂ ಲೇಖಕಿ ಸಾ. ಫಾತಿಮಾ, ಉಡುಪಿ, ಇಂದಿರಾಬಾಯಿ ಪಿ, ಕಲ್ಯಾಣಿ ಕಾರ್ಕಳ ಮೊದಲಾದ ಬೆಳಕಿಗೆ ಬಾರದ ಕನ್ನಡದ ಮೊದಲ ತಲೆಮಾರಿನ ಲೇಖಕಿಯರನ್ನು ಇದರಲ್ಲಿ ಪರಿಚಯಿಸಿದ್ದಾರೆ. ಇದನ್ನೇ ಆಧರಿಸಿ ಕುಡ್ವಿ ವಾಸುದೇವ ಶೆಣೈ ಹಾಗೂ ಲೀಲಾ ಬಾಯಿ ಕಾಮತ್ ಅವರನ್ನು ಕುರಿತು ಸಬಿಹಾ ಸ್ವತಂತ್ರ್ಯ ಎರಡು ಚಿತ್ರಣಗಳನ್ನು ರಚಿಸಿದ್ದಾರೆ. ಒಟ್ಟಿನಲ್ಲಿ ಕನ್ನಡದ ಸಣ್ಣಕತೆಗಳನ್ನು ಅಧ್ಯಯನ ಮಾಡುವವರಿಗೆ 'ಕರಾವಳಿಯ ಕತೆಗಳು' ಆಕರ ಕೃತಿ ಎಂಬುದರಲ್ಲಿ ಸಂಶಯವಿಲ್ಲ.

'ಲಿಂಗತ್ವ ಸಮನ್ಯಾಯ' ಸ್ತ್ರೀವಾದಿ ಅಧ್ಯಯನವನ್ನು ಕೇಂದ್ರೀಕರಿಸಿಕೊಂಡ ಸಮಾಜಶಾಸ್ತ್ರೀಯ ಕೃತಿ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತೀವ್ರವಾದ ಬದಲಾವಣೆ ಯಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಮಹಿಳೆಯರು ಬದಲಾಗಬೇಕಾದ ಅನಿವಾರ್ಯತೆಯನ್ನು ಈ ಕೃತಿ ಪ್ರತಿಪಾದಿಸುತ್ತದೆ. ಹೆಣ್ಣು ಬದಲಾಗಬೇಕೆಂದರೆ. ಹೆಣ್ಣು ಬದಲಾಗಬೇಕೆಂದರೆ ಗಂಡು ಕೂಡ ಈ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಬೇಕು. ಸ್ತ್ರೀ- ಪುರುಷರಿಬ್ಬರಲ್ಲೂ ಪರಸ್ಪರ ತಿಳುವಳಿಕೆಯ ಮಟ್ಟ ಹೆಚ್ಚಿ, ಬೌದ್ಧಿಕವಾಗಿ ವಿಕಾಸ ಹೊಂದಿರುವ ಪ್ರಕ್ರಿಯೆಯಾಗಿ ಅವರು 'ಲಿಂಗತ್ವ ಸಮನ್ಯಾಯ' ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತಾರೆ. ದತ್ತಾಂಶಗಳ ಮೂಲಕ ದ.ಕ. ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ಸ್ತ್ರೀ-ಪುರುಷರ ಸಾಮಾಜಿಕ ಸ್ಥಾನಮಾನಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸುವ 'ಮೈಕ್ರೊ ಫೆಮಿನಿಸಂ'ನ ಈ ಅಧ್ಯಯನ ಮಾದರಿ ವಿಶಿಷ್ಟವಾದುದು. ಮಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗ ಇವರ ಲೇಖನವನ್ನು ಬಳಸಿಕೊಂಡು 'ಲಿಂಗತ್ವ ಸಮನ್ಯಾಯದೆಡೆಗೆ' ಎಂಬ ಪಠ್ಯ ಪುಸ್ತಕವನ್ನು ಹೊರತಂದಿದೆ.

ಸೃಜನಶೀಲ ಸಾಹಿತ್ಯದಲ್ಲೂ ಸಬಿಹಾ ಕೈಯಾಡಿಸಿದ್ದಾರೆ. 'ಚಿತ್ತಾರ', 'ಕಡಲತಡಿಯ ಮನೆ' ಕ್ರಮವಾಗಿ ಅವರ ಕವನ ಹಾಗೂ ಕಥಾ ಸಂಕಲನ. ಇವೆರಡರ ಅವರ ಚೊಚ್ಚಲ ಕೃತಿಗಳು. ನಿಶ್ಚಯವಾಗಿ ಅವರ ಈ ಎರಡು ಕೃತಿಗಳು ಸಹೃದಯ ಓದುಗರ ಹೃದಯದಲ್ಲಿ ಸ್ಥಾನ ಪಡೆಯುತ್ತವೆ.

ಕವನ ಕಟ್ಟುವುದೇನೂ ಸುಲಭವಲ್ಲ
ಎಲ್ಲರಿಂದಲೂ ಸಾಧ್ಯವೂ ಇಲ್ಲ
ಬೇಕದಕೆ ತಪಸು
ಕಾದ ಮನಸು

ಎಂಬ ಎಚ್ಚರದಲ್ಲಿಯೇ ಕವನ ಹೆಣೆಯಲು ಹೊರಡುವ ಕವಯತ್ರಿಗೆ ಕವಿಗಿರಬೇಕಾದ 'ಕಾವ್ಯಧಾನ್ಯ'ದ ಅರಿವಿದೆ. ಇಲ್ಲಿಯ ಬಹುಪಾಲು ಕವಿತೆಗಳು ಅವರ ಸ್ವಗತಗಳು; ಆತ್ಮವಿಮರ್ಶೆಯ ಸ್ವಯಂ ಕಥನಗಳು. ಮತ್ತೆ ಮತ್ತೆ ಕುಳಿತು ಯೋಚಿಸುವಂತೆ ಮಾಡುವ ಇಲ್ಲಿನ ಕೆಲವು ಶಬ್ದರೂಪಕಗಳು ಕವಯತ್ರಿಗೆ ಒಮ್ಮೆಲೇ 'ಫ್ಲಾಶ್' ಆದಂತೆ ಅನಿಸುವುದಿಲ್ಲ. ಅನುಭವದಾಳದಲ್ಲಿ ಹರಳುಗಟ್ಟಿದ ಶಬ್ದದ್ರವ್ಯಗಳಂತೆ ಕಾಣುತ್ತವೆ. 'ಅಡುಗೆಮನೆ' ಸಬಿಹಾ ಅವರ ಕವನ ಸಂಕಲನದಲ್ಲಿ ಅಗ್ರಸ್ಥಾನ ಪಡೆದಿದೆ. ಬದುಕಿನ ಅನಂತ ಮುಖಗಳ ಅನಾವರಣಕ್ಕೆ 'ಅಡುಗೆಮನೆ' ಸಾಧನವಾಗುತ್ತದೆ. ಅಲ್ಲಿಯ ಪರಿಕರಗಳು ರೂಪಕಗಳಾಗಿ ವಿಚಾರ ಭೂಮಿಕೆಯೊಂದನ್ನು ಅವರೊಳಗೆ ನಿರ್ಮಿಸುವ ಪರಿ ವಿಶಿಷ್ಟವಾದುದು".[೨೦]

"ವೈವಾಹಿಕ ಬದುಕಿನಲ್ಲೂ ಅವರು ಮಾಡಿದ ಕ್ರಾಂತಿ ಸಾಮಾನ್ಯವಾದುದೇನಲ್ಲ. ಸಹಪಾಠಿ ಗೆಳೆಯ ಭೂಮಿಗೌಡ ಅವರನ್ನು ಬಾಳ ಸಂಗಾತಿಯಾಗಿ ಸ್ವೀಕಾರ ಮಾಡಿಕೊಳ್ಳುವ ಮೂಲಕ ಅಂತರ್ ಧರ್ಮಿಯ ವಿವಾಹ ಬಂಧನವನ್ನು ಆಯ್ಕೆ ಮಾಡಿಕೊಂಡರು. ಭೂಮಿಗೌಡರ ನೇರ, ನಿರ್ಭಿಡೆಯ ವ್ಯಕ್ತಿತ್ವ ಅವರನ್ನು ಸಹಜವಾಗಿ ಆಕರ್ಷಿಸಿತು. ಭೂಮಿಗೌಡರು ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಪ್ರಗತಿಪರ ವಿಚಾರವಾದಿ

ಧೋರಣೆಯ ಮನೋವೃತ್ತಿವುಳ್ಳವರು. ಒಂದರ್ಥದಲ್ಲಿ ಸಬಿಹಾ ಅವರ ಬದುಕು– ಬರವಣಿಗೆಗೆ ಪ್ರೇರಣೆಯಾದವರು. ದಾಂಪತ್ಯ ಮತ್ತು ಮತ್ತು ಬೌದ್ಧಿಕ ವಿಚಾರ ಸಾಂಗತ್ಯಕ್ಕೆ ಜೊತೆಯಾದವರು. ಮಗಳು ಅರಿಲ್ ಜೊತೆ ಆದರ್ಶ ಮತ್ತು ವೈಚಾರಿಕತೆಯನ್ನು ಒಟ್ಟಾಗಿ ಬದುಕಿನಲ್ಲಿ ಅಳವಡಿಸಿಕೊಂಡು ಸಂತೃಪ್ತ ಜೀವನ ನಡೆಸುತ್ತಿದ್ದಾರೆ.”[೨೧]

ಡಾ. ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಸಾಧನೆ ವೈವಿಧ್ಯಮಯ ಕ್ಷೇತ್ರಗಳನ್ನು ಒಳಗೊಂಡು ಹೆಚ್ಚು ವಿಸ್ತೃತ ಆಯಾಮವನ್ನು ಪಡೆದುಕೊಳ್ಳುತ್ತದೆ. ಸಾಹಿತ್ಯ ವಿಮರ್ಶೆ, ಸ್ತ್ರೀವಾದಿ ಅಧ್ಯಯನ, ಭಾಷಾ ವಿಜ್ಞಾನ, ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಥೆ, ಪ್ರಬಂಧ, ಸಂಪಾದನೆ, ಸಂಕಲನ, ಸಂಶೋಧನೆ ಮೊದಲಾದವು ಸಬಿಹಾ ಅವರ ಆಸಕ್ತಿಯ ಕ್ಷೇತ್ರಗಳು. ಪ್ರಮುಖ ಸ್ತ್ರೀವಾದಿ ಚಿಂತಕಿಯ್ರಲ್ಲಿ ಒಬ್ಬರನ್ನಾಗಿಯೂ ಅವರನ್ನು ಗುರುತಿಸಬಹುದು. ಆದರೆ ಅವರಲ್ಲಿ ನಾವು ಗುರುತಿಸುವುದು 'ರ್ಯಾಡಿಕಲ್ ಫೆಮಿನಿಸಂ' ಧೋರಣೆಗಳನ್ನಲ್ಲ. ಪ್ರತಿಭಟನೆ, ಹೋರಾಟಗಳನ್ನು ಅತ್ಯಂತ ಅನಿವಾರ್ಯ ನೆಲೆಯಲ್ಲಿ ಮಾತ್ರ ಕೈಗೆತ್ತಿಕೊಳ್ಳುವ ಆಶಯಕ್ಕೆ ಬದ್ಧರಾಗಿ ಸಾಧ್ಯವಾದಷ್ಟು ಬದುಕಿನ ಸಮನ್ವಯತೆ ಕಡೆಗೆ ತುಡಿಯುವ ಸಂವೇದನೆಯೊಂದನ್ನು ಅವರ ಸಾಹಿತ್ಯ ರೂಪಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಭಟಿಸುವುದು ಒಂದು ಬಗೆಯಾದರೆ ಬದುಕನ್ನು ಸಮದೃಷ್ಟಿ ಯಿಂದ ಸ್ವೀಕರಿಸುತ್ತಾ ಆತಗೌರವಕ್ಕೆ ಧಕ್ಕೆ ಬರುವಲ್ಲೆಲ್ಲ ಎಚ್ಚರಿಸುವ ಜಾಗೃತ ಸಂವೇದನೆಯ ನೆಲೆ ಇನ್ನೊಂದು. ದಾಂಪತ್ಯವನ್ನು 'ಪಥ್ಯ'ವಾಗಿಸದೆ 'ಸತ್ಯ'ವಾಗಿಸುವ ಹಂಬಲ ಇದರ ಪ್ರಧಾನ ಉದ್ದೇಶ.ಇದು ಲಿಂಗಭೇದದ ಸಿದ್ಧಮಾದರಿಯೊಂದನ್ನು ಮೀರಿ ಯೋಚಿಸುವ ಸ್ತ್ರೀವಾದದ ನಾಲ್ಕನೇ ಆಯಾಮದ ಚಿಂತನೆಯ ಕ್ರಮವೂ ಹೌದು. ಈ ಬಗೆಯ ಚಿಂತನೆಯ ಹೊಳವುಗಳನ್ನಿಟ್ಟು ಬರೆಯುವ ಕನ್ನಡದ ಪ್ರಮುಖ ಲೇಖಕಿಯರ ಸಾಲಿಗೆ ಸಬಿಹಾ ಸೇರುತ್ತಾರೆ. ವೈದೇಹಿಯವರಂತೆ ಸ್ತ್ರೀವಾದ ಅವರಲ್ಲಿ 'ತಣ್ಣನೆ ಪ್ರತಿಭಟನೆ'ಯಾಗಿ, ಅಂತರಂಗದ ಶಕ್ತಿಯಾಗಿ ಹೊರಹೊಮ್ಮುತ್ತದೆಯೆ ವಿನಃ ಬಾಹ್ಯ ಆರ್ಭಟವಾಗಿ ಅಲ್ಲ. ಅಲ್ಲದೆ ಸಬಿಹಾ ತನ್ನನ್ನು ಒಬ್ಬ ಮುಸ್ಲಿಂ ಲೇಖಕಿಯೆಂದೂ ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲು ಬಯಸುವುದಿಲ್ಲ. ಧರ್ಮಕ್ಕಿಂತಲೂ ಮಾನವೀಯತೆ ದೊಡ್ಡದೆಂದು ಅವರು ಭಾವಿಸುತ್ತಾರೆ. ಅವರ ಸಾಹಿತ್ಯ ಕೂಡ ಇದನ್ನ ಪ್ರತಿಪಾದಿಸುತ್ತದೆ.

ಡಾ.ಸಬಿಹಾ ಅವರ ಸಾಹಿತ್ಯ ಸಾಧನೆಯ ಪರಿಚಯ ಮಾಡಿಕೊಳ್ಳುವ ಪೂರ್ವದಲ್ಲಿ ಅವರ ಸಂಘಟನಾ ಸಾಮರ್ಥ್ಯವನ್ನು ಶ್ಲಾಘಿಸಬೇಕು. ವಿಭಾಗದಲ್ಲಿ ಅವರು ಸಂಯೋಜಿಸಿದ ಹಲವು ವಿಚಾರ ಸಂಕಿರಣಗಳು ಇದಕ್ಕೆ ಸಾಕ್ಷಿ. ಅಲ್ಲದೆ ಕರಾವಳಿ ಲೇಖಕಿಯರ ವಾಚಕಿಯರ ಸಂಘದ ನಿರಂತರ ಒಡನಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಮಹಿಳಾ ಚಿಂತನೆಯ ಗತಿ ರೂಪು ಪಡೆಯಲು ಈ ಸಂಘಟನೆ ಪೂರಕವಾಗಿ ಬಂದಿದೆ.

'ಬಗೆ' 'ಸಲುಮೆ' ಸಬಿಹಾ ಅವರ ಎರಡು ವಿಮರ್ಶಾ ಸಂಕಲನಗಳು. ಸ್ತ್ರೀವಾದಿ ಸಾಹಿತ್ಯ ಚಿಂತನೆಯ ಕ್ರಮಕ್ಕೆ ಹೊಸ ಕಸುವು ನೀಡುವ ಇಲ್ಲಿಯ ಬರಹಗಳು ಸ್ತ್ರೀವಾದಿ ಅಧ್ಯಯನದ ತಾತ್ವಿಕತೆಗೊಂದು ಚೌಕಟ್ಟು ನಿರ್ಮಾಣ ಮಾಡುತ್ತವೆ. ಪೌರಾಣಿಕ ಸ್ತ್ರೀ ಪ್ರತಿಮೆಯಗಳನ್ನು ಅಂದಿನ ಕಾಲದ ಅಗತ್ಯತೆಯ ಹಿನ್ನಲೆಯಲ್ಲಿ

ಇಂದಿಗೆ ಅಪ್ತಗೊಳಿಸುವ ರೀತಿ ಇಲ್ಲಿನ ಕೆಲವು ಲೇಖನಗಳಲ್ಲಿ ವಿಶೇಷವಾಗಿ ಕಾಣಬಹುದು. 'ಜನ್ನನ ಕಾವ್ಯಗಳು: ಹೆಣ್ಣನ್ನು ಪಳಗಿಸುವ ವ್ಯವಸ್ಥೆಯ ಕನ್ನಡಿ', 'ಶಕುಂತಲೆಗೆ ಪೊನ್ನ ಶೂಲ' ವಿಮರ್ಶಾತ್ಮಕ ಲೇಖನಗಳು ಗಮನಾರ್ಹ. ಮಾಸ್ತಿಯವರ ಕಥೆಯಾಧರಿಸಿ ತೊಡಗುವ ಶಕುಂತಲೆಯ ಬಗೆಗಿನ ಜಿಜ್ಞಾಸೆ ಉದಾತ್ತೀಕರಣದ ನೆಲೆಯನ್ನು ಮೀರಿ ಅಸ್ತಿತ್ವವಿಲ್ಲದ ಮಹಿಳೆಯ ಪ್ರತಿನಿಧೀಕರಣವಾಗಿ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗುತ್ತದೆ. ಇಲ್ಲೆಲ್ಲಾ ವಿಮರ್ಶಕಿ ಮಾನವೀಯ ನಿಲುವು ತಳೆಯುತ್ತಾರೆ. ಹೆಣ್ಣು ಹೆಣ್ಣನ್ನು ಅರ್ಥೈಸುವ ಸಂವೇದನಾತ್ಮಕ ವಿಮರ್ಶಾ ವಿಧಾನವನ್ನು ವಿವಿಧ ಸಾಹಿತ್ಯ ಕೃತಿಗಳ ಮರುಚಿಂತನಾ ಕ್ರಮಕ್ಕೆ ಅನ್ವಯಿಸಿ ನೋಡುವ ಪ್ರಯತ್ನ ಅಭಿನಂದನೀಯ, ಮುಖ್ಯವಾಗಿ ದಕ್ಷಿಣ ಕನ್ನಡದ ಮಹಿಳೆಯರ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡುವ ಮೂಲಕ ಅಲ್ಲಿಯ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಸಬಿಹಾ ಅವರು ನೀಡಿದ ಕೊಡುಗೆ ಅಪೂರ್ವ ಎಂಬುದರಲ್ಲಿ ಎರಡು ಮಾತಿಲ್ಲ.

ದಕ್ಷಿಣ ಕನ್ನಡದ ಜಿಲ್ಲೆಯ ಸಣ್ಣ ಕಥೆಗಳ ಮೇಲೆ ನಡೆಸಿದ ಸಂಶೋಧನೆಯನ್ನು ಆಧರಿಸಿ ಹೊರತಂದ ಕಥಾಸಂಕಲನ 'ಕರಾವಳಿಯ ಕತೆಗಳು', ೧೯೩೦ ರಿಂದ ೧೯೪೭ರ ಅವಧಿಯಲ್ಲಿ ಜಿಲ್ಲೆಯ ಪತ್ರಿಕೆಗಳಲ್ಲಿ ಬಂದ ಪ್ರಮುಖ ಕಥೆಗಳನ್ನು ಒಳಗೊಂಡಿದೆ. ಇಲ್ಲಿರುವ ಒಂದೊಂದು ಕಥೆಗಳೂ, ಕಥಾ ಲೇಖಕಕರೂ ನಮಗೆ ಮುಖ್ಯರಾಗುತ್ತಾರೆ. ತೆರೆಯ ಮರೆಗೆ ಸಂದ ಇಲ್ಲಿಯ ಬಹುಪಾಲು ಲೇಖಕರ ಕಥೆಗಳು ನಮಗೆ ದೊರೆಯದೆ ಹೋಗಿದ್ದರೆ ಇಂತಹ ಅಮೂಲ್ಯ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೋ ಏನೋ. ಸಬಿಹಾ ಅವರು ಬಹಳಷ್ಟು ಶ್ರಮವಹಿಸಿ ಅವುಗಳನ್ನು ಒಂದೆಡೆ ಸಂಕಲಿಸುವ ಕಾರ್ಯವನ್ನು ಮಾಡಿದ್ದಾರೆ. ಸ್ವಾತಂತ್ರ್ಯಪೂರ್ವ ದೇಶೀಯ ಚಿಂತನಕ್ರಮವೊಂದು ಸಮಕಾಲೀನ ಸಮಸ್ಯೆಗಳಿಗೆ ಹೇಗೆ ಮುಖಾಮುಖಿಯಾಗಿದೆ ಎಂಬುದನ್ನು ತಿಳಿಯಲು ಇದೊಂದು ಆಕರ ಗ್ರಂಥ. ಅವಿಭಜಿತ ದ.ಕ.ಜಿಲ್ಲೆಯ ಮೊದಲ ಮುಸ್ಲಿಂ ಲೇಖಕಿ ಸಾ. ಫಾತಿಮಾ, ಉಡುಪಿ, ಇಂದಿರಾಬಾಯಿ ಪಿ, ಕಲ್ಯಾಣಿ ಕಾರ್ಕಳ ಮೊದಲಾದ ಬೆಳಕಿಗೆ ಬಾರದ ಕನ್ನಡದ ಮೊದಲ ತಲೆಮಾರಿನ ಲೇಖಕಿಯರನ್ನು ಇದರಲ್ಲಿ ಪರಿಚಯಿಸಿದ್ದಾರೆ. ಇವನ್ನೇ ಆಧರಿಸಿ ಕುಡ್ಪಿ ವಾಸುದೇವ ಶೆಣೈ ಹಾಗೂ ಲೀಲಾ ಬಾಯಿ ಕಾಮತ್ ಅವರನ್ನು ಕುರಿತು ಸಬಿಹಾ ಸ್ವತಂತ್ರ ಎರಡು ವ್ಯಕ್ತಿ ಚಿತ್ರಣಗಳನ್ನು ರಚಿಸಿದ್ದಾರೆ. ಒಟ್ಟಿನಲ್ಲಿ ಕನ್ನಡದ ಸಣ್ಣಕಥೆಗಳನ್ನು ಅಧ್ಯಯನ ಮಾಡುವವರಿಗೆ 'ಕರಾವಳಿಯ ಕತೆಗಳು' ಆಕರ ಕೃತಿ ಎಂಬುದರಲ್ಲಿ ಸಂಶಯವಿಲ್ಲ.

'ಲಿಂಗತ್ವ ಸಮನ್ಯಾಯ' ಸ್ತ್ರೀವಾದಿ ಅಧ್ಯಯನವನ್ನು ಕೇಂದ್ರೀಕರಿಸಿಕೊಂಡ ಸಮಾಜಶಾಸ್ತ್ರೀಯ ಕೃತಿ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತೀವ್ರವಾದ ಬದಲಾವಣೆ ಯಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಮಹಿಳೆಯರು ಬದಲಾಗಬೇಕಾದ ಅನಿವಾರ್ಯತೆಯನ್ನು ಈ ಕೃತಿ ಪ್ರತಿಪಾದಿಸುತ್ತದೆ. ಹೆಣ್ಣು ಬದಲಾಗಬೇಕೆಂದರೆ ಗಂಡು ಕೂಡ ಈ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಬೇಕು. ಸ್ತ್ರೀ-ಪುರುಷರಿಬ್ಬರಲ್ಲೂ ಪರಸ್ಪರ ತಿಳುವಳಿಕೆಯ ಮಟ್ಟ ಹೆಚ್ಚಿ, ಬೌದ್ಧಿಕವಾಗಿ ವಿಕಾಸ ಹೊಂದುವ ಪ್ರಕ್ರಿಯೆಯಾಗಿ ಅವರು 'ಲಿಂಗತ್ವ ಸಮನ್ಯಾಯ' ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತಾರೆ. ದತ್ತಾಂಶಗಳ ಮೂಲಕ ದ.ಕ.ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ಸ್ತ್ರೀ-ಪುರುಷರ ಸಾಮಾಜಿಕ ಸ್ಥಾನಮಾನಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸುವ 'ಮೈಕ್ರೋ ಫೆಮಿನಿಸಂ'ನ ಈ ಅಧ್ಯಯನ ಮಾದರಿ ವಿಶಿಷ್ಟವಾದುದು.

ಮಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗ ಇವರ ಲೇಖನಗಳನ್ನು ಬಳಸಿಕೊಂಡು 'ಲಿಂಗತ್ವ ಸಮನ್ಯಾಯದೆಡೆಗೆ' ಎಂಬ ಪಠ್ಯ ಪುಸ್ತಕವನ್ನು ಹೊರ ತಂದಿದೆ.

ಸೃಜನಶೀಲ ಸಾಹಿತ್ಯದಲ್ಲೂ ಸಬಿಹಾ ಕೈಯಾಡಿಸಿದ್ದಾರೆ. 'ಚಿತ್ತಾರ', 'ಕಡಲತಡಿಯ ಮನೆ' ಕ್ರಮವಾಗಿ ಅವರ ಕವನ ಹಾಗೂ ಕಥಾ ಸಂಕಲನ. ಇವೆರಡು ಅವರ ಚೊಚ್ಚಲ ಕೃತಿಗಳು. ನಿಶ್ಚಯವಾಗಿ ಅವರ ಈ ಎರಡು ಕೃತಿಗಳು ಸಹೃದಯ ಓದುಗರ ಹೃದಯದಲ್ಲಿ ಸ್ಥಾನ ಪಡೆಯುತ್ತವೆ.

"'ಕಡಲತಡಿಯ ಮನೆ'. ಇದರಲ್ಲಿ ಒಟ್ಟು ೧೧ ಕಥೆಗಳಿವೆ. ೨೦೦೬-೦೭ರ ಸುಮಾರಿಗೆ ವಿವಿಧ ಪತ್ರಿಕೆಗಳಲ್ಲಿ ಸಬಿಹಾ ಅವರ ಈ ಕಥೆಗಳು ಬೆಳಕು ಕಂಡಿವೆ. ವಿಶಿಷ್ಟ ನಿರೂಪಣಾ ಶೈಲಿ, ಸಣ್ಣಕಥೆಯ ತಂತ್ರಗಾರಿಕೆ, ಭಾಷೆ ಈ ಮೊದಲಾದ ಹಲವು ಕಾರಣಕ್ಕಾಗಿ ಈ ಸಂಕಲನ ಗಮನಸೆಳೆಯುತ್ತದೆ. ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಕಂಡು ಬರುತ್ತಿರುವ ಕೋಮುಗಲಭೆ, ಧರ್ಮದ ಹೆಸರಿನಲ್ಲಿ ಮರೆಯಾಗುತ್ತಿರುವ ಮಾನವಸಂಬಂಧಗಳು ಈ ಕಥೆಗಳಿಗೆ ವಸ್ತುವಾಗುತ್ತವೆ".[೨೨]

ತಮ್ಮ ನೆನಪಿನ ಬುತ್ತಿಯಲ್ಲಿರುವ ನೆನಪುಗಳನ್ನು ಹೆಕ್ಕಿ ತೆಗೆದು ಅಂತಃಕರಣ ಕಲುಕುವ ಹಾಗೆ ಮಾನವ ಸಂಬಂಧಗಳನ್ನು ಸುಂದರ ಸೂತ್ರಗಳಲ್ಲಿ ಪೋಣಿಸುತ್ತಾರೆ. ಹಿಂದೂ ಹಾಗೂ ಮುಸ್ಲಿಂ ಧರ್ಮದ ಬಾಂಧವ್ಯವನ್ನು ಹೆಣ್ಣಿನ ಕಣ್ಣಲ್ಲಿ ಕಟ್ಟಿಕೊಟ್ಟಿರುವುದು ಅಪೂರ್ವ, ಧಾರ್ಮಿಕ ಮೂಲಭೂತವಾದವು ಪುರುಷಪ್ರಧಾನ ವ್ಯವಸ್ಥೆಯು ರೂಪಿಸಿದ ದುರಂತ ಎನ್ನುವ ಅಂಶವನ್ನು ಕಥಾಲೇಖಕಿ ಸೂಕ್ಷ್ಮವಾಗಿ ಇಲ್ಲಿ ಪ್ರತಿಪಾದಿಸುತ್ತಾರೆ. ಉತ್ತರ ಕರ್ನಾಟಕದ ಭಾಷಾ ಸೊಗಡನ್ನು ಸಮರ್ಥವಾಗಿ ಬಳಸಿರುವುದು ಕಥೆಯ ಮೌಲ್ಯವನ್ನು ಹೆಚ್ಚಿಸಿದೆ.

ಕನ್ನಡದ ಸೃಜನೇತರ ಮಹಿಳಾ ಸಾಹಿತ್ಯವನ್ನು ಪರಿಚಯಿಸುವ 'ನುಡಿಗವಳ' ಒಂದು ವಿಶಿಷ್ಟ ಕೃತಿ. ಹೊಸಗನ್ನಡದ ಮೊದಲ ತಲೆಮಾರಿನ ಲೇಖಕಿಯರು ಕೇವಲ ಕಥೆ, ಕಾದಂಬರಿಗಳನ್ನಷ್ಟೇ ಬರೆಯದೆ ವೈವಿಧ್ಯಮಯ ಕ್ಷೇತ್ರದಲ್ಲೂ ಸಾಹಿತ್ಯ ಕೃಷಿ ಮಾಡಿದ್ದಾರೆ. ಎಂಬುದನ್ನು ಈ ಗ್ರಂಥ ಶ್ರುತಪಡಿಸುತ್ತದೆ. ಇದು ಕೇವಲ ಕಲೆಹಾಕುವ ಪ್ರಯತ್ನವಾಗಿರದೆ ನಾವಿನ್ನೂ ಮಹಿಳೆಯರ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕನ ಮಾಡುವ ಕಾರ್ಯಕ್ಕೆ ತೊಡಗಿಲ್ಲ ಎಂಬುದನ್ನು ನೆನಪಿಸುವಂತಿದೆ. ಇದೇ ಬಗೆಯ ಇನ್ನೊಂದು ಪ್ರಯತ್ನ ಮಹಿಳಾ ಆತ್ಮಕಥೆಗಳಿಗೆ ಸಂಬಂಧಿಸಿ ಸಬಿಹಾ ಅವರು ತಂದ ಸಂಕಲನ ಕೃತಿ 'ಮಹಿಳಾ ಆತ್ಮಕಥೆಗಳು: ಅನುಸಂಧಾನ'. ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ ಬಂದ ಆತ್ಮಕಥೆಗಳನ್ನು ಅಧ್ಯಯನ ಮಾಡುವುದರ ಮೂಲಕ ಕನ್ನಡದಲ್ಲಿಯೂ ಇಂತಹ ಆತ್ಮಕಥೆಗಳು ಬರಹಕ್ಕೆ, ಅಧ್ಯಯನಕ್ಕೆ ನಾಂದಿ ಹಾಡಿದ್ದಾರೆ. ಸಬಿಹಾ ಅವರ ಸಂಪಾದಕತ್ವದಲ್ಲಿ ಬಂದ ಇನ್ನಿತರ ಸಾಹಿತ್ಯ ಕೃತಿಗಳೆಂದರೆ 'ಸರಸ್ವತಿ ಬಾಯಿ ರಾಜವಾಡೆ ಅವರ ಆತ್ಮಕಥೆಗಳು'(೧೯೯೪)' ಕನ್ನಡ ಸಾಹಿತ್ಯ ಮೀಮಾಂಸೆ' (೨೦೦೭), . ನಾವು ಮತ್ತು ನಮ್ಮ ಪರಿಸರ', 'ಕನ್ನಡ ಸಾಹಿತ್ಯ ಮತ್ತು ಮಹಿಳೆ', 'ಮಹಿಳಾ ಸಾಹಿತ್ಯ', 'ಸಂಸ್ಕೃತಿ ಮಹಿಳಾ ಮಾಲಿಕೆ', 'ಪ್ರಬಂಧ-೧೯೯೯' ಇತ್ಯಾದಿ. 'ಕನ್ನಡ ಭಾಷಾ ಪ್ರವೇಶ' ಎಂಬ ಕೃತಿಯನ್ನು ಸಹ ಲೇಖಕರೊಂದಿಗೆ

ಪ್ರಕಟಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಹೊರತಂದ 'ಮಹಿಳಾ ಸಾಹಿತ್ಯ ಚರಿತ್ರೆ' ಯೋಜನೆಯ ಸಂಪಾದಕ ಬಳಗದಲ್ಲಿ ಒಬ್ಬರಾಗಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ 'ದಕ್ಷಿಣ ಕನ್ನಡ ಜಿಲ್ಲೆಯ ಅವಿವಾಹಿತ ಮಹಿಳೆಯ ಸಮಾಜೋ-ಸಾಂಸ್ಕೃತಿಕ ಅಧ್ಯಯನ' ಯೋಜನೆ ಮತ್ತು ನವದೆಹಲಿಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಹಕಾರದಿಂದ 'ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸ್ತ್ರೀವಾದಿ ಚಿಂತನೆಗಳು' ಕನ್ನಡ ಅನುವಾದ ಯೋಜನೆಯಲ್ಲಿಯೂ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡದ ಹಿರಿಯ ಲೇಖಕಿ ಸಾರಾ ಅಬುಬಕ್ಕರ್ ಅವರ್ ಅಭಿನಂದನ ಗ್ರಂಥದ ಸಂಪಾದಕಿಯೂ ಆಗಿದ್ದಾರೆ.

ಕನ್ನಡದ ಮಹಿಳಾ ಸಂವೇದನೆಗೊಂದು ಗಟ್ಟಿ ನೆಲೆಯನ್ನು ಕಲ್ಪಿಸಿಕೊಡುವ ಸಬಿಹಾ ಭೂಮಿಗೌಡ ಅವರ ಸಾಹಿತ್ಯ ಸಮಕಾಲೀನ ಸಂದರ್ಭದ ಚಿಂತನೆಯ ಸೆಲೆಯೊಂದನ್ನು ಅಂತಸ್ಥಗೊಳಿಸಿಕೊಂಡಿದೆ"[೧೫]

ಟಿಪ್ಪಣಿಗಳು –೨

೧. ಸಾರ ಅಬೂಬಕ್ಕರ ಬಗ್ಗೆ ದೇವಿಕಾ ನಾಗೇಶ್‌ರವರು ಬರೆದ ಗೂಂಚಲು ೨ ಪುಟ –೨

೨. ಸಾರಾವರ ಬದುಕು–ಬರಹ ಬಗ್ಗೆ ಎ.ಪಿ. ಮಾಲತಿಯವರು ಚಂದ್ರಗಿರಿತೀರಾದಲ್ಲಿ ಅವರ ಬಗ್ಗೆ – ಪುಟ –೧೦

೩. ಸಾರಾ ಅವರು ಬರೆದ ಚಪ್ಪಲಿಗಳು ಕತೆಯಲ್ಲಿ ಪುಟ–೪

೪. ಗಂಗಾ ಪಾದೇಕಲ್ಲುರವ ಬದುಕು–ಬರಹ ಬಗ್ಗೆ ನಾಗವೇಣಿಯವರು ಚಂದ್ರ ಗಿರಿ ತೀರಾದಲ್ಲಿ ಪುಟ– ೩೪೨–೩೪೪

೫. ಅದೇ ಪುಟ–೨೪೩

೬. ಅದೇ ಪುಟ–೨೪೪

೭. ಅದೇ ಪುಟ–೨೪೫

೮. ಅದೇ ಪುಟ–೨೪೬

೯. ಅದೇ ಪುಟ–೨೪೭

೧೦. ಎ.ಪಿ.ಮಾಲತಿಯವರ ಬಗ್ಗೆ ಶೈಲಾಯುರವರು ಚಂದ್ರಗಿರಿ ತೀರದಲ್ಲಿ ಪುಟ–(೨೯೫–೨೯೭)

೧೧. ಅದೇ ಪುಟ–೨೯೫

೧೨. ಅದೇ ಪುಟ–೨೯೬

೧೩. ಅದೇ ಪುಟ–೨೯೭

೧೪. ಪದ್ಮಾ ಶೆಣೈ ಬಗ್ಗೆ ಗೀತಾ ಶೆಣೈ ರವರು ಅದೇ ಪುಸ್ತಕದಲ್ಲಿ ಪುಟ(೨೫೭–೨೫೯)

೧೫. ಅದೇ ಪುಟ– ೨೫೭

೧೬. ಅದೇ ಪುಟ–೨೫೮

೧೭. ಅದೇ ಪುಟ–೨೫೮

೧೮. ಅದೇ ಪುಟ–೨೫೯

೧೯. ಸಬಿಹಾರವರ ಬಗ್ಗೆ ಶುಭಾ ರವರು ಅದೇ ಪುಸ್ತಕದಲ್ಲಿ ಪುಟ(೪೪೦–೪೪೬)

೨೦. ಅದೇ ಪುಟ–೪೪೧

೨೧. ಅದೇ ಪುಟ–೪೪೨

೨೨. ಅದೇ ಪುಟ–೪೪೩–೪೪೪

೨೩. ಅದೇ ಪುಟ–೪೪೫–೪೪೬

ಅಧ್ಯಾಯ – ೩

ಸಣ್ಣಕಥೆಗಳ ಮೂಡಿಬಂದ ತಾತ್ವಿಕ ಸಮನ್ವಯತೆ

ಅಧ್ಯಾಯ – ೩

ಲೇಖಕಿಯರ ಬದುಕಿನ ವೈವಿಧ್ಯತೆಯಲ್ಲಿಯ ಏಕರೂಪ ಸಂವೇದನೆ

೩.೧ ಸಣ್ಣಕಥೆಗಳ ಬಗ್ಗೆ ಸಾಮ್ಯತೆ ವೈರುಧ್ಯ

ಸಾರ ಅವರ ಮುಸ್ಲಿಂ ಸಂವೇದನೆಯುಳ್ಳ ಪ್ರಮುಖ ಕಥೆಗಾರ್ತಿಯಾಗಿದ್ದಾರೆ. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳು ಅವರ ಎಲ್ಲಾ ಕಥೆಗಳಲ್ಲೂ ಕಂಡು ಬರುತ್ತದೆ. ಚಪ್ಪಲಿಗಳು ಕಥೆಯಲ್ಲಿ ಹೆಣ್ಣು ಕುಟುಂಬದವರಿಂದ ಶೋಷಣೆಗೆ ಒಳಗಾಗುತ್ತಾಳೆ ಎಂಬುದನ್ನು ನಿರೂಪಿಸುತ್ತಾರೆ. ಸಾರಾ ಅವರ ಚಪ್ಪಲಿಗಳು ಕಥೆಯಲ್ಲಿ ಶೋಷಣೆಗೆ ಒಳಗಾಗುವವರು ಮುಖ್ಯವಾಗಿ ಕಥಾನಾಯಕಿ ಸಮೀರಾ, ಬಾಲ್ಯದಿಂದಲೂ ಕಟ್ಟುಕಟ್ಟಳೆಗಳ ಹಿಡಿತದಲ್ಲಿ ಬೆಳೆದವಳು.ಇದರಿಂದಾಗಿ ಆಕೆಯ ೧೧ನೇ ವಯಸ್ಸಿಗೆ ಶಾಲಾ ಕಲಿಕೆ ಕೊನೆಗೊಳ್ಳುತ್ತದೆ. "ತಂದೆ ಹಸನ್ ಬ್ಯಾರಿಯು ತನ್ನಿಷ್ಟದ ಪ್ರಕಾರ ತಂಗಿ ಮಗ ಶಬೀರ್‌ನೊಡನೆ ವಿವಾಹ ಮಾಡುತ್ತಾನೆ. ಗಂಡ ದೂರದ ಕೊಲ್ಲಿ ರಾಷ್ಟ್ರದಲ್ಲಿ ದುಡಿಯುವವನು. ಅವನು ವರ್ಷಕ್ಕೊಮ್ಮೆ ಊರಿಗೆ ಬಂದಾಗಲು ಆಕೆ ಆತನೊಡನೆ ಅನ್ಯೋನ್ಯವಾಗಿರಲು ಸಾಧ್ಯವಾಗದಂತಹ ಪರಿಸ್ಥಿತಿ ತಂದೆಯ ಅನಾವರಣ ಆತ ಹೆಣ್ಣು ಮಕ್ಕಳನ್ನು ಹೆರಲು ಮಾತ್ರ ಎಂಬಂತೆ ತಿಳಿದ ಕಾರಣ ಸಮೀರಳ ತಾಯಿ ಯಾವಾಗಲೂ ಬಸುರಿಯಲ್ಲಿ ಬಾಣಂತಿಯೇ ಆಗಿರುತ್ತಿದ್ದಳು. ಹಾಗಾಗಿ ಸಮೀರ ತಾಯಿ ನಿಜ ಸೇವೆಯಲ್ಲಿ ತೊಡಗಬೇಕಾಗುತ್ತದೆ. ಒಂದು ಕಡೆ ಪತಿಯಿಂದ ದೂರಾದ ವಿರಹ ವೇದನೆ ಮತ್ತೊಂದೆಡೆ ಹಗಲು ರಾತ್ರಿಯೆನ್ನದೆ ಅವಿಶ್ರಾಂತ ದುಡಿದು ಮತ್ತು ತಂದೆ ಹೆಣ್ಣು ಮಕ್ಕಳನ್ನು ಚಪ್ಪಲಿಗೆ ಹೋಲಿಸುವುದು. ಆಕೆಯನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ದುರ್ಬಲಗೊಳಿಸುತ್ತದೆ".[೧]

ಸಾರಾ ಅವರು ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ, ಶಿಕ್ಷಣ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆ, ತಲಾಖ್, ಇದನ್ನೆಲ್ಲಾ ಅವರು ಕಣ್ಣಾರೇ ಕಂಡು ಅದರಿಂದ ಮುಕ್ತಿ ಪಡೆಯಲು ಕಥೆ, ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದರು. ಮುಂದೆ ಸಾರಾ ಅವರಿಗೆ ಅವರು ಬರೆದಂತಹ ಕಥೆಗಳ ವಿರುದ್ಧ ಹೋರಾಟವನ್ನೇ ಕೈಗೊಂಡರು ಎನ್ನುವುದಕ್ಕೆ ಏನೂ ಸಂದೇಹವಿಲ್ಲ. ಯಾಕೆಂದರೆ, ಸಾಮಾನ್ಯವಾಗಿ ಪುರುಷ ಪ್ರಧಾನವೇ ಕಾರಣವಾಯಿತೆಂದು ಹೇಳಬಹುದು. ಆದರೂ ಅವರು ಕಷ್ಟ ಅನುಭವಿಸಿದರು. ತನ್ನ ಬರಹಗಳನ್ನು ಬರೆಯುವುದನ್ನು ನಿಲ್ಲಿಸಲಿಲ್ಲ. ಮುಸ್ಲಿಂ ಮಹಿಳೆಯರಿಗೆ ಸಮಾಜದಿಂದಲೇ ಕಟ್ಟುಪಾಡುಗಳು ವಿಧಿಸಲ್ಪಟ್ಟಾಗ ಅವರು ಸ್ತ್ರೀ ವಿರೋಧಿ ಅಂಶಗಳಿಗೆ ತಮ್ಮ ಈ ಲೇಖನಿಯ ಮೂಲಕ ಪ್ರತಿರೋಧ ಒಡ್ಡಿದ್ದಾರೆ. ಸಾರಾ ಅವರ ಪ್ರಕಾರ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು. ಸಮಾಜದ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕೆಂದು ಅವರ ಮಾತಾಗಿತ್ತು. ಹಾಗೆಯೇ ಅವರ ಸಣ್ಣಕಥೆಗಳು ಮತ್ತು ಅನುವಾದಗಳು ಎಲ್ಲವೂ ಅವರ ಬರಹದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.

ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು ಎಂಬ ಆತ್ಮಚರಿತ್ರೆಯ ಲೇಖನ ಮುಸ್ಲಿಂ ಸಮುದಾಯದ ಎಲ್ಲ ಹೆಣ್ಣು ಮಕ್ಕಳ ಕಲಿಕೆಯ ಸಮಸ್ಯೆ ಮಾತ್ರವಾಗಿರದೆ ಬರಹಗಾರ್ತಿಯೊಬ್ಬಳು ಎದುರಿಸಬೇಕಾದ ಸವಾಲುಗಳು ಮತ್ತು ನಿವಾರಿಸಿಕೊಳ್ಳಬೇಕಾಗಿರುವ ಸನ್ನಿವೇಶ ತೋರಿಸುತ್ತದ'[೨]. ಸಾರಾ ಅವರು ಮುಸ್ಲಿಂ ಹೆಣ್ಣಿನ ನೋವು ನಲಿವುಗಳನ್ನು ಮುಖ್ಯ ವಸ್ತುವಾಗಿಸಿ ಸಣ್ಣಕಥೆಗಳನ್ನು ಬರೆದರೂ ನಂತರ ಅದಕ್ಕಿಂತ ವ್ಯಾಪಕವಾದ ವಸ್ತುವುಳ್ಳ ಕೆಲವು ಸಣ್ಣಕಥೆಗಳನ್ನು ಬರೆದಿದ್ದಾರೆ. ಬರಹಗಾರ್ತಿಯಾಗಿ ಮಾತ್ರವಲ್ಲದೆ, ಯಾವುದೇ ಮಹಿಳೆಯರ ಸಮಸ್ಯೆಗಳ ಹೋರಾಟಗಳಲ್ಲಿ ಸಾರಾ ಅವರನ್ನು ಕಾಣಬಹುದು.

ಸಾರಾ ಅವರ ಮಾತು ಅವರು ಬರೆದ ಕಥೆಯ ರಚನೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತಾ ಸಾರಾ ಈ ರೀತಿ ಹೇಳುತ್ತಾರೆ "ನನ್ನ ಕಥೆ ಮೂಲಕ ನಾನು ಮುಸ್ಲಿಂ ಸಮಾಜವನ್ನು ಅವಮಾನಿಸುತ್ತಿದ್ದೇನೆ. ಎಂಬ ಆಪಾದನೆಯನ್ನು ಅವರು ಹಲವಾರ ಬಾಯಿಂದ ಕೇಳಿದ್ದೇರೆ. ಇದರಿಂದ ಅವರಿಗೆ ತುಂಬಾ ನೋವುಂಟಾಗಿದೆ.

ಯಾಕೆಂದರೆ ನಮ್ಮ ಸಮಾಜವನ್ನು ತಿದ್ದುವ ಸಲುವಾಗಿ ನಾನು ಸಮಾಜದ ಕೆಲವು ಕ್ರೂರ ಪದ್ಧತಿಗಳೆಡೆಗೆ ಬೆಳಕು ಚೆಲ್ಲಿದ್ದೇನೆಯೇ ಹೊರತು ಅವರು ಹುಟ್ಟಿ ಬೆಳೆದ ಸಮಾಜವನ್ನು ಅವಮಾನಿಸುವುದು ಖಂಡಿತವಾಗಿಯೂ ಅವರ ಉದ್ದೇಶವಲ್ಲ".[೩]

ಸಾಹಿತ್ಯವೆಂಬುದು ಸಮಾಜದ ಪ್ರತಿಬಿಂಬವಾಗಬೇಕೆಂದು ಬಯಸಿದರು. ಕೊಳೆತ ಭಾಗವನ್ನು ಹಾಗೆಯೇ ಮುಚ್ಚಿಟ್ಟರೆ ಇನ್ನಷ್ಟು ಕೊಳೆತು ಹೋಗುತ್ತದೆಂಬುದನ್ನು ಈಗಾಗಲೇ ನಾವು ಮನಗಂಡಿದ್ದೇವೆ. ಆದುದರಿಂದ ಆ ಭಾಗವನ್ನು ಕಿತ್ತೆಸೆಯಬೇಕಾದರೆ ಮೊದಲು ಆ ಭಾಗದ ಮೇಲೆ ಬೆಳಕು ಬೀಳಬೇಕು. ಈ ಬೆಳಕು ಚೆಲ್ಲುವ ಕೆಲಸವನ್ನಷ್ಟೆ ನಾನು ಮಾಡುತ್ತಿದ್ದೇನೆ – ಹೀಗೆಂದು ಖಚಿತ ಉದ್ದೇಶದಿಂದ ಸಾಹಿತ್ಯ ರಚನೆಯಲ್ಲಿ ತೊಡಗುವ ಸಾರಾ ಅವರ ಬರವಣಿಗೆಗೆ ಆಧಾರವಾಗಿಸಿಕೊಳ್ಳುವುದು ಅವರ ಕಣ್ಣಮುಂದೆ ನಡೆದ ಘಟನೆಗಳನ್ನು ಇಲ್ಲವೆ ಬೇರೆಯವರು ಕೇಳಿದ ಘಟನೆಗಳನ್ನು. ಹೀಗೆ ಬದುಕು ಬರಹಗಳೆರಡರಲ್ಲೂ ಸಾಮಾಜಿಕ ಕಳಕಳಿಯನ್ನು ಮೆರೆವ ಸಾರಾ ಅಬೂಬಕ್ಕರ್ ನಮ್ಮ ನಡುವಿನ ಅಪರೂಪದ ಲೇಖಕಿ.

"ತಂದೆ–ತಾಯಿಯರ ಉತ್ತೇಜನದಿಂದ ಶಿಸ್ತಿನಿಂದ ಬೆಳೆದ ಸಾರಾ ನಾಲ್ಕು ಮಕ್ಕಳ ತಾಯಿ. ಹುಟ್ಟಿದ ಮನೆಯಲ್ಲಿ ಬುರ್ಖಾ ಧರಿಸಬೇಕೆಂಬ ಕಡ್ಡಾಯವಿಲ್ಲದೆ ಬೆಳೆದರು. ಇಂತಹ ಹಿನ್ನಲೆಯಲ್ಲಿ ಬೆಳೆದ ಲೇಖಕಿ ಮತಾಂಧರ ಒತ್ತಾಯಕ್ಕೆ ಇದೀಗ ಬುರ್ಖಾ ಧರಿಸಬೇಕೆಂಬ ನಿಯಮವೇನೂ ಇಲ್ಲ ಎಂದು ಹೇಳಿದ್ದಾರೆ".[೪]

ಮಹಿಳೆಯರ ಶೋಷಣೆ ಒಂದು ಧರ್ಮಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಧರ್ಮಗಳಲ್ಲೂ ವಿವಿಧ ರೀತಿಯಲ್ಲಿ ಧರ್ಮದ ಹೆಸರಿನಲ್ಲಿ ಶೋಷಣೆ ನಡೆಯುತ್ತಲೇ ಇದೆ ಮತ್ತು ಎಲ್ಲ ಧರ್ಮಗಳಲ್ಲೂ ಮತಾಂಧರ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ ವಿಚಾರವಂತ ಲೇಖಕ – ಲೇಖಕಿಯವರ ಲೇಖನಿಯನ್ನು ಇಂತಹ

ಘಟನೆಗಳಾವುವೂ ಅಲ್ಲಾಡಿಸಲಾರವು. ಟೊಮ್ಯಾಟೊ ಮತ್ತು ಕೊಳೆತ ಮೊಟ್ಟೆಗಳು ಸಾರ ಅವರ ಹರಿತವಾದ ಲೇಖನಿಯನ್ನು ಜಗ್ಗಿಸಲಾರವು.

ಸಾರಾ ಮುಸ್ಲಿಂ ಮಹಿಳೆಯಾಗಿರಬಹುದು. ಅವರ ಮೇಲೆ ನಡೆದ ಹಲ್ಲೆ ಸ್ತ್ರೀ ಸಮುದಾಯದ ಮೇಲೆ ನಡೆದ ಹಲ್ಲೆ. ವಿಚಾರವಂತರು, ಲೇಖಕ–ಲೇಖಕಿಯರು, ಮಾನವತೆಯಲ್ಲಿ ನಂಬಿಕೆ ಇರುವವರೆಲ್ಲರೂ ಖಂಡಿಸಬೇಕಾದಂತಹ ವಿಚಾರವಾಗಿದೆ.

ಗಂಗಾ ಪಾದೇಕಲ್ಲು, ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾದ ಗಂಗಾ ಪಾದೇಕಲ್ಲು, ಸಮೃದ್ಧ ಬ್ರಾಹ್ಮಣ ಕುಟುಂಬದಲ್ಲಿ ಆಗಿನ ಕಾಲದಲ್ಲಿ ಹೆಣ್ಣಿಗೆ ವೈಯಕ್ತಿಕ ಬದುಕು, ಸ್ಥಾನ ಇರುತ್ತಿರಲಿಲ್ಲ. ಎಲ್ಲವನ್ನೂ ನಿಗ್ರಹಿಸುವವನು ಮತ್ತು ಅನುಗ್ರಹಿಸುವವನು ಪುರುಷನೇ ಆಗಿರುತ್ತಾನೆ.

ವಿವಾಹವಾಗಿ ಗಂಡನ ಮನೆ ಸೇರಿದ ನಂತರದ ದಿನಗಳ ಬಗ್ಗೆ ಗಂಗಾ ಅವರು ಈ ರೀತಿ ಹೇಳಿದ್ದಾರೆ. "ನಿತ್ಯ ನಂದಾದೀಪ ಪೂಜೆ ದಿನಾ ಅರ್ಧ ಸೇರಕ್ಕಿ ಅನ್ನದ ನೈವೇದ್ಯ, ಪ್ರತಿ ಶುಕ್ರವಾರದಿರುಳು ದುರ್ಗಾ ಪೂಜೆ, ವೈವೇದ್ಯ ಇತ್ಯಾದಿಗಳೊಂದಿಗೆ ಅಡುಗೆ, ಹಟ್ಟಿ ಕೆಲಸಗಳೆಂದು ಎಷ್ಟು ಮಾಡಿದರೂ ಮುಗಿಯದ ಕೆಲಸಗಳಿದ್ದ ಮನೆಯಲ್ಲಿ ಅವರಿಗೆ ಆತ್ಮೀಯವಾಗಿ ಯಾರೂ ಇರಲಿಲ್ಲ. ಅವರ ಗಂಡನಂತೂ ಅವರ ಪಾಲಿಗೆ ಯಜಮಾನನಂತಿದ್ದರಲ್ಲದೆ ಎಂದೂ ಸಖನಂತಿರಲಿಲ್ಲ. ಹಾಗಿದ್ದರೂ ಅವರ ಓದುವ ಆಸಕ್ತಿಯನ್ನು ತಿಳಿದ ಆತನು ಕಸ್ತೂರಿ, ಸುಧಾ, ಪತ್ರಿಕೆಗಳಿಗೆ ಚಂದಾ ಕಳಿಸುತ್ತಿದ್ದರು"[೫].

ತುಂಬಿದ ಕುಟುಂಬದಲ್ಲಿ ಹಿರಿಸೊಸೆಯಾಗಿದ್ದ ಗಂಗಾ ಅವರ ಓದು ಅವರ ಮನೆಯಲ್ಲಿ ಅಪರಾಧ ಎನಿಸಿತ್ತು. ಚಂದಾ ಕಟ್ಟಿದ್ದು ಆ ಮನೆಯೊಳಗೆ ಒಂದು ದೊಡ್ಡ ಯುದ್ಧದ ತಲ್ಲಣವೇ ಉಂಟಾಯಿತು. ಇದರಿಂದ ಕಸ್ತೂರಿ, ಸುಧಾ ಪತ್ರಿಕೆಗಳ ಆರು ತಿಂಗಳ ಚಂದಾ ಮುಗಿಸಿ ಸುಮ್ಮನಾದರು. ತದ ನಂತರ ಮನೆಯೊಳಗೆ ನೆಮ್ಮದಿಯೆಂದರೆ ಗಂಗಾರ ಮನಸ್ಸು ನೀರಿನಿಂದ ಹೊರಕ್ಕೆಸೆದ ಮೀನಿನ ಉಸಿರುಗಟ್ಟುವಿಕೆಯ ಅವಸ್ಥೆಗಿಳಿಯಿತು. ಇಲ್ಲಿ ನಾವು ತಿಳಿಯಬೇಕಾದ ಸನ್ನಿವೇಶ ಎಂದರೆ ಬ್ರಾಹ್ಮಣ ಸಮುದಾಯದಲ್ಲಿ ಬ್ರಾಹ್ಮಣರ ಮನೆ–ಮನೆಯೊಳಗೆ ನಡೆಯುವಂತಹ ಸಂವೇದನೆಯನ್ನು ಈ ಮೂಲಕ ತಿಳಿಯಬಹುದು. ಹೊರಗಿನ ಜಗತ್ತಿಗೆ ಚೆಂದ ಕಂಡರೂ ಒಳನೋಟದಲ್ಲಿ ಬ್ರಾಹ್ಮಣ, ಬರಹಗಾರ್ತಿಯ ಬದುಕಿನ ಭಾವನಾತ್ಮಕ ಸನ್ನಿವೇಶವನ್ನು ನೋಡಬಹುದು. ಗಂಗಾ ಪಾದೇಕಲ್ಲು ಅವರ ಗಂಡನಿಗೆ ಓದುವುದು, ಬರೆಯುವುದರ ಬಗ್ಗೆ ಆಸಕ್ತಿ ಇಲ್ಲ. ಅವರು ಮಲಗಿದ ಮೇಲೆ ಅಡುಗೆ ಮನೆಯಲ್ಲಿ ಸೀಮೆ ಬುಡ್ಡಿ ಉರಿಸಿ ಅದರ ಬೆಳಕು ಹೊಗೆಯಲ್ಲೇ ಓದಿ ಬರೆಯುತ್ತಿದ್ದರು.

ಆದರೆ ಸಂದರ್ಭಕ್ಕೆ ಅನುಗುಣವಾಗಿ ಅವರು ಬರೆದಂತಹ ಕಥೆಗಳು ಪ್ರಕಟವಾಗಿರಲಿಲ್ಲ. ಮನೆಗೆಲಸ, ತೋಟದ ಕೆಲಸಗಳಲ್ಲಿ ಸಿಕ್ಕ ಸಮಯವನ್ನೆಲ್ಲ ಓದಿನ ಮೂಲಕ ಉಪಯೋಗಿಸಿದರು. ನಂತರ ಹಗಲಿನ ದುಗುಡಗಳನ್ನು ರಾತ್ರಿ ದೀಪದ ಬೆಳಕಿನಲ್ಲಿ ಬರವಣಿಗೆಯಲ್ಲಿ ಕಳೆದುಕೊಳ್ಳಲು ಪ್ರಯತ್ನಿಸಿದರು. ಅದೇ

ಸಂದರ್ಭವಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ಕಥೆಗಳೂ ಪ್ರಸಾರವಾದವು. ಅವರ ಕಥೆಗಳನ್ನು ಸೇರಿಸಿ ಕಥಾ ಸಂಕಲನವೊಂದನ್ನು ತರಬೇಕೆಂಬ ಉತ್ಸಾಹದಲ್ಲಿದ್ದ ಅಣ್ಣ ಕೃಷ್ಣಭಟ್ಟರು ತೀರಿಕೊಂಡರು. ಬಾಲ್ಯದಿಂದ ಓದು-ಬರಹಕ್ಕೆ ನಿರಂತರ ಪ್ರೋತ್ಸಾಹ ನೀಡಿದ ಅಣ್ಣನ ಸಾವು ಗಂಗಾ ಅವರಿಗೆ ಆಘಾತವನ್ನೇ ತಂದಿತು. ಇದೇ ಸಮಯಕ್ಕೆ ಅವರ ಗಂಡನಿಗೆ ಕೂಡಾ ಹೃದಯಾಘಾತವಾಯಿತು. ಎಳೆಯ ವಯಸ್ಸಿಗೆ ಗಂಗಾ ಅವರಿಗೆ ಇನ್ನೇನೂ ಉಳಿಯಲಿಲ್ಲ ಎಂಬಷ್ಟು ಕಷ್ಟಗಳ ಅನುಭವವಾದವು. ಇನ್ನು ತನಗೆ ಅನಿವಾರ್ಯವಾದುದು ಬರಹ ಮಾತ್ರ ಎಂಬ ನಿರ್ಧಾರದಿಂದ ಹಳ್ಳಿಯನ್ನು ತೊರೆದು ತಮ್ಮ ಮಕ್ಕಳೊಂದಿಗೆ ಪುತ್ತೂರು ಸೇರಿದರು. ಬದುಕುವುದಕ್ಕೊಂದು ಉದ್ಯೋಗ, ಬರವಣಿಗೆಗೆ ಅವಕಾಶ ಇವುಗಳನ್ನು ಅರಸಿಕೊಂಡು ಪುತ್ತೂರಿನಲ್ಲಿ ಬಾಡಿಗೆ ಮನೆ ಮಾಡಿ ನಂತರ ಶೋಭಾ ಪುಸ್ತಕ ಭಂಡಾರದಲ್ಲಿ ಪುಟ್ಟ ಪಗಾರದ ಉದ್ಯೋಗವು ದೊರಕಿತು. ಇದು ಅವರನ್ನು ಗೌರವದಿಂದ, ಧೈರ್ಯದಿಂದ ಬಾಳುವಂತೆ ಮಾಡಿತು.

ಸಮಾಜದಲ್ಲಿ ಹೆಣ್ಣಿನ ಮೇಲೆ, ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಅವರ ಮನಸ್ಸನ್ನು ಕಲಕಿ ಕಥೆಗಳಾದವು. ಅವರು ಕೂಡಾ ಒಂದು ಸಂದರ್ಭದಲ್ಲಿ ಶೋಷಣೆಗೆ ಒಳಗಾದವರು. ಹೀಗೆ ಅವರು ತಮ್ಮ ಬರಹಗಳಲ್ಲಿ ಹೆಣ್ಣಿನ ಚಿತ್ರಣವನ್ನು ಜಾಸ್ತಿಯಾಗಿ ನೋಡಬಹುದು.

ಎ.ಪಿ. ಮಾಲತಿಯವರು ಕೂಡಾ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರಿಗೆ ವಿವಾಹವಾದ ನಂತರ ಬರೆಯುವ ಆಸಕ್ತಿಗೆ ನೀರೆರೆಯಿತು. ಮೋಹಿನಿ ಮದುವೆಯಾಗಿ ಮಾಲತಿಯಾದರೂ ಅಲ್ಲಿ ಬದಲಾದುದು ಕೇವಲ ಅವರ ಹೆಸರೇ ಹೊರತು ವ್ಯಕ್ತಿತ್ವವಲ್ಲ. ಮದುವೆ ಹೆಣ್ಣಿನ ವ್ಯಕ್ತಿತ್ವವನ್ನೇ ಮಾರ್ಪಡಿಸಿಬಿಡುತ್ತದೆ ಎಂಬ ಮಾತಿಗೆ ಅಪವಾದವೆಂಬಂತೆ ಮಾಲತಿಯವರ ವ್ಯಕ್ತಿತ್ವ ಇನ್ನಷ್ಟು ಶೋಭೆಯನ್ನು ಪಡೆದದ್ದು ವಿವಾಹ ನಂತರವೇ. ಮಾಲತಿಯವರು ಬದುಕಿನಲ್ಲಿ ತಮ್ಮ ವಿವಾಹದ ಬಳಿಕ ಪಡೆದ ಪಕ್ವತೆ, ಅನುಭವ, ಶ್ರೀಮಂತಿಕೆಗಳು ಅವರ ಬರಹಗಳಲ್ಲಿ ಪ್ರತಿಬಿಂಬಿತವಾಗಿದೆ.

"ಲೇಖಕಿಯಾಗಿ ಅವರ ಬರವಣಿಗೆಗಳು ಕೇವಲ ಸ್ತ್ರೀ ಜಗತ್ತಿನ ಚಿತ್ರಣಕ್ಕಷ್ಟೇ ಸೀಮಿತಗೊಳ್ಳದೆ ಪುರುಷ ಪಾತ್ರಗಳನ್ನು ಪುರುಷ ಜಗತ್ತನ್ನೂ ದಕ್ಕಿಸಿಕೊಂಡಿದೆ. ಅವರ ಪ್ರಬುದ್ಧ ವೈಚಾರಿಕತೆಯ ಮನಸ್ಸಿಗೆ ಸ್ತ್ರೀತತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯಾತ್ಮಕ ಈ ಮೂರು ಸ್ತರಗಳನ್ನು ಗ್ರಹಿಸಲು ಸಾಧ್ಯವಾಗಿದೆ. ದೈನಂದಿನ ಜಂಜಾಟಗಳ ನಡುವೆಯೂ ನಮ್ಮನ್ನು ಕಾಡುವ ಒಂಟಿತನ, ನೋವು, ಕೀಳರಿಮೆಗಳನ್ನು ಗೆಲ್ಲುವ ಮಾರ್ಗವನ್ನು ಅವರ ಕಥೆಗಳಲ್ಲಿ ತಿಳಿಸಿಕೊಟ್ಟಿದ್ದಾರೆ".[೬]

ಪದ್ಮಾ ಶೆಣೈ ಹೇಳುವಂತೆ "ಹೆಣ್ಣು ಅಸಹಾಯಕಳಾದರೆ ಸಮಾಜ ಅವಳನ್ನು ಯಾವ ರೀತಿ ಶೋಷಿಸುತ್ತದೆ".೭ ಎಂಬ ಸತ್ಯವನ್ನು ಕಣ್ಣಾರೆ ನೋಡಿ ಅನುಭವಿಸಿದವರು. ಮಾನವ ಬದುಕಿನ ಸಮಸ್ಯೆಗಳಿಗೆ ಕಾರಣವಾಗುವ ಮಾನಸಿಕ ದ್ವಂದ್ವಗಳಿಗೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಅವರು ವಿಶೇಷ ಗಮನವನ್ನು ಹರಿಸಿದ್ದರು. ಮನುಷ್ಯನ ಸಂಸ್ಕಾರ ಮತ್ತು ನಂಬಿಕೆಗಳು ಸಂಘರ್ಷಕ್ಕೆ ಒಳಗಾಗಿ ಪರಿವರ್ತನೆ ಹೊಂದುವ ವಿದ್ಯಮಾನ ಬದಲಾಗುತ್ತಿರುವ ಜೀವನ ಮೌಲ್ಯ, ಬದುಕಿನ ಒತ್ತಡ ಹಾಗೂ

ಮಾನಸಿಕ ತೊಳಲಾಟಗಳು, ಈ ಎಲ್ಲವನ್ನು ಗುರಿಯಾಗಿಟ್ಟುಕೊಂಡು ಶಾಂತಿ ನೆಮ್ಮದಿಯನ್ನು ಅರಸಿ ನಡೆಸುವ ಹುಡುಕಾಟದ ಬಗ್ಗೆ ಅವರ ಕಥೆಯಲ್ಲಿ ತಿಳಿಸಿಕೊಟ್ಟಿದ್ದಾರೆ.

ಪ್ರಮುಖವಾಗಿ ಅವರು ತಮ್ಮ ಕಥೆಗಳಲ್ಲಿ ಸಂಪ್ರದಾಯ, ಆಚರಣೆಗಳ ಸಂಸ್ಕೃತಿ ಕುರಿತಾದ ವಿಚಾರಗಳಿಗೆ ಅವರ ಧೋರಣೆ ಬಗ್ಗೆ ಹೇಳಿದ್ದಾರೆ. ಬದುಕಿನಲ್ಲಿ ನೊಂದವರಿಗೆ, ಬದುಕಿಗೆ ಆಧಾರವಾಗಬಲ್ಲ, ಸಣ್ಣಪುಟ್ಟ ಪಾತ್ರಗಳನ್ನು ಅವರು ಸೃಷ್ಟಿಸಿದ್ದಾರೆ.

"ಸಬೀಹಾರವರು (ಉತ್ತರ ಕರ್ನಾಟಕ) ಗದಗ ಜಿಲ್ಲೆಯವರು. ಅವರು ಶಿಕ್ಷಣ ಪಡೆದಷ್ಟು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಧರ್ಮ, ಸಂಪ್ರದಾಯಗಳೆಂದೂ ಗೊಡ್ಡು ಆಚಾರಗಳ ಸಂಕುಚಿತ ದೃಷ್ಟಿಯನ್ನು ಅವರಲ್ಲಿ ಬೆಳೆಯಲಿಲ್ಲ. ಅವರ ಕಡಲತಡಿಯ ಮನೆಯ ಕಥಾಸಂಕಲನದಲ್ಲಿ ಸಾಮಾಜಿಕ ಸನ್ನಿವೇಶದಲ್ಲಿ ಕಂಡು ಬರುತ್ತಿರುವ ಕೋಮು ಗಲಭೆ, ಧರ್ಮದ ಹೆಸರಿನಲ್ಲಿ ಮರೆಯಾಗುತ್ತಿರುವ ಮಾನವ ಸಂಬಂಧಗಳು, ಈ ಕಥೆಯ ವಸ್ತುವಾಗಿದೆ. ಹಿಂದೂ ಹಾಗೂ ಮುಸ್ಲಿಂ ಧರ್ಮದ ಬಾಂಧವ್ಯವನ್ನು ಹೆಣ್ಣಿನ ಕಣ್ಣಲ್ಲಿ ಕಟ್ಟಿಕೊಟ್ಟಿರುವುದು ಅಪೂರ್ವ. ಧಾರ್ಮಿಕ ಮೂಲಭೂತವಾದವು ಪುರುಷಪ್ರಧಾನ ವ್ಯವಸ್ಥೆಯು ರೂಪಿಸಿದ ದುರಂತ ಎನ್ನುವ ಅಂಶವನ್ನು ನಾವು ನೋಡಬಹುದು. ಉತ್ತರ ಕರ್ನಾಟಕದ ಭಾಷಾ ಸೊಗಡನ್ನು ಸಮರ್ಥವಾಗಿ ಬಳಸಿರುವುದು ಕಥೆಯ ಮೌಲ್ಯವನ್ನು ಹೆಚ್ಚಿಸಿದೆ".[೮]

ಉತ್ತರ ಕರ್ನಾಟಕದ ಪರಿಸರದಿಂದ ಬಂದ ಸಬೀಹಾ ಅವರ ಹೆತ್ತವರಿಗೆ ದಕ್ಷಿಣ ಕನ್ನಡದ ಮಲೆಯಾಳಿ ಮುಸ್ಲಿಮರ ರೀತಿ-ರಿವಾಜುಗಳು ಅಪರಿಚಿತವಾಗಿ ಕಂಡವು. ಮನೆಮನೆಗಳಲ್ಲಿ ವಿಚ್ಛೇದಿತ ಮಹಿಳೆಯರ ಕಥೆಗಳನ್ನು ಗಮನಿಸಿ, ಇದೆಂಥಾ ರೀತಿ-ನೀತಿ, ಎಂದೇ ಉದ್ಗರಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಆಹಾರ-ಉಡುಗೆ-ತೊಡುಗೆ, ಭಾಷೆ ಆಚರಣೆಗಳಲ್ಲಿ ಹಿಂದೂ-ಮುಸ್ಲಿಂ ಬಾಂಧವರ ನಡುವೆ ಇದ್ದ ಸಾಮ್ಯತೆಗಳ ಅಗಾಧತೆಯ ನಡುವೆ ಕೂದಲೆಳೆಯ ಅಂತರಗಳು ಕಣ್ಮರೆಯಾಗಿದ್ದವು. ವಿಚ್ಛೇದನ ಎಂಬುದು ಎರಡೂ ಸಮುದಾಯಗಳಲ್ಲಿ ಅಪವಾದಾತ್ಮಕವಾಗಿ ಕೇಳಿ ಬರುತ್ತಿದ್ದ ಸಂಗತಿ. ಇಂಥ ಹೋಲಿಕೆಗಳನ್ನು ಕೇಳುತ್ತ ಬೆಳೆದ ಅವರಿಗೆ ದಕ್ಷಿಣ ಕನ್ನಡದ ಮುಸ್ಲಿಮರು ಅವರ ಬದುಕಿನ ರಿವಾಜುಗಳು ಅನ್ಯವಾಗಿಯೇ ಕಂಡಿದ್ದವು.

ಇತರ ಲೇಖಕಿಯ ಅನುಭವ ಪ್ರಕಾರ ಡಾ। ನಾಗವೇಣಿ ಮಂಚಿಯವರು ತಮ್ಮ ಬಿಡುಗಡೆಯಾತ್ತ ಕಥೆಯಲ್ಲಿ ಅಬ್ದುಲ್ಲಾನ ಮಗಳು ಸೆಫಿಯಾ ಹಾಗೂ ಉಷಾಭಟ್ಟರ ಮಗಳು ಇವರಿಬ್ಬರೂ ಒಟ್ಟೊಟ್ಟಿಗೆ ಬೆಳೆದರು. ಸೆಫಿಯಾ ಯಾವಾಗಲೂ ಉಷಾರವರ ಮನೆಗೆ ಬಂದು ಗೋಧಿ ದೋಸೆ ತಿನ್ನುವ ಹಂಬಲ ಹೀಗೆ ಅವರ ಜೀವನ ಮುಂದುವರೆದಾಗ ಸೆಫಿಯಾ ಮದುವೆಯ ಜೀವನದ ರೂಪಕ ಕಂಡು ಬರುತ್ತದೆ. ಅವಳು ಪಡುವ ಕಷ್ಟ, ಯಾತನೆಯನ್ನು ಲೇಖಕಿ ನಾಗವೇಣಿಯವರು ಬಹಳ ವಿಸ್ತೃತ ರೂಪಕದಲ್ಲಿ ಬರೆದಿದ್ದಾರೆ. ಉಷಾರವರ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಲಚ್ಚಮ್ಮ ಹೇಳುವವರ ಮಾತು ನೆನಪಿಗೆ ಬರುತ್ತದೆ. "ಬುದ್ಧಿ ಇಲ್ಲ ಅವಸಿಗೆ, ಒಬ್ಬ ಗಂಡಸ ಹತ್ತಿರ ಅಕ್ಕ ತಂಗಿಯರು ಇವಲ್ಲಿ ಯಾರಾದ್ರೂ ಒಬ್ಬಳು ಮಗಳಿಗೆ

ಕಷ್ಟಾಂತ ಅರ್ಥ ಆಗ್ಬೇಡ್ವಾ. ಹೊಸ ಹೆಂಡತಿ ಬಂದರೆ ಹಳೆ ಹೆಂಡತಿ ಚಪ್ಪಲಿಗೆ ಸಮಾನಾಂತ ಗೊತ್ತಾಗೋದಿಲ್ವಾ?"

ಇಲ್ಲಿ ಕೂಡಾ ಮುಸ್ಲಿಂ ಸಮುದಾಯದಲ್ಲಿ ನೀಡುವಂತಹ ಶೋಷಣೆಗೆ ಬಲಿಯಾದ ಸೆಫಿಯಾ ಜೀವನವನ್ನು ನಾವು ಗುರುತಿಸಬಹುದು.

೩.೨ ಸಮಸ್ಯೆಗಳಿಗೆ ಸಂವೇದಿಸಿದ ಬಗೆ

ಸಣ್ಣ ಕಥೆಗಳಲ್ಲಿ ಸಾರಾ ಮಹಿಳೆಯರ ಮೇಲಾಗುವ ಹಿಂಸೆ, ದೌರ್ಜನ್ಯ, ಶೋಷಣೆ ಅಮಾನವೀಯತೆ. ಧರ್ಮದ ಹೆಸರಿನಲ್ಲಿ ಅವಳಿಗಾಗುವ ಅನ್ಯಾಯ ಮುಂತಾದವುಗಳನ್ನು ನೇರವಾಗಿ ಹೇಳುವ ರೀತಿ ಬೆರಗು ಹುಟ್ಟಿಸುತ್ತದೆ. ತಲಾಕ್‌ನ ಉದ್ದೇಶ ಒಳ್ಳೆಯದಿದ್ದರೂ ಅದನ್ನು ಗಂಡಸರು ತಮ್ಮ ಅನುಕೂಲಕ್ಕೆ ತಕ್ಕಂತೆ ಧರ್ಮದ ಹೆಸರಿನಲ್ಲಿ ಬದಲಾಯಿಸುವುದು ಸಾರಾಗೆ ಒಂಪ್ಪದ ಸಂಗತಿ. ಹೆಣ್ಣಿನ ಮೇಲೆ ನಡೆಯುವ ಕ್ರೌರ್ಯಕ್ಕೂ ಅವರಿಗೆ ಅಪಾರ ನೋವಿದೆ. ಕಳಕಳಿಯಿದೆ. ಹೆಚ್ಚಿನ ಕಥೆಗಳಲ್ಲಿ ಸ್ತ್ರೀ ಸಂವೇದನೆಯೇ ಪ್ರಮುಖ ಅಂಶ. ತಮ್ಮ ಸಮುದಾಯದ ಅಥವಾ ಇನ್ನಾವುದೇ ಸಮಾಜದ ಹೆಣ್ಣುಮಕ್ಕಳು ಶೋಷಣೆಯಿಂದ ಮುಕ್ತರಾಗಲು ಮೊದಲು ವಿದ್ಯಾವಂತರಾಗಬೇಕು. ಸ್ವಾವಲಂಬಿಗಳಾಗಬೇಕು. ಆರ್ಥಿಕವಾಗಿಯೂ ಸಬಲರಾಗಬೇಕೆಂಬ ಕಾಳಜಿಯಿದೆ. ಅದು ಅವರ ಮಾತು ಹಾಗೆಯೇ ತಾನು ಹುಟ್ಟಿ ಬೆಳೆದ ಸಮಾಜವೊಂದರಲ್ಲಿ ಬೇರು ಒಟ್ಟಿರುವ ಕ್ರೂರ ಕಟ್ಟುಪಾಡುಗಳು ವಿಧಿ–ನಿಷೇಧಗಳು ಆಚರಣೆ, ನಂಬಿಕೆಗಳ ಮೇಲೆ ಸೂಕ್ಷ್ಮ ದೃಷ್ಟಿಹರಿಸುವ ಪ್ರಯತ್ನವನ್ನು ತಮ್ಮ ಕಥೆಗಳ ಮೂಲಕ ಮಾಡಿ ಯಶಸ್ವಿಯಾಗಿದ್ದಾರೆ. ಎಲ್ಲಕ್ಕಿಂತ ಮನುಷ್ಯ ಧರ್ಮದ ಕಡೆಗೆ ಸಮಾಜವನ್ನು ಕೊಂಡೊಯ್ಯುವ ಇವರ ಪರಿ ವಿಶೇಷವಾದದ್ದು ಬಹುತೇಕ ಕಥೆಗಳ ಹೆಣ್ಣು ಮಕ್ಕಳ ಬಾವಣೆಯನ್ನು ಕುರಿತಂಥ ಕಥೆಗಳಲ್ಲೆಲ್ಲಾ ಸಮಸ್ಯೆಯ ಸುಳಿಯಲ್ಲಿ ಸಿಲುಕೆ ನರಳಿದ, ಅನಂತರವನ್ನು ಜೀವನವನ್ನು ಎದುರಿಸಲು ದೃಢವಾಗಿ ನಿಂತ ನಾಯಕಿಯರೇ ಹೆಚ್ಚು.

ಹಾಗೆಯೇ ಸ್ತ್ರೀಪರ ಕಾಳಜಿಗಳು ಕೇವಲ ಮುಸ್ಲಿಂ ಸಮುದಾಯದ ಸ್ತ್ರೀಯರ ಬಿಡುಗಡೆಗೆ ಮಾತ್ರ ಸೀಮಿತವಲ್ಲ. ಅವರು ಇಡೀ ಭಾರತೀಯ ಸಮಾಜದ ಎಲ್ಲ ಧರ್ಮಗಳ ಸ್ತ್ರೀಯರ ಬಿಡುಗಡೆಯ ಬಗ್ಗೆ ನಿರ್ಭಿಡೆಯಿಂದ ಬರೆಯಬಲ್ಲವರಾಗಿದ್ದಾರೆ. ಹಿಂದೂ ಸಮಾಜದ ಸ್ತ್ರೀಯರಿಗೆ ಧರ್ಮ ತೊಡಿಸಿರುವ ಹತ್ತಾರು ಸಂಕೋಲೆಗಳ ಬಗೆಗೆ ಯಾವ ಅಳುಕೂ ಇಲ್ಲದೆ. ಅವರು ಬರೆಯುತ್ತಾರೆ ಹಾಗೂ ಮಾತನಾಡುತಾರೆ. ಹೆಣ್ಣು ಬಂಜೆಯಾಗಿ ವಿಧವೆಯಾಗಿ, ಮುಟ್ಟಿನ ಮೈಲಿಗೆಯವಳಾಗಿ, ಅನಧಿಕೃತ ಪತ್ನಿಯಾಗಿ, ಅನಿಷ್ಟ ನಕ್ಷತ್ರದಲ್ಲಿ ಜನಿಸಿದವಳಾಗಿ ಒಲ್ಲದ ಸಂತಾನವಾಗಿ ಅವಳು ಅನುಭವಿಸುತ್ತಿರುವ ಯಾತನೆಗಳ ಬಗೆಗೆ ಹರಿತವಾಗಿ ಬರೆಯಬಲ್ಲವರಾಗಿದ್ದಾರೆ. ಮಹಿಳೆಯರೆಲ್ಲರೂ ಜಾತಿ, ಧರ್ಮಗಳ ಬಲೆಯಿಂದ ಹೊರಬಂದು ಒಟ್ಟಾದಾಗ ಸಹೋದರಿ ಭಾವದಿಂದ ಪರಸ್ಪರ ಕೈಹಿಡಿದು ಮುನ್ನಡೆದು ಎಲ್ಲ ಅಸಮಾನತೆಗಳ ವಿರುದ್ಧ ಒಕ್ಕೊರಲಿನಲ್ಲಿ ಧ್ವನಿ ಎತ್ತಿದಾಗ ಈ ಪರಿಸ್ಥಿತಿ ಬದಲಾದರೂ ಆಗಬಹುದು' ಎಂದು ಸ್ತ್ರೀ ಸಮುದಾಯಕ್ಕೆ ಕರೆಕೊಡುತ್ತಾರೆ. ಸ್ತ್ರೀ ಪಾತ್ರಗಳು ಅಪಾರ ಜೀವನ್ಮುಖತೆಯನ್ನು ತೋರಿಸುವ ಪಾತ್ರಗಳಾಗಿವೆ. ಬಡತನ ಕಷ್ಟ, ಗಂಡಂದಿರ ಬೇಜವಬ್ದಾರಿತನವನ್ನು ಯಾವುದು ಈ ಪಾತ್ರಗಳ ಎದೆಯಲ್ಲಿರುವ ಪ್ರೀತಿಯ ಬರತೆಯನ್ನು ಬತ್ತಿಸುವುದಿಲ್ಲ,

ಅತಿಥಿಗಳಿಗೆ ಮಾಡುವ ವಿಶೇಷ ಅಡುಗೆಯಿಂದ ಹಿಡಿದು ಬದುಕನ್ನು ವ್ಯಾಖ್ಯಿನಿಸುವ ಚಿಂತನೆಯ ತನಕ ಈ ಪಾತ್ರಗಳು ಜೀವನಶ್ರದ್ಧೆ ತೋರಿವೆ. ತಾಯ್ತನ ತಮ್ಮ ಮನೆವಾಳ್ತೆ ಮನೆಯ ಸದಸ್ಯರ ಕ್ಷೇಮ ಮಕ್ಕಳ ಏಳಿಗೆ ಇಷ್ಟೇ ಸಾಕು. ಊರಿಗೆ ಊರೇ ತನಗೆ ಬಹಿಷ್ಕಾರ ಹಾಕಿದರೂ ಖಾತೀಜಾಬಿ ಹೆದರದೆ ಗಟ್ಟಿಯಾಗಿ ನಿಲ್ಲುತ್ತಾಳೆ.

ಕಥನ ಪ್ರಜ್ಞೆಯ ಬಗೆಗೆ ನಾವು ಹೇಳಲೇಬೇಕಾದ ಮಾತೆಂದರೆ ಅವರ 'ಸಂಯಮ' ಇಲ್ಲಿ ಬರುವ ಶೋಷಣೆಯ ಬಗೆಗೆ ಈ ಕಥನದಲ್ಲಿ ಸಿಟ್ಟೂ, ರೊಚ್ಚು ಇಲ್ಲ' ಅಯ್ಯೋ, ಹೀಗಿದೆಯಲ್ಲ. ಎಂಬ ಪೇಚಾಟ, 'ಹೀಗಿರಬಾರದಿತ್ತು' ಎಂಬ ಸಹಾನುಭೂತಿ ಮತ್ತು ಇದಕ್ಕೆ ಪರಿಹಾರವೇನು? ಎಂಬ ಇತ್ಯಾತ್ಮಕ ಪ್ರಜ್ಞೆ ಇವರ ಕಥನದಲ್ಲಿ ಎದ್ದು ಕಾಣುತ್ತದೆ. ಗಂಡು ಕೂಡಾ ಅನುಭವದ ಹೊಡೆತಗಳಿಗೆ ಸಿಕ್ಕಿ ಮೃದುವಾಗುವುದನ್ನು ಸಾರಾ ತೋರಿಸುತ್ತಾರೆ. ಅನ್ನುವುದು ಅವರ ಸಂಯಮ ಮತ್ತು ಸಮಾಧಾನಿ ಮನಸ್ಥಿತಿಗೆ ಸಾಕ್ಷಿ.

ಪುರುಷರಂತೆ ಸ್ತ್ರೀಯರು ಒಂದಡೆಗೆ ಕುಳಿತು. ಓತಪ್ರೋತವಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಗಂಡ, ಮನೆ, ಮಕ್ಕಳು, ಅದಕ್ಕೆ ಸಂಬಂಧಿಸಿದೆ. ಜವಾಬ್ದಾರಿಗಳ ನಡುವೆ ಬರಹಗಾರ್ತಿಯರಿದ್ದಾರೆ. ಬರಹಗಾರ್ತಿಯರ ಬರವಣಿಗೆಯು ಇದರಿಂದ ಹುಟ್ಟಿಕೊಳ್ಳುತ್ತದೆ. ಮಗುವಿನ ಲಾಲನೆ, ಪಾಲನೆ ಮಗುವಿನ ಬಗೆಗಿನ ಪ್ರೀತಿಯಂತೆ ಬರಹಗಾರ್ತಿಯರಿಗೆ. ಸಾಹಿತ್ಯಕೃತಿಯೂ ಕೂಡಾ. ಬರವಣಿಗೆಯನ್ನುವುದು ಈ ಕಾರಣದಿಂದ ಮಹಿಳೆಯರಿಗೆ ಐಶಾರಮದ ವೈಭೋಗದ ಪ್ರಕ್ರಿಯೆಯಲ್ಲ. ಬರವಣಿಗೆಯ ಸಂದರ್ಭದಲ್ಲಿ ಮಹಿಳೆಯರು ತಮ್ಮ ಲಿಂಗ ವೈದೃಶ್ಯದ ಅಂಶವನ್ನು ಸೃಜನಶೀಲತೆಯ ಸಂಕಟವನ್ನು ಅನುಭವಿಸುತ್ತಾರೆ. ಎಂಬುದಿದೆ. ಕ್ರಮೇಣ ತಮ್ಮ ಬರವಣಿಗೆಯ ನಂತರ ಹೊಸ ಹೆಜ್ಜೆ ಪಡೆಯತೊಡಗಿದರು.

ಗಂಗಾ ಹಾಗೂ ಪದ್ಮಾ, ಮಾಲತಿ, ಸಬೀಹಾ ಅವರ ಕತೆಗಳಲ್ಲಿ ಹೆಚ್ಚಾಗಿ ತಾವು ನೋಡುವುದಾದರೆ ಅವರು ಬಾಲ್ಯದಲ್ಲಿ ಅನುಭವಿಸಿದ ಬಡತನ, ಸಮೃದ್ಧ ಕುಟುಂಬದ ದೌರ್ಬಲ್ಯದ ಎಳೆಗಳು ಅದೇ.. ಕತೆಗಳದವು. ಗಂಗಾ ಅವರು ಬರವಣಿಗೆಗೆ ಕುಳಿತಾಗ ಅವರಿಗೆ ವಸ್ತುವಿಗೆ ಬರಹ ಬರಲಿಲ್ಲ. ಸಾಮಾಜಿಕವಾಗಿ ಹೆಣ್ಣಿನ ಮೇಲೆ, ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಅವರ ಮನಸ್ಸನ್ನು ಕಲಕಿ ಕತೆಗಳಾದವು ಸಮಾಕಾಲಿನ ಲೇಖಕಿಯರಲ್ಲ ಶ್ರೀಮಂತ ಅಥವಾ ಮಧ್ಯಮ ವರ್ಗದ ಹೆಣ್ಣುಮಕ್ಕಳ ಪ್ರೇಮಕತೆಗಳನ್ನು ಬರೆಯುತ್ತಿದ್ದಾಗ ಗಂಗಾ ಅವರು ಬಡಹೆಣ್ಣುಮಕ್ಕಳ, ಕೀಳುಜಾತಿಯ ಹೆಣ್ಣುಮಕ್ಕಳ ಬದುಕನ್ನು ಕತೆಗಾಗಿ ಹತ್ತಿರವಾದ ಕತೆಯುಳನ್ನು ಹೆಣೆದರು. ಅವರು ತಮ್ಮ ಕತೆಗಳ ಬಗ್ಗೆ ಹೀಗೆ ಹೇಳುತ್ತಾರೆ.

"ಬರೀ ಕಲ್ಪನೆ ಮಾತ್ರದಿಂದ ಸಾಹಿತ್ಯ ಸೃಷ್ಟಿಯಾಗಲಾರದು ಆಗಬಾರದು ಕೂಡ ಎಂಬುದು ನನ್ನ ನಂಬಿಕೆ. ಹಾಗೆಂದು ಬದುಕಿನ ನಿಜ ಚಿತ್ರಣವನ್ನು ನೀಡಿದರೆ ಅದು ಕೇವಲ ವರದಿಯಾದೀತಷ್ಟೇ ಹಾಗೆಂದು ತುಸು ಕಲ್ಪನೆ ಬೆರಸಿದ ನಿಜಬದುಕಿನ ಸಾಹಿತಿಕ ಚಿತ್ರಣ ನನಗಿಷ್ಟ ಎಂದ ಗಂಗಾರವರು". ತನ್ನ ಬರಹಗಳಿರುವೂದು ಹಾಗೆಯೇ ಮಹಿಳೆ ಮಾತ್ರವೇ ಶೋಷಣೆಗೆ ಗುರಿಯಲ್ಲ ಎಂದು ಈ ಮುನ್ನ ಬರದಿದ್ದೇನಾದರೂ ಸ್ತ್ರೀ ಶೋಷಣೆಗೆ ಮಿಕ್ಕೆಲ್ಲವುಗಳಿಂದಲೂ ಜಾಸ್ತಿ ಪ್ರಮಾಣದಲ್ಲಿವೆ ಎಂಬುದು ಕೂಡಾ

ಅವರ ಗಮನದಲ್ಲಿದೆ. ತಾನು ಕೂಡಾ ಈ ರೀತಿಗೆ ಒಳಗಾದವಳೆ ಎಂಬುದನ್ನು ತಮ್ಮ ಸಣ್ಣಕತೆಯಲ್ಲಿ ವಿವರಿಸಿದ್ದಾರೆ.

ಮಾಲತಿಯವರು ಹೆಣ್ಣಿಗೆ ವಿವಾಹವೇ ಅಂತಿಮದಲ್ಲ. ಅದನ್ನು ಮೀರಿಯೂ ಆಕೆ ತನ್ನ ತನವನ್ನುಬೆಳೆಸಿಕೊಳ್ಳಲು ಸಮಾಜವನ್ನು ಸಶಕ್ತಗೊಳಿಸಲು ಮಹತ್ವದ ಕೊಡುಗೆಯನ್ನು ನೀಡಬಲ್ಲಳು. ಸ್ತ್ರೀ ಜಗತ್ತಿನ ಚಿತ್ರಣಕ್ಕಷ್ಟೇ ಸೀಮಿತಗೊಳ್ಳದೆ ಪುರುಷ ಪಾತ್ರಗಳನ್ನು ಪುರುಷ ಜಗತ್ತನ್ನು ದಕ್ಕಿಸಿಕೊಂಡಿವೆ. ಅವರ ಪ್ರಬುದ್ಧ ವೈಚಾರಿಕತೆಯ ಮನಸ್ಸಿಗೆ ಸ್ತ್ರೀತತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯಾತ್ಮಕ ಈ ಮೂರು ಸ್ತರಗಳನ್ನು ಗ್ರಹಿಸಲು ಸಾಧ್ಯವಾಗಿದೆ. ಅಲ್ಲದೆ ಗ್ರಾಮೀಣ–ನಗರ ಜೀವನ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ, ಆರೋಗ್ಯ, ಶಿಶುಪಾಲನೆ, ವೈಚಾರಿಕತೆ. ಉಳಿತಾಯದ ಮಾರ್ಗಗಳಂತಹ ಬಹುಮುಖಿ ಆಸಕ್ತಿಗಳು ಮಾಲತಿಯವರ ಪ್ರಬುದ್ಧ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಇಷ್ಟೆಲ್ಲಾ ಸಾಹಿತ್ಯಿಕ ಸಾಧನೆಗಳ ಹೊರತಾಗಿಯೂ 'ಕನ್ನಡ ಸಾಹಿತ್ಯ ಸಾಗರದಲ್ಲಿ ಲೇಖಕಿಯಾದ ಅವರು ಒಂದು ಸಣ್ಣ ಬಿಂದು' ಎನ್ನುವ ಮಾಲತಿಯವರ ವಿನಯಂತಿಕೆ ಇಂದಿನ ಲೇಖಕಿಯರಿಗೆ ಮಾರ್ಗದರ್ಶಕವಾಗುವುದು.

ಪದ್ಮಾರವರು ಹೆಣ್ಣು ಅಸಹಾಯಕಳಾದರೆ ಸಮಾಜ ಅವಳನ್ನು ಯಾವ ರೀತಿ ಶೋಷಿಸುತ್ತದೆ. ಎಂಬ ಸತ್ಯವನ್ನು – ಕಣ್ಣಾರೆ ನೋಡಿ ಅನುಭವಿಸಿದರು ಪತಿಯ ವ್ಯಾಪಾರ ವಹಿವಾಟುಗಳನ್ನು ಏಕಾಂಗಿಯಾಗಿ ನಿರ್ವಹಿಸಬೇಕಾದ ಪ್ರಸಂಗಗಳಲ್ಲಿ ಅವರಿಗೆ ಆಸರೆಯಾಗಿ ಒದಗಿದ್ದು ಹೆತ್ತ ತಂದೆಯ ಪ್ರೋತ್ಸಾಹದ ನುಡಿಗಳು ಹಾಗೂ ಆಪ್ತವರ್ಗದ ಸಹಾಯ ಹಸ್ತಗಳು. ಓರ್ವ ಗೃಹಿಣಿಯಾಗಿ ಅವರು ಸಂತೃಪ್ತ ಬದುಕನ್ನು ನಡೆಸಿದ್ದಾರೆ. ಪತಿಯ ಸಹಕಾರ ಪ್ರೋತ್ಸಾಹಗಳಿಂದ ಓದು, ಬರಹ ಸಮಾಜಕ – ಸಾಹಿತ್ಯಕ ಚಟುವಟಿಕೆಗಳಲ್ಲಿ ಸಂಪೂರ್ಣ ರೀತಿಯಲ್ಲಿ ತೊಡಗಿಸಿಕೊಂಡ ತೃಪ್ತಿ ಅವರಿಗಿದೆ. ಸಾಹಿತ್ಯವನ್ನು ಸಾಧನೆಯಾಗಿ ತಾನು ಪಡೆಯಲಿಲ್ಲ. ಎಂದು ನಮ್ರವಾಗಿ ಒಪ್ಪಿಕೊಳ್ಳುವ ಇವರು ಸಾಹಿತ್ಯ ತಪಾಸ್ಸಾಗಬೇಕು. ಸಾಹಿತ್ಯ ಸರಸ್ವತಿ ಆರಾಧ್ಯ ದೈವವಾಗಬೇಕು ಎನ್ನುವ ಕನಸು ಕಂಡವರು. ಅವರ ಈ ಕನಸಿನ ಸ್ವರೂಪವನ್ನು ಅವರ ಕೃತಿ ಅವಲೋಕನದಿಂದ ತಿಳಿದುಕೊಳ್ಳ ಬಹುದಾಗಿದೆ. ಅವರ ಬಹುತೇಕ ಕೃತಿಗಳಲ್ಲಿ ಆಧುನಿಕ ಮನೋಭಾವಕ್ಕೆ ಪರವಾದ ಧೋರಣೆಯನ್ನು ಲೇಖಕಿ ವ್ಯಕ್ತಪಡಿಸುವರಾದರೂ ಸಂಪ್ರಾದಾಯ ಆಚರಣೆಗಳಿಗೆ, ಸಂಸ್ಕೃತಿ ಕುರಿತಾದ ಮನೋಭಾವಕ್ಕೆ ಪರವಾದ ಧೋರಣೆಯನ್ನು ಲೇಖಕಿ ವ್ಯಕ್ತಪಡಿಸಿದರು. ಮನುಷ್ಯ ಸಂಬಂಧದಲ್ಲಿ ಅವು ಬಿರುಕನ್ನು ಉಂಟುಮಾಡುವುದಾದರೆ ಅಂಥವುಗಳಿಗೆ ಅವಕಾಶ ನೀಡಲಾಗದು ಎನ್ನುವ ಮನೋಭಾವವನ್ನು ಅವರು ವ್ಯಕ್ತಪಡಿಸಿದ್ದಾರೆ.

ಪದ್ಮಾರವರ ಬರವಣಿಗೆಯ ಆಕರ್ಷಣೆ ಇರುವುದು ಅವರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುವ ಜೀವನ ಪ್ರೀತಿಯಲ್ಲಿ ನೊಂದವರ ಬದುಕಿಗೆ ಆಧಾರವಾಗ ಬಲ್ಲ ಸಣ್ಣಪುಟ್ಟ ಪಾತ್ರಗಳನ್ನು ಅವರು ಸೃಷ್ಟಿಸುತ್ತಾರೆ. ಇದರಿಂದಾಗಿ ಹೆಚ್ಚಿನ ಕಾರ್ಯಸಾಧನೆಗೆ ಪ್ರಾಮುಖ್ಯವಿರುವುದು ಅವರ ಕೃತಿಯ ವೈಶಿಷ್ಟ್ಯವಾಗಿದೆ.

ಸಬಿಹಾರವರು ಸಾಹಿತ್ಯ ಸಾಧನೆ ವೈವಿಧ್ಯಮಯ ಕ್ಷೇತ್ರಗಳನ್ನು ಒಳಗೊಂಡು ಹೆಚ್ಚು ವಿಸ್ತೃತ ಆಯಾಮವನ್ನು ಪಡೆದುಕೊಳ್ಳುತ್ತದೆ. ಸಾಹಿತ್ಯವಿಮರ್ಶೆ ಸ್ತ್ರೀವಾದಿ ಅಧ್ಯಯನ, ಭಾಷಾ ವಿಜ್ಞಾನ. ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಮೊದಲಾದವು ಸಬಹಾ ಅವರ ಆಸಕ್ತಿಯ ಕ್ಷೇತ್ರಗಳು. ಪ್ರಮುಖ ಸ್ತ್ರೀವಾದಿ ಚಿಂತಕಿಯರಲ್ಲಿ ಒಬ್ಬರನ್ನಾಗಿಯೂ ಅವರನ್ನು ಗುರುತಿಸಬಹುದು ಆದರೆ ಅವರಲ್ಲಿ ನಾವು ಗುರುತಿಸುವುದು “ರ್‍ಯಾಡಿಕಲ್ ಫಮನಿಸು' ಧೋರಣೆಗಳನ್ನಲ್ಲ. ಪ್ರತಿಭಟನೆ, ಹೋರಾಟಗಳನ್ನು ಅತ್ಯಂತ ಅನಿವಾರ್ಯ ನೆಲೆಯಲ್ಲಿ ಮಾತ್ರ ಕೈಗೆತ್ತಿಕೊಳ್ಳುವ ಆಶಯಕ್ಕೆ ಬದ್ಧರಾಗಿ ಸಾಧ್ಯವಾದಷ್ಟು ಬದುಕಿನ ಸಮನ್ವಯತೆ ಕಡಗೆ ತುಡಿಯುವ ಸಂವೇದನೆಯೊಂದನ್ನು ಅವರ ಸಾಹಿತ್ಯ ರೂಪಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಭಟಿಸುವುದು ಒಂದು ಬಗೆಯಾದರೆ ಬದುಕನ್ನು ಸಮದೃಷ್ಟಿಯಿಂದ ಸ್ವೀಕರಿಸುತ್ತಾ ಆತ್ಮಗೌರವಕ್ಕೆ ಧಕ್ಕೆ ಬರುವಲ್ಲೆಲ್ಲ ಎಚ್ಚರಿಸುವ ಜಾಗೃತ ಸಂವೇದನೆಯ ನೆಲೆ ಇನ್ನೊಂದು. ದಾಂಪತ್ಯವನ್ನು 'ಪಥ್ಯವಾಗಿಸದೆ' ಸತ್ಯವಾಗಿಸುವ ಹಂಬಲ ಇವರ ಪ್ರಧಾನ ಉದ್ದೇಶ ಇದು ಲಿಂಗ ಭೇದದ ಸಿದ್ಧ ಮಾದರಿಯೊಂದನ್ನು ಮೀರಿ ಯೋಚಿಸುವ ಸ್ತ್ರೀವಾದದ ನಾಲ್ಕನೇ ಅಂಶದ ಚಿಂತನೆಯ ಕ್ರಮವೂ ಹೌದು. ಈ ಬಗೆಯ ಚಿಂತನೆಯ ಹೊಳವುಗಳನ್ನಿಟ್ಟು ಬರೆಯುವ ಕನ್ನಡದ ಪ್ರಮುಖ ಲೇಖಕಿಯರ ಸಾಲಿಗೆ ಸಬಿಹಾ ಸೇರುತ್ತಾರೆ. ಸಬೀಹಾ ತನ್ನನ್ನು ಒಬ್ಬ ಮುಸ್ಲಿಂ ಲೇಖಕಿಯೆಂದೂ ನಿರ್ದಿಷ್ಟವಾಗಿ. ಗುರುತಿಸಿಕೊಳ್ಳಲು ಬಯಸುವುದಿಲ್ಲ ಧರ್ಮಕ್ಕಿಂತಲೂ ಮಾನವೀಯತೆ ದೊಡ್ಡದೆಂದು ಅವರು ಭಾವಿಸುತ್ತಾರೆ. ಅವರ ಸಾಹಿತ್ಯ ಕೂಡ ಇದನ್ನೇ ಪ್ರತಿವಾದಿಸುತ್ತಾದೆ.

ಹಿಂದೂ ಹಾಗೂ ಮುಸ್ಲಿಂ ಧರ್ಮದ ಬಾಂಧವ್ಯವನ್ನು ಹೆಣ್ಣಿನ ಕಣ್ಣಲ್ಲಿ ಕಟ್ಟಿಕೊಟ್ಟಿರುವುದು ಅಪೂರ್ವ ಧಾರ್ಮಿಕ ಮೂಲಭೂತವಾದವು ಪುರುಷಪ್ರಧಾನ ವ್ಯವಸ್ಥೆಯು ರೂಪಿಸಿದ ದುರಂತ ಎನ್ನುವ ಅಂಶವನ್ನು ಕಥಾಲೇಖಕಿ ಸೂಕ್ಷ್ಮವಾಗಿ ಇಲ್ಲಿ ಪ್ರತಿಪಾದಿಸುತ್ತಾರೆ.

ಲೇಖಕಿಯರು ಎಲ್ಲಾ ಸಮಸ್ಯೆಗಳಿಗೆ ಸಂವೇದಿಸಿದ ಬಗೆಯನ್ನು ತಮ್ಮ- ತಮ್ಮ ಲೇಖನ ಮತ್ತು ಬರಹರೂಪದಲ್ಲಿ ತಿಳಿಸಿಕೊಟ್ಟಿದ್ದಾರೆ.

ಟಿಪ್ಪಣಿಗಳು–೩

೧. ಸಾರಾ ಅಬೂಬ್ಬಕ್ಕರ್ ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು ಪುಟಸಂಖ್ಯೆ –೬

೨. ಸಾರಾ ಅಬೂಬ್ಬಕ್ಕರ್ ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಪುಟ ಸಂಖ್ಯೆ ೫೪

೩. ಸಾರಾ ಅಬೂಬ್ಬಕ್ಕರ್ ಚಂದ್ರಗಿರಿ ತೀರದಲ್ಲಿ ಪುಟ ಸಂಖ್ಯೆ ೬೭

೪. ಗಂಗಾ ಪಾದೇಕಲ್ಲುರವರ ಲೇಖ–ಲೋಕ–೪ರಲ್ಲಿ ಪುಟ ಸಂಖ್ಯೆ ೧೨೧

೫. ಮಾಲತಿಯವರ ಬಗ್ಗೆ ಶೈಲಾ. ಯು ಬರೆದ ಚಂದ್ರಗಿರಿತೀರದಲ್ಲಿ ಪುಟ ಸಂಖ್ಯೆ ೨೯೧

೬. ಪದ್ಮಾ ಶೆಣ್ಯೆರವರ ಬಗ್ಗೆ ಗೀತಾ ಶೆಣ್ಯೆರವರು ಬರೆದ ಚಂದ್ರಗಿರಿ ತೀರದಲ್ಲಿ ಪುಟಸಂಖ್ಯೆ ೨೫೭.

೭. ಸಬಿಹಾ ರವರ ಬಗ್ಗೆ ಶುಭಾ ರವರು ಬರೆದ ಚಂದ್ರಗಿರಿತೀರದಲ್ಲಿ ಪುಟ ಸಂಖ್ಯೆ ೪೪೦–೪೪೨

೮. ಸಬಿಹಾ ಬರೆದ ನಡುಮನೆ. ಪುಟ ಸಂಖ್ಯೆ ೨

೯. ಡಾ.ನಾಗವೇಣಿ ಮಂಚಿ ರವರು ಬರೆದ ಜೋಡಾಟದಲ್ಲಿ ಪುಟ ಸಂಖ್ಯೆ ೪೨–೫೨

ಅಧ್ಯಾಯ – ೪

ಲೇಖಕಿಯರ ಬರಹ – ಬದುಕಿನ ಸಮನ್ವಯ

೪.೧ – ಪ್ರೇರಣೆ, ಪ್ರಭಾವದ ಸ್ವರೂಪ

ಅಧ್ಯಾಯ – ೪

ಪ್ರೇರಣೆ ಪ್ರಭಾವ ಸ್ವರೂಪ

"ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮುಸ್ಲಿಂ ಮಹಿಳೆಯರ ಶೋಷಣೆ ಹಾಗೂ ಕೋಮು ಸೌಹಾರ್ದ ಈ ಮೂರು ವಿಷಯಗಳ ಕುರುಹು ಅವರು ಕತೆ, ಕಾದಂಬರಿ ಹಾಗೂ ಲೇಖನಗಳನ್ನು ಬರೆಯತೊಡಗಿದರು. ಸಾರಾ ಅವರ ಕುರಿತು ತನಗೆ ತಿಳಿದಂತೆ ಬರಹದ ಮೂಲಕ ಮೂಲಭೂತವಾದಿಗಳ ವಿರುದ್ಧ ಒಂದು ವಿಧದಲ್ಲಿ ಹೋರಾಟವನ್ನೆ ಕೈಗೊಂಡೆನೆನ್ನಬಹುದು. ಬರಹವನ್ನಾರಂಭಿಸಿದ ಅದೇ ಸಂದರ್ಭದಲ್ಲೇ ಅಥವಾ ಅದಕ್ಕೂ ಒಂದೆರಡು ದಶಕಗಳ ಮೊದಲೇ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ತಲೆ ಎತ್ತಿ ಕೊಂಚ ಪ್ರಗತಿಯೆಡೆಗೆ ವಾಲುತ್ತಿದ್ದ ಮುಸ್ಲಿಂ ಸಮಾಜವನ್ನು ಮತ್ತೊಮ್ಮೆ ಏಳನೇ ಶತಮಾನಕ್ಕೆ ಕೊಂಡೊಯ್ಯುವಂತಹ ಪ್ರಯತ್ನವೊಂದನ್ನು ಸದ್ದಿಲ್ಲದೆ ಮೂಡುತ್ತಿತ್ತು"[೧]

ಸಾರಾರವರು ತಮ್ಮ ಪತಿಯನ್ನು ಕಳೆದುಕೊಂಡು ನಾಲ್ಕು ತಿಂಗಳ 'ಇದ್ಧತ್' ಆಚರಿಸುತ್ತಿದ್ದ ಸಮಯ ಇವರ ಧಾರ್ಮಿಕ ನಿಷ್ಠೆಗೆ ಇದರಿಂದ ತೀರಾ ಆಘಾತವಾಗಿತ್ತು. 'ಸಮುದಾಯದೊಳಗೆ ಅವರಂತೆ ಅವರು ಒಂದು ಅಂಗ ಅವರನ್ನು ಮತಭ್ರಷ್ಟನಾಗಿಸಲು ಅವರು ಯಾರು"? ೨ ಎಂಬ ಸವಾಲಿನೊಂದಿಗೆ ಆಗ ಜೀವಂತರಿದ್ದ ತನ್ನ ತಂದೆಯ ಬಳಿ ಸಲಹೆಗೆಂದು ಧಾವಿಸಿದರು. ಇಸ್ಲಾಂ ಧರ್ಮ ಗ್ರಂಥಗಳ ಬಗೆ ಅಪಾರ ನಂಬಿಕೆಯಿದ್ದ ಸಾರಾಗೆ ತಂದೆಯ ಸಾಂತ್ವನದ ಅಗತ್ಯವಿತ್ತು ಮಗಳ ಸಮಸ್ಯೆಗೆ ಉತ್ತರವಾಗಿ ತಂದೆ ನಮ್ಮ ನಮ್ಮೊಳಗೆ ಜಗಳವೇಕೆ ನೀನು ಈ ಕರಪತ್ರದ ವಿಚಾರ ನಿನಗೆ ಗೊತ್ತೇ ಇಲ್ಲವೆನ್ನುವಂತೆ ಇದ್ದುಬಿಡು ಎಂದು ಬಿಟ್ಟರು ಆದರೆ ಮಗಳು ತನಗಾದ ಮನೋವೇದನಗೆ ಮಾನನಷ್ಟ ಮೊಕದ್ದಮೆ ಯನ್ನು ಹೂಡುವ ಮೂಲಕ ನ್ಯಾಯ ಕಾಣಬೇಕೆನ್ನುವ ಹಠ ಹಿಡಿದಾಗ ಮಗಳಿಗೆ ಕರ್ಕಪತ್ರ. ಸಹಿತ ಭೇಟಿಯಾಗುವಂತೆ ವಕೀಲರೊಬ್ಬರ ಹೆಸರು ಸೂಚಿಸಿದ್ದರು. "ಸಾರಾ ತಂದೆಯ ಸಲಹೆಯಂತೆ ವಕೀಲರ ಸಹಾಯದಿಂದ ಮೊಕದ್ದಮೆ ಮಾಡಿ ಸವಾಲು– ಪಾಟಿ ಸವಾಲುಗಳನ್ನು ಎದುರಿಸಿ ಜಯಶೀಲರಾದರು".[೩]

ಊರಿನ ಮಹಿಳೆಯರ ಈ ಮತಾಂಧತೆಗೆ ಹೇಗೆ ಕಡಿವಾಣ ಹಾಕುವುದೆಂದು ತಿಳಿಯದೆ ಅವರು ತೊಳಲಾಡುತ್ತಿದ್ದೆ. ಬರಹದ ಮೂಲಕ, ಸಾಹಿತ್ಯದ ಮೂಲಕ ಏನಾದರೂ ಪ್ರಯತ್ನ ಮಾಡಬಹುದೆಂದು ಯೋಚಿಸಿ ಬರಹವನ್ನಾರಂಭಿಸಿದ್ದರೂ ಯಾವ ಪತ್ರಿಕೆಗಳೂ ಪ್ರೋತ್ಸಾಹ ನೀಡದ ಕಾರಣ ಆ ಪ್ರಯತ್ನವನ್ನೂ ಸಿಲ್ಲಿಸಿದೆ. "೧೯೮೦ರಲ್ಲಿ ಲಂಕೇಶ್ ಪತ್ರಿಕೆಯ" ಪ್ರಾರಂಭ ತನ್ನ ಹಾದಿಯನ್ನು ಸುಗಮಗೊಳಿಸಿತು. ಅಣೆಕಟ್ಟೆಯಲ್ಲಿ ಬಂಧಿಯಾದ ಜಲರಾಶಿ ಗೇಟು ಎತ್ತಿದೊಡನೆ ಧುಮ್ಮಿಕ್ಕಿ ಹರಿಯುವಂತೆ ನನ್ನೊಲಗೆ ಹೊಗೆಯಾಡುತ್ತಾ ನನಗೆ ಉಸಿರುಗಟ್ಟಿಸುತ್ತಿದ್ದ ಅವರ ಭಾವನೆಗಳು ಅವರ ಲೇಖನಿಯ ಮೂಲಕ ಸರಾಗವಾಗಿ ಹರಿಯಲಾರಂಭಿಸಿತು."[೪]

"ನೀವು ಈ ಪ್ರಪಂಚದಲ್ಲಿ ಏನನ್ನೂ ಆಶಿಸಬೇಡಿ. ನಿಮಗೆ ದೇವರು ಎಲ್ಲವನ್ನೂ ಪರಲೋಕದಲ್ಲಿ ನೀಡಲಿದ್ದಾನೆ. ನೀವು ಮನೆಯಿಂದ ಹೊರಗಿಳಿಯಬೇಡಿ. ಮನೆಯೊಳಗಿದ್ದುಕೊಂಡು ಮಕ್ಕಳನ್ನು ಸಾಕುವುದು ನಿಮ್ಮ ಜವಾಬ್ದಾರಿ...."[೫] ಹೀಗೆ ಸಾಗುತ್ತದೆ ಅವರ ಪ್ರವಚನ.

ಅವರ ಪ್ರಥಮ ಲೇಖನ ಪತ್ರಿಕೆಯಲ್ಲಿ ಪ್ರಕಟವಾದ ಸಂದರ್ಭದಲ್ಲಿ ದೂರದ ಬಿಜಾಪುರದಲ್ಲಿ ಒಂದು ಘಟನೆ ನಡೆಯಿತು. ನಾಜಿಮಾ ಭಾಂಗಿ ಎಂಬ ಮಹಿಳೆ ಸಿನಿಮಾ ನೋಡಲು ಥಿಯೇಟರಿಗೆ ಹೋದಳೆಂಬ ಕಾರಣಕಾಗಿ ಆಕೆಯ ಮೇಲೆ ಕೆಲವು ಮತಾಂಧ ಗುಂಪುಗಳು ಆಕ್ರಮಣ ಮಾಡಿದವು. ಮುಸ್ಲಿಂ ಮಹಿಳೆಯರು ಥಿಯೇಟರಿಗೆ ಹೋಗುವುದು, ಸಿನಿಮಾ ನೋಡಿ ಮನರಂಜನೆ ಪಡೆಯುವುದೆಲ್ಲದರ ಮೇಲೂ ಈ ಜನರು ನಿಷೇಧ ಹೇರತೊಡಗಿದ್ದರು. ನಾಜಿಮಾ ಭಾಂಗಿ ಒಂದು ಕಾಲೇಜಿನ ಉಪನ್ಯಾಸಕಿಯಾಗಿದ್ದು ಇನ್ನೂ ಮದುವೆಯಾಗಿರಲಿಲ್ಲ. ಅವರ ಸಹೋದರಿಯರಿಗೂ ಮದುವೆಯಾಗಿರಲಿಲ್ಲ. ಈ ಘಟನೆಯಿಂದಾಗಿ ಆಕೆಯನ್ನು ಕಾಲೇಜಿನಿಂದ ಅಮಾನತ್ತು ಮಾಡಲಾಗಿತ್ತು ಎಂಬುದು ಅವರ ನೆನಪು. ಆ ಬಳಿಕ ಅವರು ಬಿಜಾಪುರಕ್ಕೆ ಹೋಗಿ ಅವರನ್ನು ಭೇಟಿಯಾದಾಗ ಅವರು ಖಿನ್ನರಾಗಿದ್ದರು. ಆಗ ಅವರು ಸಮಾಜದಿಂದ ಬಹಿಷ್ಕೃತರಾದಂತೆ ಕಂಡು ಬಂದಿದ್ದರು. ಈ ಒಂದು ಘಟನೆ ಹಾಗೂ ಇದಕ್ಕೆ ದೊರೆತ ಪ್ರಚಾರದಿಂದಾಗಿ ಕೂಡಲೇ ಮುಸ್ಲಿಂ ಮಹಿಳೆಯರು ಥಿಯೇಟರಿಗೆ ಹೋಗಲು ಹಿಂಜರಿಯತೊಡಗಿದ್ದರು! ಈ ಸಂಘಟನೆಗಳು ಈ ರೀತಿ ಸಮಾಜದ ಮೇಲೆ ಹಿಡಿತ ಸಾಧಿಸತೊಡಗಿದ್ದುವು.

ಅವರ ಬರಹಗಳಾಗಲೇ ಸಮಾಜದ ಪುರುಷರ ಗಮನ ಸೆಳೆಯತೊಡಗಿದ್ದುವು. ಶ್ರೇಷ್ಠ ನ್ಯಾಯಾಲಯದಲ್ಲಿ ಹೊರಬಿದ್ದ ಶಾಬಾನು ಮೊಕದ್ದಮೆಯ ತೀರ್ಪನ್ನು ವಿರೋಧಿಸಿ ದೇಶಾದ್ಯಂತ ಒಂದಕ್ಕೊಂದು ವಿರೋಧಿಯಾಗಿದ್ದರು ಧಾರ್ಮಿಕ ಸಂಘಟನೆಗಳೂ ಒಂದುಗೂಡಿ ಮುಸ್ಲಿಮರಿಂದ ಪ್ರತಿಭಟನೆ ಮಾಡಿಸಿ ತಮಗೆ ಬೇಕಾದಂತೆ ಮುಸ್ಲಿಂ ಮಹಿಳೆಯರನ್ನು ಶೋಷಣೆಗೆ ಗುರಿ ಮಾಡುವಂತಹ, 'ವಿಚ್ಛೇದಿತ ಮುಸ್ಲಿಂ ಮಹಿಳೆಯರ ಹಕ್ಕು ರಕ್ಷಣಾ ಮಸೂದೆ' ಎಂಬ ಕಾನೂನನ್ನು ಲೋಕಸಭೆಯಲ್ಲಿ ಅಂಗೀಕರಿಸುವಂತೆ ಸರಕಾರದ ಮೇಲೆ ಒತ್ತಡ ತಂದ ಮುಸ್ಲಿಮರ ಶಕ್ತಿಯನ್ನು ಕಂಡು ಆಶ್ಚರ್ಯಚಕಿತಳಾಗಿದ್ದೆ. ಈ ಪ್ರತಿಭಟನೆಗೆ ಮುಸ್ಲಿಂ ಮಹಿಳೆಯರೂ ಬೆಂಬಲ ಸೂಚಿಸಿದ್ದನ್ನು ಕಂಡು ಇದರ ವಿರುದ್ಧ ಹೇಗೆ ಹೋರಾಡುವುದು ಎಂದು ತಿಳಿಯದ ಸಾರಾ ಖಿನ್ನಳಾಗಿದ್ದಾರೆ, ಆದರೆ ಸಾರಾ ಮೌನವಾಗಿರುವುದು ಆತ್ಮಸಾಕ್ಷಿಗೆ ವಿರುದ್ಧವಾಗಿತ್ತು. ಮುಸ್ಲಿಂ ಮಹಿಳೆಯರನ್ನು ಒಂದುಗೂಡಿಸುವುದರಲ್ಲಿ ಈ ಕುರಿತು ಅರಿವನ್ನು ಮೂಡಿಸುವ ಅವರನ್ನು ಹೋರಾಟಕ್ಕೆ ಅಣಿಗೊಳಿಸುವಂತೆ ಯಾವ ಸಾಮರ್ಥ್ಯವು ತನ್ನಲ್ಲಿರಲಿಲ್ಲ. ಈ ಪ್ರತಿಭಟನೆಗೆ ತನ್ನತಾನು ಕಂಡ ಒಂದೇ ಒಂದು ಹಾದಿ ನನ್ನ ಬರಹ, ತಲಾಖ್ ನೀಡಿದ ಮಹಿಳೆಗೆ 'ಮತಾಃ (ಆಕೆಯ ಮುಂದಿನ ಬದುಕಿಗೆ ತೊಂದರೆಯಾಗದಂತೆ ಒಂದೇ ಮೊತ್ತದ ಪರಿಹಾರ) ನೀಡಬೇಕೆಂಬ ಖುರ್‌ಆನಿನ ಆದೇಶವನ್ನು ಈ ಹಕ್ಕುರಕ್ಷಣಾ ಮಸೂದೆಯಲ್ಲಿ ಮರೆಮಾಚಿ, ವಿಚ್ಛೇದಿತ ಮಹಿಳೆಗೆ ಆ ಗಂಡನು ಜೀವನಾಂಶ ಕೊಡಬೇಕಾಗಿಲ್ಲ ಎಂಬ ಸುಳ್ಳು ವಾದವನ್ನೊಡ್ಡಿದುದರೆಡೆಗೆ ನನ್ನ ಬರಹದ ಮೂಲಕ ಗಮನ ಸೆಳೆಯುವ ಪ್ರಯತ್ನ ಸಾರಾರವರದು. ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು ಕೂಡ ಖುರ್‌ಆನಿನ ಈ ವಾಕ್ಯವನ್ನೆತ್ತಿಕೊಂಡೇ ಶಾಬಾನು ಮೊಕದ್ದಮೆಯ ತೀರ್ಪು ನೀಡಿದ್ದರು. ಲೋಕಸಭಾ ಸದಸ್ಯರಾಗಿದ್ದ ಆರಿಫ್ ಮೊಹಮ್ಮದ್ ಖಾನ್

ಎಂಬವರೂ ಕೂಡ ಈ ತೀರ್ಪಿಗೆ ಬೆಂಬಲ ನೀಡಿದ್ದರು. ಆದರೆ ಮಹಿಳೆಯರಿಗೆ ಪ್ರಯೋಜನವಾಗುವಂತಹದೇನನ್ನಾದರೂ ಸರಕಾರ ಮಾಡಹೊರಟರೆ ಅದೆಲ್ಲವನ್ನೂ ಮೂಲೆಗೊತ್ತರಿಸಿ ತಮಗೆ ಬೇಕಾದಂತೆ ಕಾನೂನನ್ನೇ ತಿದ್ದುಪಡಿ ಮಾಡಿಸಲು ಮುಸ್ಲಿಂ ಪುರುಷರು ಸಮರ್ಥರಾಗಿದ್ದರು! ಆಗ ಅವರಿಗೆ ಈ ದೇಶದ ಕಾನೂನಾಗಲಿ, ಖುರ್‌ಆನಿನ ಆದೇಶವಾಗಲಿ ಯಾವುದೂ ಬಾಧಕವಾಗುವುದಿಲ್ಲ.

ಇದೇ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಂದ ಒಂದು ಸುದ್ದಿ ಸಾರಾ ಗಮನ ಸೆಳೆಯಿತು. ಪುಣೆಯ ಸಯ್ಯದ್ ಭಾಯಿ ಎಂಬವರು ಮುಸ್ಲಿಂ ಮಹಿಳೆಯರ ಸುಲಭದ ತಲಾಖ್ ಪದ್ಧತಿ, ಬಹುಪದ್ಧತಿ ಇವುಗಳ ವಿರುದ್ಧ ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡುತ್ತಿದ್ದರು. ಅವರ ಧೋರಣೆ ಕೂಡಾ ನನ್ನಂತೆಯೇ ಇತ್ತು. ಮಾತ್ರವಲ್ಲ ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ಬೆಂಬಲವಿತ್ತಲ್ಲದೆ ಸಮಾನ ನಾಗರಿಕ ಸಂಹಿತೆಗೂ ಬೆಂಬಲವಿತ್ತು. ಹೀಗಾಗಿ ನಾನು ಅವರನ್ನು ಸಂಪರ್ಕಿಸಿದಾಗ ಇವರು ಬಹಳ ಸಂತೋಷದಿಂದ ಉತ್ತರ ಬರೆದರಲ್ಲದ ೆಅವರ ಮನೆಗೇ ಬಂದು ಸಾರ ಅವರ ಪರಿಚಯ ಮಾಡಿಕೊಂಡರು. ಮುಂದೆ, ಇವರು ಮತ್ತು ಬೆಂಗಳೂರಿನ ರೆಹಮಾನ ಖಾನ್ ಎಂಬವರು ಬೆಂಗಳೂರಿನಲ್ಲಿ ಒಂದು ಪತ್ರಿಕಾಗೋಷ್ಠಿ ಕರೆದು ಸಮಾನ ನಾಗರಿಕ ಸಂಹಿತೆಗಾಗಿ ಬೆಂಬಲ ಸೂಚಿಸಿದೆವು. ಹಲವಾರು ಮುಸ್ಲಿಮರು ಇದಕ್ಕೆ ಬೆಂಬಲ ಸೂಚಿಸಿ ನನಗೆ ಪತ್ರವನ್ನೂ ಬರೆದಿದ್ದರು. ಆದರೆ ಯಾವುದೇ ಕಾರಣಕ್ಕೆ ಅದಾಗದಂತೆ, ತಾವು ಮುಂದುವರಿಯದಂತೆ ತಡೆಯೊಡ್ಡಲು ಆ ಮೂಲಭೂತವಾದಿ ಸಂಘಟನೆಗೆ ಸಾಧ್ಯವಾಯಿತು. ತಾವು ಪ್ರಾರಂಭಿಸಿದ್ದ ಮುಸ್ಲಿಂ ಪ್ರಗತಿ ಪರಿಷತ್ತು ಎಂಬ ಸಂಘಟನೆ ಬಹಳ ಕಾಲ ಮುಂದುವರಿಯಲಿಲ್ಲ. ಆದರೆ ಸಯ್ಯದ್ ಭಾಯಿಯವರು ಸಂಘಟನೆಯ ಸಭೆಗಳನ್ನು ಮಧುರೆ ಮತ್ತು ಪುಣಾದಲ್ಲಿ ನೆರವೇರಿಸಿದ ಕಾರಣ ನನಗೆ ಅಲ್ಲಿನ ಕೆಲವು ಮಹಿಳೆಯರ ಪರಿಚಯವಾಯಿತಲ್ಲದೆ ಸಾರರವರ ಧೋರಣೆಯನ್ನು ಒಪ್ಪಿಕೊಂಡು ಅದಕ್ಕಾಗಿ ಹೋರಾಡುವವರೂ ಇದ್ದಾರೆಂಬುದು ಒಂದು ರೀತಿಯ ತೃಪ್ತಿ ನೀಡಿತು. ಮಧುರೆಯಲ್ಲಿ ಹಫಿಸಾ ಎಂಬ ನ್ಯಾಯವಾದಿ ಮಹಿಳೆ, ಮುಸ್ಲಿಂ ಮಹಿಳೆಯರ ಈ ಹಕ್ಕು ರಕ್ಷಣಾ ಮಸೂದೆ ಮಹಿಲೆಯರಿಗೆ ಬಹಳ ದೋಷವುಂಟು ಮಾಡುವಂತಹುದಾಗಿದೆಯೆಂದೂ ಇದನ್ನು ಸರಕಾರ ಕೂಡಲೇ ಸರಕಾರ ಹಿಂತೆಗೆದುಕೊಳ್ಳಬೇಕೆಂದೂ ಕರೆಕೊಟ್ಟಿದ್ದರು. ಆದರೆ ಆ ಕಾನೂನು ಇಂದಿಗೂ ಹಾಗೆಯೇ ಇದೆ. ಮಾತ್ರವಲ್ಲ, ತಲಾಖ್ ಪೀಡಿತ ಮುಸ್ಲಿಂ ಮಹಿಳೆಯರು ನ್ಯಾಯಾಲಯವನ್ನು ಸಮೀಪಿಸದಂತೆ ಅಥವಾ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದರೂ ಅದನ್ನು ಹಿಂದಕ್ಕೆ ಪಡೆಯುವಂತೆ ಮೂಲಭೂತವಾದಿ ಸಂಘಟನೆಗಳು ಅವರ ಮೇಲೆ ಒತ್ತಡ ಹೇರಿ ಅವರನ್ನು ವ್ಯವಸ್ಥಿವಾಗಿ ಕತ್ತಲಲ್ಲಿಟ್ಟಿವೆ.

ಸಾಮಾಜಿಕವಾಗಿ ಯಾವುದೇ ಹೋರಾಟವನ್ನು ಅವರಿಂದ ಮಾಡಲಾಗದಿದ್ದರೂ ವೈಯಕ್ತಿಕವಾಗಿ ಈ ಮೂಲಭೂತವಾದಿಗಳ ವಿರುದ್ಧ ಒಂದು ಹೋರಾಟವನ್ನು ಅವರು ಕೈಗೊಳ್ಳಲೇಬೇಕಾಯಿತು. ೧೯೮೮ರ ಜನವರಿಯಲ್ಲಿ ಪುತ್ತೂರಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ವತಿಯಿಂದ 'ಜನಾಂಗೀಯ ಅಧ್ಯಯನ' ಎಂಬ ವಿಚಾರಸಂಕಿರಣವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಅದಾಗಲೇ ಅಂದಿನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ವಿವೇಕ ರೈಯವರು ವಹಿಸಿದ್ದರು. ಕೊರಗ ಜನಾಂಗದ ಕುರಿತು ಪ್ರೊ.ಅಮೃತ

ಸೋಮೇಶ್ವರರು ಪ್ರಬಂಧ ಮಂಡಿಸಿದ ಬಳಿಕ ನಾನು ಪ್ರಬಂಧ ಮಂಡನೆಗೆ ಎದ್ದು ನಿಂತೊಡನೆ ಸಭೆಯಲ್ಲಿದ್ದಾತನೊಬ್ಬನು, "ನೀವು ಬುರ್ಖಾ ಹಾಕಿಲ್ಲ. ಆದುದರಿಂದ ನೀವು ಮುಸ್ಲಿಂ ಅಲ್ಲ. ಮುಸ್ಲಿಂ ಮಹಿಳೆಯರ ಕುರಿತು ನೀವು ಮಾತನಾಡಬಾರದು" ಎನ್ನುತ್ತಿದ್ದಂತೆ ಸಭೆಯಲ್ಲಿ ಗಲಭೆ ಆರಂಭವಾಯಿತು. ಲೇಖಕ ಫಕೀರ್ ಮುಹಮ್ಮದ್ ಕಟಪಾಡಿಯವರು ನನಗೆ ಅಡ್ಡ ನಿಂತುಕೊಂಡು ನನಗೆ ಅಪಾಯವಾಗದಂತೆ ತಡೆದರು. ಸ್ವಲ್ಪ ಹೊತ್ತಿನ ಬಳಿಕ ಪೋಲೀಸರೂ ಬಂದರು. ಗಲಭೆ ಶಾಂತವಾಯಿತು. ಅಧ್ಯಕ್ಷತೆ ವಹಿಸಿ ಅಧ್ಯಕ್ಷ ಭಾಷಣ ಮಾಡದೇ ಬಂದ ಒಂದೇ ಒಂದು ಕಾರ್ಯಕ್ರಮ ಅದು ಎಂದು ಡಾ. ವಿವೇಕ ರೈಯವರು ಇಂದಿಗೂ ಹೇಳುತ್ತಾರೆ!

ಮರುದಿನ ರಾಜ್ಯದಾದ್ಯಂತ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಯಿತು. ಕೆಲವು ಕಡೆಗಳಲ್ಲಿ ಪ್ರತಿಭಟನೆಗಳೂ ನಡೆದುವು. ಗುಲ್ಬರ್ಗಾದಲ್ಲಿ ಶರೀಫಾ, ಹಾಸನದಲ್ಲಿ ಬಾನು ಮುಷ್ತಾಕ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದರೆಂದೂ ತಿಳಿಯಿತು. ಹೀಗೆ ಕರ್ನಾಟಕದಾದ್ಯಂತ ಈ ಘಟನೆಗೆ ಪ್ರಚಾರ ನೀಡಲಾಯಿತು. ಬಹುಶ: ಈ ಮೂಲಭೂತವಾದಿಗಳು ಇಂತಹ ಆಕ್ರಮಣ ಮಾಡದೇ ಹೋಗಿದ್ದರೆ ಸಾರಾರವರು ಇಷ್ಟೊಂದು ಪ್ರಚಾರವಾಗಲಿ, ಇಷ್ಟೊಂದು ಪ್ರಶಸ್ತಿಗಳಾಗಲಿ ದೊರೆಯುತ್ತಿರಲಿಲ್ಲವೇನೋ! ಹಾಗಾಗಿ ಈ ಒಂದು ವಿಧದಲ್ಲಿ ಈ ಜನರಿಗೆ ಸಾರಾರವರು ಕೃತಜ್ಞಳಾಗಿರಬೇಕಲ್ಲವೇ?

ಈ ಘಟನೆಯ ಬಳಿಕ ಪುತ್ತೂರಿನ ಪೋಲಿಸರು ಈ ಜನರ ಮೇಲೆ ಯಾವುದೇ ಕಾನೂನು ಕ್ರಮವನ್ನೂ ಜರುಗಿಸಲಿಲ್ಲ. 'ಮುಸ್ಲಿಮರೆ ಮುಸ್ಲಿಂ ಮಹಿಳೆಯ ಮೇಲೆ ಮಾಡಿದ ಆಕ್ರಮಣ, ಅದಕ್ಕೆ ನಾವೇನೂ ಮಾಡಬೇಕಾಗಿಲ್ಲ!' ಎಂಬ ತೀರ್ಮಾನ ಅವರದು. ಈ ಕುರಿತು ನಾನು ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರಿಗೂ ಪತ್ರ ಬರೆದಿದ್ದೆ. ಇಂತಹ ವಿಷಯಗಳಿಗೆ ಕೈ ಹಾಕಿದರೆ ಅವರಿಗೆ ಮುಸ್ಲಿಮರು ಮತ ಹಾಕದಿದ್ದರೆ ಎಂಬುದು ಅವರ ಯೋಚನೆಯಾಗಿರಬಹುದು!

ಈ ಘಟನೆಯ ಮರುದಿನ ಕೇರಳದಿಂದ ಸಾರಾರವರ ತಮ್ಮನು ಓಡಿ ಬಂದನು. "ಕೇರಳದ ಕೆಲವು ಸಾಹಿತಿಗಳು ಪ್ರಚಾರಕ್ಕಾಗಿ ಹೀಗೆ ಮಾಡಿಸುತ್ತಾರೆ. ಇದರಿಂದ ನೀನೇನೂ ಬೇಜಾರು ಮಾಡಿಕೊಳ್ಳಬೇಕಾಗಿಲ್ಲ. ಹೀಗಾಗಿದ್ದು ಒಳ್ಳೆಯದೇ ಆಯಿತು. ಇನ್ನು ಧೈರ್ಯವಾಗಿ ಬರೆ. ನಿನ್ನ ಹಿಂದೆ ನಾವೆಲ್ಲರೂ ಇದ್ದೇವೆ". ಎಂದು ಹುರಿದುಂಬಿಸಿದನು[೬].

ಸಾರಾರವರು ಈಗಲೂ ಕೆಲವರು ಕೇಳುವುದು, "ನಿಮ್ಮ ಬರಹಕ್ಕೆ ನಿಮ್ಮ ಕುಟುಂಬದವರ ಅನುಮೋದನೆ ಇದೆಯೇ ಎಂದು. ಸಾರಾ ಕುಟುಂಬದ, ಸಾರಾರ ಗಂಡನ, ಮತ್ತು ಸಾರಾರ ತಂದೆಯ ಪ್ರೋತ್ಸಾಹವಿಲ್ಲ ಹೋಗಿದ್ದರೆ ನಾನು ಬರೆಯುವುದು ಸಾಧ್ಯವೇ ಇರಲಿಲ್ಲ. ಒಮ್ಮೆ ಮಂಗಳೂರಿನವರೊಬ್ಬರು ಸಾರಾರ ತಂದೆಯ ಬಳಿ ಬಂದ ನಿಮ್ಮ ಮಗಳು ಧರ್ಮಕ್ಕೆ ವಿರುದ್ಧವಾಗಿ ಬರೆಯುತ್ತಿದ್ದಾರೆ. ಧರ್ಮಕ್ಕೆ ಅಪಚಾರ ಮಾಡುತ್ತಿದ್ದಾರೆ. ಹಾಗೆ ಬರೆಯಬಾರದೆಂದು ಅವರಿಗೆ ಹೇಳಿ ಎಂದರು. ಅದಕ್ಕೆ ಅವರ ತಂದೆ ಧರ್ಮದ ಕುರಿತು ಯಾರು ಹೇಳುವುದು ಸರಿ, ಯಾರು ಹೇಳುವುದು ತಪ್ಪು ಎಮ್ಬು ಹೇಳುವವರು ಯಾರು? (ಧರ್ಮದ

ಕುರಿತು ಅಷ್ಟೊಂದು ತಿಳಿವಳಿಕೆ ಯಾರಲ್ಲಿದೆ ಎಂಬುದು ಈ ಮಾತಿನ ಅರ್ಥವಾಗಿರಬಹುದು). ಅವಳು ಬರೆದುದೆಲ್ಲವನ್ನೂ ನಾನು ಓದುತ್ತಾ ಇದ್ದೇನೆ. ಅದರಲ್ಲಿ ಧರ್ಮಕ್ಕೆ ವಿರೋಧವಾದುದೇನು ಇಲ್ಲ ಎಂದರು. ಧಾರ್ಮಿಕ ವಿಷಯಗಳನ್ನು ಚೆನ್ನಾಗಿ ಅರೆದು ಕುಡಿದವರೂ, ಮದ್ರಾಸ್ ವಿಶ್ವವಿದ್ಯಾಲಯದಿಂದ ಮಹಮ್ಮದನ ಲಾದಲ್ಲಿ ಚಿನ್ನದ ಪದಕವನ್ನು ಪಡೆದಿದ್ದವರೂ ಆದ ಅವರೊಡನೆ ಚರ್ಚೆ ಮುಂದುವರಿಸುವ ತಾಕತ್ತಿಲ್ಲದೆ ಬಂದಿದ್ದವರು ಹಿಂತಿರುಗಿದರು. ಹಾಗೆಯೇ ಇನ್ನೂ ಕೆಲವರು, ನಿಮ್ಮ ಬರವಣಿಗೆ ಕುರಿತು ನಿಮ್ಮ ಮಕ್ಕಳು ಏನನ್ನುತ್ತಾರೆ ಎಂದೂ ಕೇಳಿದ್ದಿದೆ. ನನಗನ್ನಿಸಿದ್ದನ್ನು ಬರೆಯಲು ನನಗೆ ಮಕ್ಕಳ ಅನುಮತಿ ಬೇಕಾಗಿದೆಯೆಂಬುವುದು ನನಗನ್ನಿಸಿಲ್ಲ. ಅವರು ನಾನು ಹೆತ್ತು ಸಾಕಿದ ಹೆತ್ತು ಸಾಕಿದ ಮಕ್ಕಳು. ನಾನು ಏನು ಎಂಬುದು ನನ್ನ ಮಕ್ಕಳಿಗೆ ಚೆನ್ನಾಗಿ ಗೊತ್ತಾಗಿದೆ. ಅವರ ಬದುಕಿನಲ್ಲಿ ನಾನು ಮೂಗುತುರಿಸುವುದಿಲ್ಲ ಅವರ ಇಷ್ಟವಂತೆ ಬದುಕಲು ಅವರು ಸ್ವತಂತ್ರರಾಗಿದ್ದಾರೆ ಎಂದಿದ್ದೇನೆ. ಮಕ್ಕಳು ಏನನ್ನುತ್ತರೆ ಎಂದು ಕೇಳಿದ್ದೇ ನನಗೆ ಆಶ್ಚರ್ಯವಾಗಿತ್ತು. ವೃದ್ಧಾಪ್ಯದಲ್ಲಿ ಮಕ್ಕಳ ಆಸರೆ ಬೇಕಾಗಬಹುದು. ಆದರೆ ಮಕ್ಕಳ ನಿಯಂತ್ರಣ ತನಗೆ ಒಪ್ಪಿತವಲ್ಲ".[೬]

ಇನ್ನೊಮ್ಮೆ ಒಂದು ಸಂವಾದ ಕಾರ್ಯಕ್ರಮದಲ್ಲಿ ಒಬ್ಬರು, "ನಿಮ್ಮ ಸಮಾಜದ ಮಹಿಳೆಯರೆಲ್ಲರೂ ಬುರ್ಕಾ ಹಾಕುತ್ತಾರಲ್ಲ? ನೀವು ಬುರ್ಕಾ ಹಾಕದಿದ್ದರೆ ನಿಮ್ಮ ಜನರು ಏನೂ ಹೇಳುವುದಿಲ್ಲವೇ?" ಎಂದು ಕೇಳಿದ್ದರು."ಸಾರಾ ಹೇಗೆ ವಸ್ತ್ರಧಾರಣೆ ಮಾಡಬೇಕೆಂಬುದು ತನಗೆ ಬಿಟ್ಟ ವಿಚಾರವೇ ಹೊರತು ತನ್ನ ಸಮಾಜಕ್ಕೆ ಸಂಬಂಧಪಟ್ಟ ವಿಚಾರವಲ್ಲ" ಎಂದು ಅವರು ಉತ್ತರಿಸಿದರು

ಸಾರಾರವರು ವೈಯಕ್ತಿಕವಾಗಿ ಮೂಲಭೂತವಾದಿ ಸಂಘಟನೆಯ ವಿರುದ್ಧ ಹೋರಾಟವನ್ನು ಕೈಗೊಳ್ಳಬೇಕಾಯಿತೆಂದು ಹೇಳಿದೆನಲ್ಲ.ಅದು ಪುತ್ತೂರಿನ ಗಲಭೆಯ ಬಳಿಕ ನಡೆದ ಘಟನೆಗಳು. ನನ್ನ ಲೇಖನಿಯನ್ನು ಸ್ಥಗಿತಗೊಳಿಸಲು ಜಮಾಅತೆ ಇಸ್ಲಾಮಿ ಸಂಘಟನೆಯ ಮುಖವಾಣಿ 'ಸನ್ಮಾರ್ಗ' ಎಂಬ ಪತ್ರಿಕೆಯೂ ಸಾಕಷ್ಟು ಪ್ರಯತ್ನಿಸಿದೆ. ತನ್ನನ್ನು ನಾಮಧಾರಿ ಮುಸ್ಲಿಂ ಎಂದೂ ಸಿನಿಮಾ ಸ್ಟಾರ್ ಎಂದೂ ಈ ಪತ್ರಿಕೆ ಬರೆದಿತ್ತು. ಈ ಪತ್ರಿಕೆಗೆ ಲೇಖನ ಬರೆಯುತ್ತಿದ್ದ ಕೆಲವು ಲೇಖಕರು ಸೇರಿಕೊಂಡು 'ಮುಸ್ಲಿಂ ಲೇಖಕರ ಸಂಘ' ಎಂಬ ಸಂಘಟನೆಯನ್ನೂ ಪ್ರಾರಂಭಿಸಿದರು. ಸಾರಾರವರು ಗಂಡ ತೀರಿ ಹೋಗಿ ಅವರು ಇದ್ದಾವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ ಈ ಸಂಘಟನೆ ನನ್ನನ್ನು ಜಾತಿಯಿಂದ ಬಹಿಷಕರಿಸಬೇಕೆಮ್ಬು ಸಮಾಜಕ್ಕೆ ಕರೆ ಕೊಟ್ಟು ಊರಿನಲ್ಲಿ ಸುತ್ತೋಲೆ ಹಂಚಿತು. ಸಾರಾರವರು ಮೈದುನನು ಸುತ್ತೋಲೆಯ ಪ್ರತಿಯನ್ನು ನನಗೆ ಕಳುಹಿಸಿದನು. ಆವರೆಗೂ ನಾನು ಸಹನೆಯನ್ನು ಕಳೆದುಕೊಂಡಿರಲಿಲ್ಲ. ಆದರೆ ಈಗ ನನ್ನ ಸಹನೆ ನಶಿಸಿತು. ಈ ಮುಲಭೂತವಾದಿಗಲ ಈ ಕ್ರಮವನ್ನು ಪ್ರತಿಭಟಿಸಬೇಕೆಂದು ತೀರ್ಮಾನಿಸಿಸ್ದೆ. ಆಗ ಬದುಕಿ ನನ್ನ ಬಳಿ ಇದ್ದ ನನ್ನ ತಂದೆಗೂ ಈ ಪತ್ರಿಕೆಗಳ ಬರಹ ಮತ್ತು ಸುತ್ತೋಲೆಯನ್ನು ತೋರಿಸಿದೆ. ಇದು ಮಾನನಷ್ಟ ಹದಾದರೆ, ಇಂತಹ ಕ್ರಮಗಳು ಸಂವಿಧಾನಬಾಹಿರವಾದುದಾಗಿದ್ದರೆ ಇದನ್ನು ಸಾರಾ ನ್ಯಾಯಾಲಯದಲ್ಲಿ ಪ್ರಶ್ನಿಸಲು ತಂದೆಯ ಸಲಹೆ ಕೇಳಿದೆ. ಸಾರಾರಂತೆಯೂ ಈ ಸಮಾಜದ ಅಂಗವಾದ ಕೆಲವರಿಗೆ ಸಮಾಜದ ತಮ್ಮ ಸಹನಾಗರಿಕರ ಮೇಲೆ ಇಂತಹ ಕ್ರಮ ಕೈಗೊಳ್ಳಲು, ಧಾರ್ಮಿಕ ಶಿಕ್ಷೆ ನೀಡಲು ಅಧಿಕಾಡಿಕೊಟ್ಟವರು

ಯಾರು ಎಂಬುದು ನನ್ನ ಪ್ರಶ್ನೆ. ಇಸ್ಲಾಂ ಧರ್ಮವೆಂಬುದು ಯಾರೋ ಕೆಲವರ ಕಪಿಮುಷ್ಠಿಯೊಳಗೆ ಬಂಧಿಸಲ್ಪಟ್ಟಿದೆಯೇ. ಜನರು ನೈತಿಕವಾದ ಹಾದಿಯಲ್ಲಿ ಮುನ್ನಡೆಯಲು ಪ್ರತಿವಾದಿಗಳು ಅವರಿಗೆ ಕೆಲವು ಜೀವನ ಕ್ರಮಗಳನ್ನು ಬೋಧಿಸಿದ್ದರು. ಆ ಕ್ರಮದಂತೆ ನಡೆಯದವರನ್ನು ಧರ್ಮಭ್ರಷ್ಠರಾಗಿಸಿ ಸಮಾಜದಿಂದ ಹೊರದೂಡಬೇಕೆಂದು ಎಲ್ಲೂ ಬೋಧಿಸಿಲ್ಲ. ಹೀಗಿರುವಾಗ ಕೆಲವರು ಧರ್ಮವನ್ನು ತಮ್ಮ ಕೈಯೊಳಗಿಟ್ಟುಕೊಂಡು ಇತರರ ಮೇಲೆ ದಬ್ಬಾಳಿಕೆ ನಡೆಸಲು ಹೇಗೆ ಸಾಧ್ಯ? ಧಾರ್ಮಿಕ ನಿಯಮಗಳನ್ನು ಹೊರತುಪಡಿಸಿ, ನಾವು ಯಾವ ದೇಶದಲ್ಲಿ ಬದುಕುತ್ತಿದ್ದೇವೆಯೊ ಆ ದೇಶದ ಸಾಮಾಜಿಕ ನಿಯಮಗಳನ್ನು (ವಿವಾಹ, ವಿಚ್ಛೇದನ ಮುಂತಾದವುಗಳು) ಅನುಸರಿಸಬೇಕೆಂಬುದು ಖುರ್ ಆನ್ ಬೋಧನೆ. ಈ ದೇಶದ ಕ್ರಿಮಿನಲ್ ನಿಯಮಗಳನ್ನು ನಾವು ಅನುಸರಿಸಬಹುದಾದರೆ ಸಿವಿಲ್ ನಿಯಮಗಳನ್ನೂ ಅನುಸರಿಸಬಹುದಲ್ಲವಾ,ಶರಿಯತ್ತಿನಂತೆ ಕ್ರಿಮಿನಲ್ ನಿಯಮಗಳನ್ನು ನಾವು ಅನುಸರಿಸಬೇಕೆಂದರೆ ಕದ್ದವನ ಕೈ ಕಡಿಯಬೇಕಾಗುತ್ತದೆ. ವ್ಯಭಿಚಾರ ಮಾಡಿದವನನ್ನು ಸಾರ್ವಜನಿಕ ಸ್ಥಳದಲ್ಲಿ ಥಡಿ ಏಟು ಶಿಕ್ಷಿಸಬೇಕಾಗುತ್ತದೆ. ಇದರಿಂದ ಪುರುಷರ ಹೆಚ್ಚು ತೊಂದರೆಗೊಳಗಾಗಬಹುದು. ಹಾಗಾಗಿ ಸಿವಿಲ್ ನಿಯಮ ಶಕ್ತಿ ಗನುಸಾರವಾಗಿಯೂ ಕ್ರಿಮಿನಲ್ ನಿಯಮ ಈ ದೇಶದ ನಿಯಮಗಳಿಗನುಸಾರವಾಗಿಯೂ ಇರಲಿ ಎಂದು ಪುರುಷ ಪ್ರಧಾನ ಸಮಾಜತೀರ್ಮಾನಿಸಿತು!

ಇಲ್ಲಿನ ಪ್ರಸ್ತಾವಿಸಬೇಕಾಗಿರುವ ಮತ್ತೊಂದು ಅಂಶವಿರುವುದು ಸಾರಾ ಅವರ ಬರಹಗಳಲ್ಲಿರುವ ಸ್ತ್ರೀ ಸಂವೇದನೆಯ ನಿರ್ವಚನದಲ್ಲಿ ಆಧುನಿಕ ಭಾರತದ ಒಟ್ಟು ಸ್ಥಿತ್ಯಂತರಗಳು ಸ್ತ್ರೀ ಸಂವೇದನೆಯನ್ನು ರಚಿಸಿವೆ. ಸ್ತ್ರೀ ಸಂವೇದನೆಯೆಂದರೆ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಗತಿಗಳ ಉಪಜನ್ಯ ಸ್ವರೂಪ. ಸ್ತ್ರೀ ಸಂವೇದನೆಯೆಂದರೆ ಈ ರೀತಿಯ ಸಂದರ್ಭಗಳಲ್ಲಿ ಕೇವಲ ಭಾವನಾತ್ಮಕವಾದ ಪ್ರಕ್ರಿಯೆಯೆಂದು ನಾವು ಪರಿಗಣಿಸುವಂತಿಲ್ಲ. ಬೇರೊಂದು ರೀತಿಯಲ್ಲಿ ಹೇಳುವುದಿದ್ದರೆ ಸ್ತ್ರೀ ಸಂವೇದನೆಯು ಕೂಡಾ ಗಂಡಿನ ಸಂವೇದನೆಯಂತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ವರೂಪಗಳಿಂದ ಪರಿವರ್ತನೆ ಹೊಂದುತ್ತದೆ. ಈ ವಿಷಯದಲ್ಲಿ ಗಂಡಿಗೆ ಮತ್ತು ಹೆಣ್ಣಿಗೆ ವ್ಯತ್ಯಾಸವಿಲ್ಲ. ಆದರೆ ಭಿನ್ನತೆಯು ಬರುವುದು ಹೊಸ ಸನ್ನಿವೇಶಗಳನ್ನು ಹೆಣ್ಣು ಸ್ವೀಕರಿಸುವ ವಿಧಾನದಲ್ಲಿ, ಹೊಸ ಸಮಾಜದ ಬಗೆಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ, ಹೆಣ್ಣಿನ ದೃಷ್ಟಿಯಿಂದ ಹೊಸ ಸಮಾಜದ ಆಗಮನ ಮತ್ತು ಹಳೆಯ ಸಮಾಜದ ನಿರ್ಗಮನದ ದ್ವಂದ್ವವು ಪರಿಣಾಮಕಾರಿಯಾದ ಬಿಂಬವನ್ನು ಸೃಷ್ಟಿಸಿದೆ. ಆಧುನಿಕ ಕನ್ನಡ ಸಾಹಿತ್ಯದ ಹುಟ್ಟಿನ ಸಂದರ್ಭದಲ್ಲಿ ಬರೆದ ಬರಹಗಳನ್ನು ನೋಡಿದರೆ ಒಂದಂಶ ಸ್ಪಷ್ಟವಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಚರ್ಚೆಯ ಸಂದರ್ಭದಲ್ಲಿ ನಾವೆಲ್ಲ ಮುದ್ರಣ ಯಂತ್ರದ ಉಪಯೋಗದ ಕುರಿತು ಮಾತಾಡುತ್ತಲೇ ಬಂದಿದ್ದೇವೆ. ಮುದ್ರಣ ಸಂಸ್ಕೃತಿಯಲ್ಲಿ ಮಾಹಿತಿ ಮತ್ತು ಜ್ಞಾನ ಎರಡೂ ಸಂಗತಿಗಳು. ಒಂದು ಸಮೂದಿಸುವ ಪ್ರಕ್ರಿಯೆಗಳಿಗೆ ಗುರಿಯಾಗುತ್ತವೆ. ಜ್ಞಾನವೆಂಬುದನ್ನು ಅದು ಪಠ್ಯಗೊಳಿಸಿ ನೋಡುತ್ತದೆ. ಇದರಿಂದ 'ಮೌಖಿಕ'ವೆಂಬ ಸಂಪ್ರದಾಯವು ಒಂದು ಸಣ್ಣ ಆಘಾತಕ್ಕೆ ಒಳಗಾಗುತ್ತದೆ. ಮುದ್ರಣ ಸಂಸ್ಕೃತಿಯು ಸಾಹಿತ್ಯವನ್ನು ಕಮರ್ಷಿಯಲ್ ಜಗತ್ತಿನ ಭಾಗವಾಗಿ ನೋಡುವುದಷ್ಟೇ ಅಲ್ಲ. ಸಾಹಿತ್ಯವನ್ನು ಮಾರುಕಟ್ಟೆಯ ಕೇಂದ್ರಗಳಲ್ಲಿ ಮಾರಾಟ ಮಾಡುವ ಸಾಹಿತ್ಯವನ್ನು ಮಾರುಕಟ್ಟೆಯ

ಕೇಂದ್ರಗಳಲ್ಲಿ ಮಾರಾಟ ಮಾಡುವ ಸಾಮಾಗ್ರಿಯವನ್ನು ನೋಡುತ್ತದೆ. ಈ ರೀತಿಯ ಪ್ರಕ್ರಿಯೆಗಳು ಜರುಗುತ್ತಿರುವಾಗ ಭಾಷೆಯೂ ಮುದ್ರಣ ಸಂಸ್ಕೃತಿಯ ವ್ಯವಸ್ಥೆಗೆ ಬಾಗಬೇಕಾಗುತ್ತದೆ. ಇದರಿಂದಾಗಿ ಮುದ್ರಣ ಸಂಸ್ಕೃತಿಯಲ್ಲಿ ಹೆಣ್ಣಿನ ಭಾಷೆ ಮತ್ತು ಗಂಡಿನ ಭಾಷೆಯೆಂದು ಪ್ರತ್ಯೇಕ ಗುರುತಿಸಲು ಬರುತ್ತದೆಯೇ? ಭಾಷೆಯನ್ನು ಕೇವಲ ವ್ಯಾಕರಣಬದ್ಧ ರೂಪವೆಂದು ಕರೆದರೆ ಈ ಸಮಸ್ಯೆಗೆ ಬೇರೆ ನಿಲುವು ಇರುತ್ತದೆ. ಆದರೆ, ಭಾಷೆಯು ಸಾಹಿತ್ಯ ಕೃತಿಯಲ್ಲಿ ಅಂಟಿಕೊಂಡಿಲ್ಲವೆಂದು ನಾವು ಹೊರಟರೆ ಸರಿಯಾಗುತ್ತದೆ. ಸಾಹಿತ್ಯ ಕೃತಿಯೆಂಬ ಉತ್ಪಾದನೆಯು ಮುಖ್ಯವಾಗಿ ಸಾಂಸ್ಕೃತಿಕ ಆಗು-ಹೋಗುಗಳನ್ನು ದಾಖಲಿಸುತ್ತದೆಯೆಂದು ತಿಳಿದುಕೊಂಡರೆ ಸಂಸ್ಕೃತಿಯ ರೂಪಾಂತರಗಳ ಅರಿವು ನಮಗುಂಟಾಗುತ್ತದೆ.

ಗಂಗಾರವರು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತುಂಬಿದ ಕುಟುಂಬದಲ್ಲಿ ಹೊಟ್ಟೆಗೆ ಬಟ್ಟೆಗೆ ಕೊರತೆ ಇಲ್ಲದೆ ನೆಮ್ಮದಿಯಿಂದ ಬಾಳಬಹುದಾದಷ್ಟು ಸಂಪಾದನೆಯಷ್ಟೇ. ಇತ್ತು ಆಗಿನ ಕಾಲದಲ್ಲಿ ಮೇಲ್ವರ್ಗದ, ಮೇಲ್ಜಾತಿಯ ಹೆಣ್ಣು ಮಕ್ಕಳನ್ನು ಮಾತ್ರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿದ್ದಾರು. ಉಳಿದಂತೆ ಹೆಣ್ಣು ದೊಡ್ಡವಳಾದಳೆಂದರೆ ಮನೆಯಿಂದ ಹೊರಡುವುದು ಅವಳ ಮದುವೆಯ ದಿಬ್ಬಣದೊಂದಿಗೆ ಎಂದೇ ನಂಬಿಕೆ ಇತ್ತು. ಗಂಗಾರವರ ಮನೆಯ ಸ್ಥಿತಿ ಇದಕ್ಕಿಂತ ಹೊರತೇನೂ ಆಗಿರಲಿಲ್ಲ. ಕೇಶವ ಭಟ್ಟರು ತಮ್ಮ ಮಕ್ಕಳಿಗೆ ಆಗಿನ ಕಾಲದ ಸಂಪ್ರದಾಯದಂತೆ ಶಿಕ್ಷಣ ಕೊಡಿಸಿದ್ದರು. ಏಳನೆಯ ತರಗತಿಯವರೆಗೆ ಶಾಲೆಗೆ ಹೋದ ಗಂಗಾರವರು ಪಬ್ಲಿಕ್ ಪರೀಕ್ಷೆ ಆರಂಭವಾಗುವ ಐದನೇ ಋತುಮತಿಯಾಗಿ ಮನೆಯ ಹೊರಗಿನ ಜಗಲಿಯಲ್ಲಿ ಕುಳಿತುಕೊಳ್ಳಬೇಕಾದುದರಿಂದ ಶಿಕ್ಷಣವೂ ಅವರಿಂದ ಹೊರಗಾಯಿತು . ಆಗಿನ ಕಾಲದಲ್ಲಿ ಶಾಂತಿಗೆ ಸೇರಿಸುವಾಗಲೇ ಏಳೋ ಎಂಟೋ ವರ್ಷಗಳಾಗುತ್ತಿದ್ದವು. ಹದಿಮೂರು ಹದಿನಾಲ್ಕು ವರ್ಷಗಳಿಗೆ ಋತುಮತಿಯಾದರೆ ಅಲ್ಲಿಗೆ ಮನೆಯೇ ಗತಿಯಾಗುತ್ತಿತ್ತು.

ಶಾಲೆಯಲ್ಲಿ ಗಂಗಾರವರ ಓದನ್ನು ಮಟ್ಟವನ್ನು ತಟ್ಟಿದವರು ಸುನಂದಮ್ಮ ಟೀಚರ್ ಹಾಗೆಯೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದವರು ದೇವಪ್ಪಯ್ಯ ಮತ್ತು ಹೆಣ್ಣು ಮಕ್ಕಳು ವೇಷ ಹಾಕಿ ನಾಟಕ, ನೃತ್ಯ ಮಾಡುತ್ತಾ ವೇದಿಕೆಯೇರುವುದು ಆಗಿನ ಕಾಲಕ್ಕೆ ಅಪರಾಧ ಎನಿಸಿತ್ತು. ಶಾಲಾ ವಾರ್ಷಿಕೋತ್ಸವದಲ್ಲಿ "ಯಾರೆಲ್ಲ ಡಾನ್ಸ್ ಮಾಡುತ್ತೀರಿ?. ಎಂಬ ಶಿಕ್ಷಕರ ಪ್ರಶ್ನೆಗೆ. ಸಹಜ ಆಸೆಯಿಂದ ಬಾಲಕಿ ಗಂಗಾ ಕೈ ಎತ್ತಿದ್ದಳು. ಸಂಜೆ ಮನೆಗೆ ಬಂದು ಅದನ್ನು ಹೇಳಿದಾಗ" ಅದಲ್ಲ ಹೆಣ್ಣು ಮಕ್ಕಳಿಗೆ ಯಾಕೆ? ಎಂದು-ತಂದೆ-ತಾಯಿ ಇವರಿಂದಲೂ ವಿರೋಧ ವ್ಯಕ್ತವಾಯಿತು ಗಂಗಾರವರಿಗೆ ತಾನೇನು ಅಪರಾಧ ಮಾಡಿದ್ದೇನೆ. ಎಂದು ಗೊತ್ತೇ ಆಗಲಿಲ್ಲ. ಮರುದಿನ ಬೆಳಗ್ಗೆ ತಮ್ಮ ಮನೆಯ ಸಮೀಪದಲ್ಲೇ ಮನೆ ಮಾಡಿದ್ದ ದೇವಪ್ಪಯ್ಯ ಮಾಸ್ತರ್ ಅವರ ಮನೆಗೆ ಹೋದ ಕೇಶವ ಭಟ್ಟರು ನೃತ್ಯದಿಂದ ತಮ್ಮ ಮಗಳ ಹೆಸರನ್ನು ತೆಗೆದು ಹಾಕುವಂತೆ ವಿನಂತಿಸಿದರು. ಅದರೆ ಮಕ್ಕಳ ಮನಸ್ಸನ್ನು ನೋಯಿಸಬಾರದು ಅವರು ಡಾನ್ಸ್ ಮಾಡಿದರೆ ತಪ್ಪೇನೂ ಇಲ್ಲ. ಎಂದು ಮಾಸ್ತರ್ ತಂದೆಯನ್ನು ಒಪ್ಪಿಸಿದ್ದರು. ಗಂಗಾರವರು ಶಾಲಾ ವಾರ್ಷಿಕೋತ್ಸವದಲ್ಲಿ ತಂದೆಯನ್ನು ಒಪ್ಪಿಸಿದರು ಗಂಗಾರವರು ವಾರ್ಷಿಕೋತ್ಸವದಲ್ಲಿ ಮಾತ್ರವಲ್ಲ ತಮ್ಮ ಈ ವರೆಗಿನ ಬದುಕಿನಲ್ಲಿ ಮಾಡಿದ ಏಕೈಕ ಡಾನ್ಸ್ ಆದಾಗಿದೆ.

ಗಂಗಾರವರು ಶಾಲೆಯ ದಿನಗಳು ಬಹಳ ಸುಂದರವಾಗಿದ್ದವು ಅಣ್ಣಂದಿರು ಅದೇ ಶಾಲೆಗೆ ಹೋಗುತ್ತಿದ್ದರಾದರೂ ತಂಗಿಯನ್ನು ತಮ್ಮೊಂದಿಗೆ ಕರೆದೊಯ್ದರೆ ಸ್ನೇಹಿತರ ಡೋಂಗಿಗೆ ಸಿಗಬೇಕಾಗುತ್ತದೆ. ಎಂದು ಬಿಟ್ಟೇ ಹೋಗುತ್ತಿದ್ದರು. ಶಾಲೆ ಬಿಟ್ಟ ಬಳಿಕ ಗಂಗಾರ ಮನೆಯಲ್ಲಿ ಓದುವುದು ಮಾತ್ರ ಕೆಲಸ ತಂದೆ ಕೇಶವಭಟ್ಟರು ಓದುವ ಆಸಕ್ತಿ ಇದ್ದವರು. ಅಲ್ಲಿ ಕೃಷ್ಣ ಭಟ್ಟರು ಪುಸ್ತಕಗಳನ್ನು ಮನೆಗೆ ತಂದುಕೊಡುತ್ತಿದ್ದರು. ಅಲ್ಲಿ ಕೃಷ್ಣ ಭಟ್ಟ ಆಗಲೇ ಬರೆಯುತ್ತಿದ್ದು ಅವರ ಒಂದು ಕಥಾಸಂಕಲನ ಪ್ರಕಟವಾಯಿತು. ಹೀಗೆ ಗಂಗಾರವರು ಓದುವ ಬರೆಯುವ ಬಳ ತುಡಿತವನ್ನು ಇನ್ನಷ್ಟು ಹೆಚ್ಚಿಸಿತು ಕನ್ನಡದ ಆಗಿನ ಹೆಸರಾಂತ ಬರಹಗಾರರಾದ ತ.ರಾ.ಸು. ಅವರು ಗಂಗಾಅವರ ಮನೆಗೆ ಬಂದಿದ್ದು ಇತರ ಓದನ್ನು ಮೆಚ್ಚಿಕೊಂಡಿದ್ದರು ಅಣ್ಣ ಕೃಷ್ಣಭಟ್ಟರು ಶಿವರಾಮ ಕಾರಂತರ ಬಾಲವಕ್ಕೆ ಆಗಾಗ್ಗ ಭೇಟಿ ನೀಡುತ್ತಿದ್ದರು . ತನ್ನೊಂದಿಗೆ ತಂಗಿಯನ್ನು ಕರೆದೊಯ್ಯುತ್ತಿದ್ದರು ಅವರಿಬ್ಬರೂ ಗಹನವಾದ ಚರ್ಚೆ ನಡೆಸುತ್ತಿದ್ದಾರೆ. ಗಂಗಾರನ್ನ ಮೂಲಕ ಪ್ರೇಕ್ಷಕಿಯಾಗಿ ಕಿವಿಗೊಡುತ್ತಿದ್ದರೂ ಈ ಮಧ್ಯೆ ಮನೆಯಲ್ಲೇ ಕುಳಿತು ಹಿಂದಿ ಭಾಷಾ ಕಲಿಕೆಗೆ ಸೇರಿದರು. ಆದರೆ ಅದು ಕೆಲವೇ ದಿನಗಳಲ್ಲಿ ತಾಯಿಗೆ ತಿಳಿದು "ಕೂಸಿಂಗೆ ಎಂತಗೆ ಅದು" ಎಂಬಲ್ಲಿಗೆ ನಿಂತು ಹೋಯಿತು. ಗಂಗಾರವರಿಗೆ ಕಲಿಯುವ ಹುಮ್ಮಸ್ಸು ಇದ್ದೀಗ ಅದು ಸಾಧ್ಯವಾಗದೇ ಎಲ್ಲ ಆಸೆಗಳನ್ನು ಒಬ್ಬ, 'ಹೆಣ್ಣು ಮಗಳು' ಎಂಬ ಕಾರಣಕ್ಕಾಗಿ ಮರೆಯಬೇಕಾಯಿತು"[೪]

ಹೀಗೆ ಪುತ್ತೂರಿನಲ್ಲಿ ಹುಟ್ಟಿ, ಪಾದೇಕಲ್ಲಿಗೆ ಪಯಣ ಬೆಳೆಸಿ, ಮತ್ತೆ ಬದುಕನ್ನರಸಿ ಪುತ್ತೂರಿಗೆ ಬಂದ ಗಂಗಾ ಅವರು ಇಂದು ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ. ಇಬ್ಬರು ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸಿ, ಮದುವೆ ಮಾಡಿದ್ದಾರೆ. ಹಿರಿಮಗಳು ಸವಿತಾ, ಅಳಿಯ, ಮೊಮ್ಮಕ್ಕಳೊಂದಿಗೆ ಮಂಗಳೂರಿನ ಮನೆಯಲ್ಲಿ ವಾಸವಾಗಿದ್ದಾರೆ. ಆದರೆ ಪಾದೇಕಲ್ಲಿನ ನಂಟುಬಿಡದೆ ಆಗಾಗ್ಗೆ ಅಲ್ಲೂ ಇದ್ದು ಬರುತ್ತಾರೆ. ಯಾಕೋ ಇತ್ತೀಚೆಗೆ ಬರವಣಿಗೆ ಸಾಧ್ಯವಾಗುತ್ತಿಲ್ಲ ಎಂಬ ಕೊರಗು ಅವರನ್ನು ಕಾಡುತ್ತಿದೆ.

"ಇಂದು ಗಂಗಾ ಪಾದೇಕಲ್ಲು ನಾಡಿನೆಲ್ಲಡೆ ಪರಿಚಿತ ಹೆಸರು. ಯಾವುದೇ ಸಭೆ ಸಮಾರಂಭಗಳಲ್ಲಿ ಸರಳವಾಗಿ ಮಾತನಾಡಬಲ್ಲ ಮಹಿಳೆ. ಸಾಹಿತ್ಯದ ಯಾವುದೇ ವರ್ಗವಾಗಲಿ, ಇಸಂಗಳಾಗಲಿ ಅವರನ್ನು ಬಾಧಿಸಿಲ್ಲ. ಸಾಹಿತ್ಯಜಗತ್ತಿಗೆ ಅಪ್ತವಾದ ಗುಂಪುಗಾರಿಕೆಯಿಂದ ದೂರ ಉಳಿದಿರುವ ಗಂಗಾಗೆ ಅವರ ಈ ಗುಣವೇ ಅನನ್ಯತೆಯನ್ನು, ಅಭಿಮಾನಿಗಳನ್ನು ಗಳಿಸಿಕೊಟ್ಟಿದೆ. ಅವರನ್ನು ಕಾಣುವಾಗೆಲ್ಲ ನವರಾತ್ರಿಯ ದಿನಗಳಲ್ಲಿ ನಿಷ್ಕಲ್ಮಷವಾದ ನೀರನ್ನು ತುಂಬಿಕೊಂಡು ಹರಿಯುವ ಹಳ್ಳಿಯ ತೊರೆಯ ನೆನಪಾಗುತ್ತದೆ. ಅಂಗಳದ ಕೊನೆಯಲ್ಲಿ ನೆಟ್ಟ ಆನಂದಪುಷ್ಪದ ಬಿಳುಪಿನ ಅನುಭವವಾಗುತ್ತದೆ"[೮]

ಮಾಲತಿಯವರು ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ಸಂಪೂರ್ಣವಾಗಿ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ. ಪತಿಜೊತೆ ಸತ್ ನೀಡಿದರು ಮಾಲತಿಯವರು, ಲೇಖಕಿಯವರು, ಲೇಖಕಿಯಾಗಿ ಅವರ ಬರವಣಿಗೆಗಳು ಕೇವಲ ಸ್ತ್ರೀ ಜಗತ್ತಿನ ಚಿತ್ರಣಕ್ಕಷ್ಟೇ ಸೀಮಿತಗೊಳ್ಳದೆ ಪುರುಷ ಪಾತ್ರಗಳನ್ನು ಪುರುಷ್ ಜಗತ್ತನ್ನೂ ದಕ್ಕಿಸಿಕೊಂಡಿವೆ. ಅವರ ಪ್ರಬುದ್ಧ ವೈಚಾರಿಕತೆಯ ಮನಸ್ಸಿಗೆ ಸ್ತ್ರೀತ್ವತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯತ್ಮಕ ಈ ಮೂರು ಸರ್ತಗಳನ್ನೂ ಗ್ರಹಿಸಲು ಸಾಧ್ಯವಾಗಿದೆ.

ದೈನಂದಿನ ಜಂಜಾಟಗಳ ನಡುವೆಯೂ ನಮ್ಮನ್ನು ಕಾಡುವ ಒಂಟಿತನ , ನೋಡಿತ್ತ ಕೀಳರಿಮೆಗಳನ್ನು ಗೆಲ್ಲುವ ಮಾರ್ಗಗಳನ್ನು ತಮ್ಮ ಕೃತಿಯಲ್ಲಿ ಸೂಚಿಸಿಟ್ಟಾರೆ. ಅಲ್ಲದೆ ಹೆಣ್ಣುತನ್ನು ಕುಟುಂಬದಲ್ಲಿ ಅವಳ ಹೊಳೆಗಾರಿಕೆ ಬಗ್ಗೆ ಕೆಲವು ಅಂಶಗಳನ್ನು ಒಳಗೊಂಡಿದೆ. ಹಾಗೆಯೇ ಗ್ರಾಮೀಣ–ನಗರ ಜೀವನ, ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ, ಆರೋಗ್ಯ, ಶಿಶುಪಾಲನೆ, ವೈಚಾರಿಕತೆ, ಉಳಿಲಾಯದ ಮಾರ್ಗಗಳಾಂತಹ ಬಹುಮುಖಿ ಆಸಕ್ತಿಗಳು ಮಾಲತಿಯವರ ಪ್ರಬುದ್ಧ ವ್ಯಕ್ತಿತ್ವ ಸಾಕ್ಷಿ"[6]

ಪದ್ಮಾರವರ ಅಸಹಾಯಕಗಳಾದರೆ ಸಮಾಜ ಅವಳನ್ನು ಯವ ರೀತಿ ಶೋಷಿಸುತ್ತದೆ. ಎಂಬ ಸತ್ಯವನ್ನು ಕಣ್ಣಾರೆ ನೋಡಿ ಅನುಭವಿಸಿದರು. ಪತಿಯ ವ್ಯಾಪಾರ ವಹಿವಾಟು ಗಳನ್ನು ಏಕಾಂಗಿಯಾಗಿ ನಿರ್ವಹಿಸಬೇಕಾದ ಪ್ರಸಂಗಗದಲ್ಲಿ ಅವರಿಗೆ ಆಸರೆಯಾಗಿ ಒದಗಿದ್ದು ಹೆತ್ತ ತಂದೆಯ ಪ್ರೋತ್ಸಾಹದ ನುಡಿಗಳು ಹಾಗೂ ಅಪ್ತವರ್ಗದ ಸಹಾಯ ಹಸ್ತಗಳು.

ತಮ್ಮ ಬಹುತೇಕ ಕೃತಿಗಳಲ್ಲಿ ಆಧುನಿಕ ಮನೋಭಾವಾಕ್ಕೆ ಪರವಾದ ಧೋರಣೆಯನ್ನು ಲೇಖಕಿ ವ್ಯಕ್ತಪಡಿಸುವರಾದರೂ ಸಂಪ್ರದಾಯ, ಆಚರಣೆಗಳಿಗೆ ಸಂಸ್ಕೃತಿ ಕುರಿತಾದ ವಿಚಾರಗಳಿಗೆ ಅವರ ಅದ್ಯತೆ ಸಲ್ಲುತ್ತಿರುವುದನ್ನು ಗಮನಿಸಬಹುದು. ಮನುಷ್ಯ ಸಂಬಂಧಗಳಲ್ಲಿ ಪರಸ್ಪರ . ಪ್ರೀತಿ, ಗೌರವ, ವಿಶ್ವಾಸಗಳಿರುವುದು ಸಾಮಾಜ ಸಾಕ್ಷಿ ಅತ್ಯಾಗತ್ಯವನ್ನುವ ಧೋರಣೆಗಳಿರುವುದು"[10]

ಸಾಬಿಹಾರವರು ಸಮಾಜದ ಹಾಗೆ ಮನೆ–ಸ್ತ್ರೀ ಪುರುಷರನ್ನು ಒಳಗೊಂಡ. ಪುಟ್ಟ ಘಟಕ. ಕೆಲವು ಮನೆಯಲ್ಲಿ ಒಂದೊಂದು ಗುಂಪಿನ ಹಾಜರಿ. ಗೈರು ಹಾಜರಿಯು ಇನ್ನೊಂದು ಗುಂಪಿನ ಧ್ವನಿಯ ಏರಿಳಿತ ಬದಲಾಗಬಹುದು . ಮಾತಿನ ವಿಷಯ ಬದಲಾಗಬಹುದು. ಇಂತಹ ಹತ್ತು ಹಲವು ತರಗಳನ್ನು ಅರಿತೂ ಯಾರು ಯಾರನ್ನು ಪ್ರಶ್ನಿಸದೆ ಒಪ್ಪಿಕೊಂಡು ಮನೆಯೆಂಬ ಘಟಕದಲ್ಲಿ ಇರುವುದು. ಮನೆಯ ಮುಂಭಾಗ ವಿಶೇಷವಾಗಿ ಪುರುಷ ಜಗತ್ತು ಮನೆಯ ಹಿಂಭಾಗದಲಿ ಅಡುಗೆ ಮನೆ, ಹೀಗಾಗಿ ಮಹಿಳೆಯರದು ಅ ಜಗತ್ತು ಇವರಿಬ್ಬರೂ ಒಟ್ಟು ಕಲೆಯುವ, ಮಾತಾನಾಡುವ, ಸಂಭ್ರಮಿಸುವ ವಿಚಾರ ವಿನಿಮಯ ಮಾಡಿಕೊಳ್ಳುವ ಜಾಗ ಇದಲ್ಲಿ ಅವರ ನಡುಮನೆ ಅದು ಮೂಲೆ ಕೂತಾಗ ಅಗಿರಬಹುದು. ಯಾವುದೇ ವಿಚಾರದ ತೀರ್ಮಾನದ ಸಂದರ್ಭ ಇರಬಹುದು. ಯಾರದೋ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಇರಬಹುದು"[11] ಮಹಿಳಾ ಗುಂಪುಗಳು ತಲ್ಲಾಖ್ ಪ್ರಕ್ರಿಯೆಯ ಅನ್ವಯ ಕತೆ ಲೋಪ ದೋಷಗಳನ್ನು ಗಟ್ಟಿಧ್ವನಿಯಳ್ಳ ಪ್ರತಿಭಟಿಸುತ್ತವೆ.

ಒಟ್ಟು ಹನ್ನೆರಡು ಕಥೆಗಳನ್ನು ಒಳಗೊಂಡಿರುವ ಈ ಸಂಕಲನವು ಕುಟುಂಬ, ಅದರಲ್ಲಿನ ಸಂಬಂಧಗಳು, ಹದಿಹರಯದ ಮಕ್ಕಳ ವಿಷಯದಲ್ಲಿ ಹಾದಿತಪ್ಪುವ, ಎಡಹುವ ಹೆತ್ತವರು, ಮೇಲ್ನೋಟಕ್ಕೆ ಸಂಪೂರ್ಣ ಕೆಟ್ಟುಹೋದಂತೆ ಕಾಣಿಸುವ ಸಂಬಂಧಗಳು ಹೊಸತನದೊಂದಿಗೆ ಪುಡಿದು, ಚಿಗುರುವ ಪರಿ ಅಚ್ಚರಿ ತರುವಂಥದ್ದು. ಮಾನವ ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳಬೇಕಾದ ಅಪೂರ್ವವಾದ

ನಿರ್ಲಿಪ್ತತೆಯನ್ನು 'ತಿರುವು', 'ರಕ್ಷಣೆ'ಯಂಥ ಕೆಲವು ಕತೆಗಳು ಹೇಳಿದರೆ, ಸಕಲ ಜೀವರಾಶಿಗಳ ಮೇಲೆ ಬೆಳೆಸಿಕೊಳ್ಳಬೇಕಾದ ಪ್ರೀತಿಯ ಅವಶ್ಯಕತೆಯನ್ನು 'ಮುದಿನಾಯಿ' ಮತ್ತು 'ಮನೆಮಗಳು' ಕತೆಗಳು ಸಾರುತ್ತವೆ. ಮುಂಬೈ ಬದುಕಿನ ಯಾಂತ್ರಿಕತೆಯು ಮಾನವತೆಯನ್ನು ಮುಸುಕುಗೊಳಿಸುತ್ತ ಸಾಗಿದ, ಸಂಬಂಧಗಳನ್ನು ಗುರುತಿಸಲಾಗದ ಸ್ಥಿತಿಗೆ ತಳ್ಳಿದ ಪರಿ 'ಅವನು ಮತ್ತು ಮಗ' ಹಾಗೂ 'ಹೊಣೆ' ಕತೆಗಳ ವಸ್ತುವಾಗಿದೆ. ಮನುಷ್ಯನ ವ್ಯಕ್ತಿತ್ವದ ಬಾಹ್ಯರೂಪ ಸಮಾಜವನ್ನು ಪ್ರಭಾವಿಸುವುದನ್ನು ತಿಳಿಸುವುದಕ್ಕೆ ' ಮಾನ ತೆಗೆದ ಉಡುಪು' ಹಾಗೂ 'ಅವನು ಮತ್ತು ಮಗು ಕತೆಗಳು ಬಳಕೆಯಾಗಿವೆ. ಸಂಬಂಧಗಳನ್ನು ಮೀರಿ ಬೆಳೆಯಬೇಕಾದ ಮಾನವ ಪ್ರೇಮ, ಹದಿಹರೆಯದ ಯುವಕ ಯುವಶಕ್ತಿ ಕುರಿತ ಕತೆಗಾರ್ತಿಯ ಕಾಳಜಿ 'ವಸಂತದ ಹೂವುಗಳು', 'ರಕ್ಷಣೆ', 'ತಿರುವು'–ಈ ಕತೆಗಳಲ್ಲಿ ವ್ಯಕ್ತವಾಗುತ್ತದೆ.

ಸಬಿಹಾ ವೈವಾಹಿಕ ಬದುಕಿನಲ್ಲೂ ಅವರು ಮಾಡಿದ ಕ್ರಾಂತಿ ಸಾಮಾನ್ಯವಾದುದೇನಲ್ಲ. ಸಹಪಾಠಿಗೆಳೆಯ ಭೂಮಿಗಾಡ ಅವರನ್ನು ಬಾಳಸಂಗಾತಿಯಾಗಿ ಸ್ವೀಕಾರ ಮಾಡಿಕೊಳ್ಳುವ ಮೂಲಕ ಅಂತರ್ ಧರ್ಮೀಯ ವಿವಾಹ ಬಂಧನವನ್ನು ಆಯ್ಕೆ ಮಾಡಿಕೊಂಡರು. ಭೂಮಿಗಾರ ನೇರ, ನಿರ್ಭಿಡೆಯ ವ್ಯಕ್ತಿತ್ವ ಅವರನ್ನು ಸಹಿತವಾಗಿ ಆಕರ್ಷಿಸಿತ್ತು. ಭೂಮಿಗಾಡರ ಸಾಹಿತ್ಯ ಸಂಗತಿಗಳ ಬಗಗೆ ಪ್ರಗತಿಪರ ವಿಚಾರವಾದಿ ಧೋರಣೆಯ ಮನೋ ವೃತ್ತಿವುಳ್ಳವರು. ಒಂದರ್ಥದಲ್ಲಿ ಸಬಿಹಾ ಅವರ ಬರಹ ಬದುಕಿಗೆ ಪ್ರೇರಣೆಯಾಗಿದೆ. ಅವರ ಸಾಹಿತ್ಯ ಸಾಧನೆ, ವೈವಿಧ್ಯಮಯ ಕ್ಷೇತ್ರಗಳನ್ನು ಒಳಗೊಂಡು ಹೆಚ್ಚು ವಿಸ್ತೃತ ಆಯಾಮತನ್ನು ಪಡೆದುಕೊಳ್ಳುತ್ತಿದ. ಸಾಹಿತ್ಯವಿಮರ್ಶೆ, ಸ್ತ್ರೀವಾದಿ ಅಧ್ಯಯನ, ಭಾಷಾ ವಿಜ್ಞಾನ, ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಥೆ, ಪ್ರಬಂಧ, ಸಂಪಾದನೆ, ಸಂಕಲನ, ಸಂಶೋಧನೆ, ಅವರ ಆಸಕ್ತ ಕ್ಷೇತ್ರಗಳಲ್ಲಿ , ದ.ಕ. ಮಹಿಳೆಯರ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡುವ ಮೂಲಕ ಅಲ್ಲಿಯ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಸಬೀಹಾ ಅವರು ನೀಡಿದ ಕೊಡುಗೆ ಅಪೂರ್ವವಾದದ್ದು. ಕನ್ನಡ ಹಿರಿಯ ಲೇಖಿಕಿ ಸಾರಾ ಅಬೂಬಕ್ಕರ್ ಅವರ ಅಭಿನಂದನ ಗ್ರಂಥದ ಸಂಪಾದಕಿಯೂ ಆಗಿದ್ದಾರೆ.

ಟಿಪ್ಪಣಿಗಳು–೪

೧. ಸಾರಾರವರ ಧರ್ಮ ಭಾಷೆ ಶೈಲಿ ಬಗ್ಗೆ – ಚಂದ್ರಗಿರಿತೀರದಲ್ಲಿ ಪುಟ–೨೨೦–೨೨೧
೨. ಅದೇ ಪುಟ –೨೪೧
೩. ಅದೇ ಪುಟಸಂಖ್ಯೆ–೨೪೩
೪. ಪುಟ ಸಂಖ್ಯೆ–೨೪೫
೫. ಅದೇ ಪುಟ –೨೪೭
೬. ಅದೇ ಪುಟ –೨೪೪
೭. ಅದೇ ಪುಟ ಸಂಖ್ಯೆ–೨೪೫
೮. ಗಂಗಾ ಪಾದೇಕಲ್ಲು ರವರು ಪ್ರಕಟಗೊಂಡ ಚಂದ್ರಗಿರಿತೀರದಲ್ಲಿ ಪುಟ ೩೩೪–೩೪೫.
೯. ಮಾಲತಿ ರವರ ಪ್ರಕಟಗೊಂಡ ಚಂದ್ರಗಿರಿತೀರದಲ್ಲಿ ಪುಟ –೨೯೫–೨೯೭
೧೦. ಪದ್ಮಾರವರು ಪ್ರಕಟಗಳು ಚಂದ್ರಗಿರಿತೀರದಲ್ಲಿ ಪುಟ ೨೫೮–೨೫೯
೧೧. ಸಬೀಹಾ ರವರು ನಡುಮನೆ ಪುಟ – ೧೧೯–೧೨೫.

ಅಧ್ಯಾಯ –೫

ಆಶಯ

ಅಧ್ಯಾಯ–೫

ಲೇಖಕಿಯರ ಆಶಯ

ಸಣ್ಣ ಕಥೆ ಓದು ಎಂದರೆ ಅದು ಓರ್ವ ವ್ಯಕ್ತಿ ಮತ್ತು ಅವರ ಬದುಕಿನೊಂದಿಗೆ ನಡೆಸುವ ಅನುಸಂಧಾನ, ಇತರರ ಹೋರಾಟದ ಬದುಕನ್ನು ಅರಿತಾಗ, ನಮಗೆ ನಾವು ಎದುರಿಸುವ ವರ್ತಮಾನದ ಕಷ್ಟಗಳು ಹತ್ತಿಯಂತೆ ಹಗುರವಾಗಿ ಕಾಣಬಹುದು. ನಮ್ಮ ಇಕ್ಕಟ್ಟುಗಳಿಂದ ಬಿಡುಗಡೆಹೊಂದಲು, ಒಳಕಿಂಡಿಗಳನ್ನು ತೆರೆಯಬಹುದು ಸಮಸ್ಯೆಗಳ ಸರ್ವಸಾಮಾನ್ಯತೆ ಮತ್ತು ಆಳ– ವಿಸ್ತಾರಗಳ ಅರಿವನ್ನು ನೀಡಬಹುದು. ಸಂಘಟನೆಯ ಅಗತ್ಯವನ್ನು ಮನವರಿಕೆ ಮಾಡಬಹುದು ಮತ್ತು ಇಂತಹ ಇನ್ನೂ ಅನೇಕ ಸಾಧ್ಯತೆಗಳನ್ನು ಮುಂದಿಡಬಹುದು ನಮ್ಮ ಲೋಕಾನುಭವ ಮತ್ತು ಲೋಕ ದೃಷ್ಟಿಯನ್ನು ವಿಸ್ತರಿಸುವ ಕೆಲಸದಲ್ಲಿ ಸಣ್ಣಕಥೆಗಳ ಓದು ಸಾಕಷ್ಟು ಫಲಪ್ರದ ಎನಿಸುತ್ತದೆ.

"ಲೇಖಕಿಯರ ಸಣ್ಣಕಥೆಗಳೂ ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶನವೂ ಆಗಬಹುದು ತಾವು ಕನಸುಕಂಡ ಒಂದು ಬದುಕನ್ನು ತಮ್ಮದಾಗಿಸಲು ಮಹಿಳೆಯರು ಎಷ್ಟು ಹೆಣಗಾಡುಬೇಕಾಗುತ್ತದೆ. ಎಷ್ಟೊಂದು ತ್ಯಾಗ ಮಾಡಬೇಕಾಗುತ್ತದೆ. ಅಥವಾ ಹಲವು ವಿಧದಲ್ಲಿ ಹೆಣಗಾಡಿದರೂ ತಮ್ಮ ಕನಸಿನ ಬದುಕು ಕೈಗೆಟುಕದಿರುವಾಗ ಮಹಿಳೆಯರ ಬದುಕು ಯಾವ ಹಾದಿ ಹಿಡಿಯಬಹುದು ಮುಂತಾದ ಹಲವಾರು ವಿಷಯಗಳ ಕುರಿತು ಪ್ರಾಮಾಣಿಕವಾಗಿ ಬರೆದರೆ ಅದು ಮಹಿಳಾ ಲೋಕಕ್ಕೆ ಒಂದು ಉತ್ತಮ ಆಸ್ತಿಯಾಗಬಹುದು ವಿದ್ಯಾವಂತ ವಿದೇಶದಲ್ಲಿ ಉದ್ಯೋಗಸ್ಥನಾದ ಪತಿಯ ಸಂಶಯಕ್ಕೆ ಗುರಿಯಾಗಿ ಆತನಿಂದ ಪರಿತ್ಯಕ್ತಳಾಗಿ, ನೋವು ಅಪಮಾನಗಳನ್ನು ಅನುಭವಿಸಿದರೂ ಛಲದಿಂದ ತನ್ನ ಬದುಕನ್ನು ಸೇರ್ಪಡಿಸಿಕೊಂಡ ಹೆಣ್ಣೊಬ್ಬಳ ದಿಟ್ಟತನದ ಕಥೆಯಾಗಿದೆ"[1]

ಬರವಣಿಗೆ ಅನ್ನುವುದು ಯಾವತ್ತು ಹೆಣ್ಣುಮಕ್ಕಳಿಗೆ ಎರಡನೆಯ ಆದ್ಯತೆ ಮೊದಲನೆಯದು ಕುಟುಂಬ– ಅವರ ಸುಖ. ಶಾಂತಿ, ನೆಮ್ಮದಿ ಸ್ವಂತದೇನಿದ್ದರೂ ಆಮೇಲೆ. ಬರವಣಿಗೆ ತಂದುಕೊಡುವ ಆತ್ಮ ಸಮ್ಮಾನ ಪ್ರತಿಷ್ಠೆ. ನೆಮ್ಮದಿ, ಸಂತೋಷ. ಅಷ್ಟಷ್ಟು ಆರ್ಥಿಕ ಸೌಲಭ್ಯಗಳ ಹಿಂದೆ ಎಲ್ಲಾ ಅಡೆತಡೆಗಳನ್ನು ಮೀರಿ ಬರೆಯಬೇಕೆಂಬ ಒತ್ತಡ ಒಳತುಡಿತಗಳು ಎಷ್ಟರ ಮಟ್ಟಿಗೆ ಪ್ರಬಲವಾಗಿರುತ್ತದೆ. ಅನ್ನುವುದರ ಮೇಲೆ ಲೇಖಕಿಯೊಬ್ಬಳ ಬರವಣಿಗೆ ಸಾಗಿದೆ ಮತ್ತು ಸಾಗುತ್ತಿದೆ. ಮಹಿಳೆಯರ ಜೀವನದ ಅನುಭವಗಳು ಆ ಅನುಭವಗಳನ್ನು ಅವರು ವ್ಯಕ್ತಪಡಿಸುವ ಕ್ರಮ. ಸಮಸ್ಯೆಗಳಿಗೆ ಅವರು ಸ್ಪಂದಿಸುವ ಪರಿ. ಅವರ ವಿಚಾರ ಧಾಟಿ ಇವೆಲ್ಲಾ ಪುರುಷರಿಗಿಂತ ವಿಭಿನ್ನ ವಿಶಿಷ್ಟ ಲೇಖಕಿಯೊಬ್ಬಳು ಸಣ್ಣಕತೆಬರೆದರೆ ಅದು ಸಾಹಿತ್ಯಲೋಕಕ್ಕೆ ಒಂದು ಅಪೂರ್ವ ಕೊಡುಗೆಯಾಗಿ, ಮಹಿಳಾ ಸಂವೇದನೆಯ ದಾಖಲೆಯಾಗುವುದರಲ್ಲ ಸಂದೇಹವೇನಿಲ್ಲ ನಿರ್ಭಿಡೆಯಿಂದ ನಿಸ್ಸಂಕೋಚದಿಂದ ಎಲ್ಲವನ್ನು ಹೇಳಿಕೊಳ್ಳುವ ವಾತಿ ಅವಳಿಗೆ ಬಂದೀತೇ ಎನ್ನುವುದು ಕಾಲಕ್ಕೆ ಬಿಟ್ಟ ವಿಚಾರ. ಬದಲಾಗುತ್ತಿರುವ ಕಾಲದ ಮುನ್ಸೂಚನೆಯಿಂದ ದಾಖಲಾಗಿರುವ ಕೆಲ ಲೇಖಕಿಯರ ಸಣ್ಣಕಥೆಗಳು ಸ್ಫೂರ್ತಿಯಾಗುತ್ತವೆ.

ಸಣ್ಣ ಕಥೆ ಎಂಬುದು ಲೇಖಕಿಯು ಹಲವಾರು ಧರ್ಮ, ಜಾತಿ ಹಾಗೂ ಬುಡಕಟ್ಟುಗಳ ಆಚರಣೆ ಮತ್ತು ನಂಬಿಕೆಗಳ ನೆಲೆ ಬಿನ್ನವಾಗುವುದರಿಂದ ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆ ವಿಭಿನ್ನ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಅಥವಾ, ವಿವಾಹ ಕೇಶಮುಂಡನದಂತಹ ಆಚರಣೆ ಭಾರತದ ಎಲ್ಲ ಮಹಿಳೆಯರ ಸಮಸ್ಯೆಗಳೆಂದು. ಎತ್ತಿಹಿಡಿಯಲು ಬರುವುದಿಲ್ಲ. ಇಂತಹ ಸಾರ್ವತ್ರೀಕರಣದಿಂದಾಗಿ ಮಹಿಳೆಯರಿಗೆ ಸಂಬಂಧಿಸಿದ ಹಲವಾರು ರೀತಿ ರಿವಾಜಲಗಳು, ಅವುಗಳಿಂದ ಸ್ತ್ರೀಯರ ಮೇಲೆ ನಡೆಯುವ ಶೋಷಣೆಗಳು ಹಿನ್ನತಿಗೆ ಸರಿದು, ಗಮನಕ್ಕೆ ಬಾರದೇ ಹೋಗುವ ಸಾಧ್ಯತೆ ಹೆಚ್ಚು. ಇದರಿಂದಾಗಿ ಸಾರಾ ಅವರು ಕತೆಯಾಲ್ಲಿ ಮುಸ್ಲಿಂ ಮಹಿಳೆಯರ ವಿಚಾರ ಬಂದಾಗ ಅವರ ಸಮಸ್ಯೆಗಳ ನೆಲೆ ತಲಾಖ್ ಎಂಬ ಮೂರಕ್ಷರಗಳಲ್ಲಿ ಹಾಗೆಯೇ ಬಹುಪತ್ನಿತ್ವದಲ್ಲಿ ಹೇಗೆ ಅಡಗಿದೆ ಎಂಬುದನ್ನು ಸಾರಾಅವರು ತಮ್ಮ ಬರವಣಿಗೆಯಲ್ಲಿ ತೋರಿಸಿಕೊಟ್ಟಿದ್ದಾರೆ.

ಸ್ತ್ರೀಗಿರುವಷ್ಟು ಕಟ್ಟುಪಾಡುಗಳಲ್ಲಿದಿರುವ ಪುರುಷರು ಈ ರೀತಿಯಲ್ಲಿ ಸಣ್ಣಕಥೆಗಳನ್ನು ಬರೆದರೆ ಓದುಗರು ಮೆಚ್ಚಿಕೊಳ್ಳುತ್ತಾರೆ. ಮತ್ತು ಅಂಥವರನ್ನು ಮಹಾತ್ಮರೆಂದು ಕರೆಯುತ್ತಾರೆ. ಆದರ ಓರ್ವ ಸ್ತ್ರೀ ಸತ್ಯ ಹೇಳಿದಾಗ ಜಗತ್ತು ಬೆಚ್ಚಿ ಬೀಳುತ್ತದೆ. ಆಕೆಯ ಹಿಂದಿನಿಂದ ಗೇಲಿ ಮಾಡುತ್ತ ಮುಂದಿನಿಂದ ಚುಚ್ಚಿ ಮಾತಾನಾಡುತ ಆಕೆಯನ್ನು ಮಾನಸಿಕವಾಗಿ ಹಿಂಸಿಸುತ್ತದೆ. ಮತ್ತು ಆಕೆಗೆ ಬಹಿಷ್ಕಾರ ಹಾಕುತ್ತದೆ. ಆದ್ದರಿಂದ ತನ್ನ ಸಣ್ಣಕತೆಯನ್ನು ಬರೆಯುವಾಗ ಪ್ರತಿಯೊಬ್ಬ ಲೇಖಕಿಯು ತಾನು ಬಳಸುವ ಪ್ರತಿ ಅಕ್ಷರದ ಬಗ್ಗೆಯೂ ಅದರ ಪರಿಣಾಮವನ್ನು ಊಹಿಸಿಕೊಂಡು ಎಚ್ಚರದಿಂದ ಬರೆಯ ಬೇಕಾಗುತ್ತದೆ . ಭಾರತೀಯಾ ಭಾಷೆಗಳಲ್ಲಿ ಅನೇಕ ಲೇಖಕಿಯರು. ಈ ಎಲ್ಲ ಕಷ್ಟ- ನಿಷ್ಟುರಗಳ ನಡುವೆಯೂ ತಮ್ಮ ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳಿಗೆ. ದಾರಿ ದೀಪವಾಗಬಹುದಾದಂತಹ ಸಣ್ಣಕಥೆಗಳನ್ನು ಪ್ರಕಟಿಸಿರುವುದು ಆ ಹೆಮ್ಮೆ ಪಡಬೇಕಾದ ವಿಚಾರ.

ಸಮಾಜದ ರಾಜಕೀಯ ಆರ್ಥಿಕ ಪ್ರಕ್ರಿಯೆಗಳ ಪರಿಣಾಮಗಳು ಕೂಡ ಸಣ್ಣಕಥೆಗಳ ಬರವಣಿಗೆಯ ಹಿಂದೆ ಒತ್ತಾಸೆಯಾಗಿ ಕೆಲಸಮಾಡಿದ ಹಲವಾರು ಬೇರೆ ಕೃತಿಗಳನ್ನು ಪ್ರಕಟಿಸಿ ಲೇಖಕರು ಅವುಗಳಲ್ಲಿ ತಾವು ಹೇಳಬೇಕಾದದುದ್ದನ್ನು ಹೇಳಿರುತ್ತಾರೆ. ಆದರೆ ಅದು ಸಾಲದೆಂಬಂತೆ ಅಥವಾ ಸಣ್ಣಕಥೆಗಳ ಮೂಲಕ ಮತ್ಯಾವುದೋ ಹೇಳಬೇಕಾದುದು ಇದೆ ಎಂಬಂತೆ ಸಣ್ಣಕಥೆಯನ್ನು ಬರೆದಿರುತ್ತಾರೆ. ಅದ್ದರಿಂದ ಸಣ್ಣಕಥೆಗಳ ಹಿಂದೆ ಲೇಖಕರ ಮಹತ್ವದ ಆಶಯವೊಂದು ಇದ್ದೇ ಇರುತ್ತದೆ.

ಸಣ್ಣ ಕಥೆಗಳಲ್ಲಿ ಕೇವಲ ಸಣ್ಣಕಥೆಗಾರ್ತಿಯ ಜೀವನ ವಿವರಗಳು ಮಾತ್ರ ಇರುವುದಿಲ್ಲ ಒಂದು ವೇಳೆ ಕೇವಲ ಜೀವಂತ ವಿವರಗಳೇ ಸಣ್ಣಕಥೆಗಳು ಎನ್ನುವುದಾದರೆ ಅದಕ್ಕೆ ಕೇವಲ ಹತ್ತಾರು ಪುಟಗಳು ಮಾತ್ರವೇ ಸಾಕಾದೀತು ಆದರೆ ಬಹುತೇಕ ಸಣ್ಣಕಥೆಗಳು ನೂರಾರು ಪುಟಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಜೀವನ ವಿವರಗಳೂ ನೂರಾರು ಪುಟಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಜೀವನ ವಿವರಗಳೂ ಇರುತ್ತವೆ. ಪ್ರಾಯಶಃ ಯಾವ ಸಂಗತಿಗಳನ್ನು ತನ್ನ ಇತರೆ ಸಾಹಿತ್ಯ ಕೃತಿಗಳ ಮೂಲಕ ಪ್ರಕಟಿಸಲು ಆಗಿರುವುದಿಲ್ಲವೋ ಅಂತಹವುಗಳನ್ನು ಪ್ರಕಟಿಸಲು ಸಣ್ಣಕಥೆಗಳು ಹುಟ್ಟುಕೊಳ್ಳುತ್ತದೆ.

"ಸಣ್ಣಕಥೆಗಳನ್ನು ಪ್ರಧಾನವಾಗಿ ಸಾಹಿತಿಗಳು ಬರೆದಿದ್ದಾರೆ. ಉಳಿದಂತೆ ಹೋರಾಟಗಾರರು ಮಠಾಧೀಶರು, ರಾಜಕಾರಣಿಗಳು, ಸಾಮಾನ್ಯ ಶಿಕ್ಷಕ, ಹತ್ತು ವರ್ಷ ಆಸ್ಪತ್ರೆಯಲ್ಲೇ ಕಳೆದ ಅಂಗವಿಕಲ, ಪೋಲಿಸ್ ಅಧಿಕಾರಿ, ಒಬ್ಬ ನಿವೃತ್ತ ಅಂಚೆ ಪೇದೆಯವರಿಗೂ ಬರೆದಿದ್ದಾರೆ. ಇವರೆಲ್ಲರೂ ಸಮಾಜದ ವಿಭಿನ್ನ ವರ್ಗದವರು ಮತ್ತು ವಿಭಿನ್ನ ಮನೋಧರ್ಮದವರು. ಈ ಹಿಂದಿನ ದಶಕಗಳಿಗೆ ಹೋಲಿಸಿದರೆ ನಿರ್ದಿಷ್ಟವಾಗಿ ಈ ೯೦ರ ದಶಕದಲ್ಲಿ ಸಣ್ಣಕಥೆಗಳು ಹೆಚ್ಚು ಬಂದಿದೆ. ಈ ಅಂಶವೂ ಸಣ್ಣಕಥೆಗಳ ಬಗ್ಗೆ ಕುತೂಹಲ ಮತ್ತು ಆಸಕ್ತಿಯನ್ನು ಹೆಚ್ಚಿಸುತ್ತದೆ. ಈ ಎಲ್ಲಾ ಬರವಣಿಗೆಗಳಲ್ಲಿ ಎದ್ದು ಕಾಣುವ ಒಂದು ಸಾಮಾನ್ಯ ಅಂಶವೆಂದರೆ ಬರವಣಿಗೆಯಲ್ಲಿ ದಾಖಲಾಗಬೇಕೆಂಬ ಒಂದುಬಗೆಯ ಚಿತ್ರವಾದ ತಹ ತಹ ಸಣ್ಣಕಥೆಗಳು ಮಾಹಿತಿಯ ದೃಷ್ಟಿಯಿಂದ ಬರೆದವರ ವೈಯಕ್ತಿಕ ಚರಿತ್ರೆಗಳು ಆದರೆ ಇದು ಇಲ್ಲಿಗೆ ನಿಲ್ಲದೆ ನಿರೂಪಣೆಯ ಸೈದ್ಧಾಂತಿಕ ಕ್ರಮದಿಂದಾಗಿ ಅವು ಸಾಮಾಜಿಕ ಚರಿತ್ರೆಯ ಭಾಗಗಳೂ ಹೌದು ತನ್ನ ಜೀವನದ ವಿವರಗಳು ತನ್ನ ಬರವಣಿಗೆಯ ಮೂಲಕವೇ ದಾಖಲಾಗಬೇಕು ಎಂಬ ಹಂಬಲ ಕೇವಲ ವೈಯಕ್ತಿಕ ತುಡಿತದಂತ ಕಂಡರೂ ಅದರಾಚೆಗಿನ ಜಗತ್ತು ಇದನ್ನು ಪ್ರೇರೆಪಿಸುತ್ತದೆ.

ಈ ಹಿನ್ನಲೆಯಲ್ಲಿಕನ್ನಡದಲ್ಲಿ ರಚಿತವಾಗಿರುವ ಕೆಲವು ಮಹಿಳಾ ಸಣ್ಣಕಥೆಗಳನ್ನು ಅಧ್ಯಯನ ಮಾಡಿದಾಗ ಅವರ ಅಶಯವನ್ನು ಈ ಕೆಳಕಂಡಂತೆ ನೋಡಬಹುದು. ಪುರುಷ ಪ್ರಧಾನವ್ಯವಸ್ಥೆಯಲ್ಲಿ ಗಂಡಸರೇ. ಶ್ರೇಷ್ಠ ಎಂಬಂತೆ ಕಲ್ಪನೆಗಳಿರುವಾಗ ಹೆಣ್ಣು ತಾನು ಕೂಡ ಶ್ರೇಷ್ಠ ಎಂದು ಹೇಳಿಕೊಳ್ಳಲು ಅಪಾರ ಸಿದ್ಧತೆ ಮತ್ತು ಮನಸ್ಥೈರ್ಯ ಬೇಕು ಎನ್ನುವುದರ ಅರಿವಿದ್ದು ಬದುಕಿದವರು ಸಾರಾ ಅಬೂಬಕ್ಕರ್, ಗಂಗಾ ಪಾದೇಕಲ್ಲು, ಎ.ಪಿ. ಮಾಲತಿ ಪದ್ಮಾಶೆಣೈ, ಸಬೀಹಾರವರು ಗಂಡ ಹೆಣ್ಣುಮಕ್ಕಳನ್ನು ಅಸಮಾನ ನೆಲೆಯಲ್ಲೇ ಬೆಳೆಸುವ ಪರಿಸರದಲ್ಲಿ ಬೆಳೆದ ಈ ಲೇಖಕಿಯರು ಅವರಿಗೆ ಸಾಹಿತ್ಯದ ಮೇಲೆ ಅಪಾರ ಆಸಕ್ತಿಯಿತ್ತು.

ಕನ್ನಡದ ಮುಖ್ಯ ಲೇಖಕಿಯರಲ್ಲೊಬ್ಬರಾದ ಸಾರಾ ಅಬೂಬಕ್ಕರ್ ಅವರ ಕೃತಿಗಳಲ್ಲಿ ಅವರು ಸಮಾಜಮುಖಿ ಚಿಂತನೆ ನಡೆಸಿರುವುದರ ಕುರಿತು ಈಗಾಗಲೇ ಅವರ 'ನಿರುಕ್ತ ಕೃತಿಯ ಲೇಖನ ವೊಂದರಲ್ಲಿ ಪ್ರಕಟಿಸಿದರು.(೨೦೦೪)

ಕಳೆದ ಇಪ್ಪತ್ತೈದು ವರ್ಷಗಳಿಂದ ಬರೆಯುತ್ತಿರುವ ಸಾರಾ ಅವರಿಗೆ ಕೂತ್ಮಕ ಅಭಿವ್ಯಕ್ತಿ ಮುಖ್ಯವಲ್ಲ, ತನ್ನದೇ ಅಂತರಂಗದ ಅಭಿವ್ಯಕ್ತಿ ಅಥವಾ ಆತ್ಮನಿವೇದನೆಯೂ ಮುಖ್ಯವಲ್ಲ, ತಾವು ನೋಡಿದ ಅನುಭವಿಸಿದ , ಸಂಪ್ರದಾಯ , ನಂಬಿಕೆಗಳು ಧಾರ್ಮಿಕ ನಂಬಿಕೆಗಳ ಸಮಾಜದ ಲೋಪದೋಷಗಳು , ಅದರ ಪರಿಣಾಮದಿಂದ ನಿರಂತರ ನೋವು ಅನುಭವಿಸುತ್ತಿರುವ ಸ್ತ್ರೀ ಸಮುದಾಯ ಇವು ಲೇಖಕಿಯರನ್ನು ಕಾಡಿದ ಸಂಗತಿಗಳು, ಈ ಹಿನ್ನೆಲೆಯಲ್ಲೇ ಅವರ ಬಹುಚರ್ಚಿತ ಕೃತಿಗಳು ರೂಪಿತಗೊಂಡವು.

ಲೇಖನ ಗುಚ್ಛದಲ್ಲಿ ಸಾಹಿತ್ಯಧರ್ಮ ಹಾಗೂ ಸಮಾಜವಕ್ಕೆ ಸಂಬಂಧಿಸಿದ ಹಲವಾರು ಲೇಖನಗಳಿವೆ. ಮದುವೆಯಾಗಿ ಹನ್ನೆರಡು ವರ್ಷಗಳ ಅನಂತರ ಬುರ್ಕಾದಿಂದ ಹೊರಬಂದ ಲೇಖಕಿ ವೈಚಾರಿಕ ನಿಲುವುಗಳು ಅವರ ಲೇಖನದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಮುಸ್ಲಿಂ ಸಮಾಜದ ಮಹಿಳೆಯ ಶೋಷಣೆಯನ್ನು ತಮ್ಮ

ಸಣ್ಣಕಥೆಗಳಲ್ಲಿ ಚಿತ್ರಿಸಿದಾಗ ಧರ್ಮ ಮತ್ತು ಮಹಿಳೆ"೨ ಎಂಬ ಲೇಖನದಲ್ಲಿ ಅವರು "ಇಂದು ಕಾಲ ಬದಲಾಗಿದೆ. ೧೫೦೦ ವರ್ಷಗಳ ಹಿಂದಿನ ಸೌದಿ ಅರೇಬಿಯಾದ ಸಾಮಾಜಿಕ ಸ್ಥಿತಿಗತಿಗೂ ಭಾರತದ ಇಂದಿನ ಸಾಮಾಜಿಕ ಸ್ಥಿತಿಗತಿಗೂ ಬಹಳ ವ್ಯಾತ್ಯಾಸಗಳಿವೆ. ಕಾಲ, ದೇಶ, ಬದಲಾದಂತೆ, ವಿಜ್ಞಾನ ಪ್ರಗತಿ ಸಾಧಿಸಿದಂತೆ ಸಮಾಜದ ನಿಯಮಗಳಲ್ಲೂ ಬದಲಾವಣೆಗಳಾಗಲೇ ಬೇಕಾಗುತ್ತವೆ.

ನಮ್ಮ ಪುರುಷರು ಎಂದಾದರೂ ಬದಲಾವಣೆಗೆ ಮನ ಮಾಡುವರೇ? "ನಮ್ಮ ಮಹಿಳೆಯರೂ ಶೋಷಣೆಗಳಗಾಗಿದ್ದಾರೆ. ಅವರಿಗೂ ಸಮಸ್ಯೆಗಳಿವೆ. ಎಂದು ಈ ಜನರ ಒಪ್ಪಿಕೊಂಡರೇನೆ ಸಮಸ್ಯೆಗಳಿವೆ, ಎಂದು ಈ ಜನರು ಒಪ್ಪಿಕೊಂಡರೇನೆ ನಮ್ಮ ಮಹಿಳೆಯರ ಅರ್ಧ ಸಮಸ್ಯೆಗಳಿಗೆ ಪರಿಹಾರ ಹುಡುಕಿದಂತಾಗುತ್ತದೆ. ಲೇಖನಗಳ ಸಾರಾ ಅಬೂಬಕ್ಕರ್ ಅವರು ತಮ್ಮ ಗಂಡಂದಿರಿಂದ ತಲಾಖ್ ಪಡದ ಮುಸ್ಲಿಂ ಸ್ತ್ರೀಯರ ಅಸಹಾಯಕತೆಯನ್ನು ವಿವರಿಸಿದ್ದಾರೆ ಶಾಬಾನು ಪರವಾಗಿ ಸುಪ್ರೀಂ ಕೋರ್ಟು ತೀರ್ಪು ನೀಡಿದ ಅನಂತರ ಕೇಂದ್ರ ಸರಕಾರ ಜಾರಿಗೆ ತಂದ ಮುಸ್ಲಿಂ ಮಹಿಳಾ ಮಸೂದೆ ಹೆಣ್ಣಿನ ನೆತ್ತಿಯ ಮೇಲಿನ ಕತ್ತಿ ಎಂದು ಲೇಖಕಿ ವಾದಿಸುತ್ತಾರೆ ಸಮಾನ ನಾಗರಿಕ ಸಂಹಿತೆಗಿಂತಲೂ ಕುಟುಂಬ ಯೋಜನೆಗೆ ಹೆಚ್ಚು ಮಹತ್ವ ನೀಡಬೇಕು ಎಂಬ ಲೇಖಕಿಯ ಅಭಿಪ್ರಾಯ ವಿಜ್ಞಾಪಣೆಗೆ ಯೋಗ್ಯವಾಗಿದೆ "ಕುಟುಂಬ ಯೋಜನೆಯನ್ನು ಎರಡು ಮಕ್ಕಳಿಗೆ ಸೀಮಿತಗೊಳಿಸಿ ಕಡ್ಡಾಯ ಮಾಡಿ ಮುಸ್ಲಿಂ ಮಹಿಳೆಯರನ್ನು ದೊಡ್ಡ ಕುಟುಂಬದ ಹೊರೆಯಿಂದ ಪಾರುಮಾಡಿದರೆ ಅಂತರಂಗದಲ್ಲಾದರೂ ಅವರು ಸರಕಾರಕ್ಕೆ ಕೃತಜ್ಞರಾಗಿರುತ್ತಾರೆ" ಎನ್ನುತ್ತಾರೆ. ಸಾರಾರವರು.

'ಗುಚ್ಛ' ಶಬ್ಧಕ್ಕೆ ಮುತ್ತಿನ ಹಾರ ಎಂಬ ಅರ್ಥವೂ ಇದೆ. ಸಾರಾ ಅವರು ಕನ್ನಡಿಗರಿಗೆ ನೀಡಿರುವ ಈ ಮುತ್ತಿನ ಹಾರದ ಪ್ರತಿಯೊಂದು ಮುತ್ತಿನಲ್ಲೂ ಶೋಷಣೆ, ತಲಾಖ್, ಕುರುಡು ಕಾನೂನು, ಮೂಢನಂಬಿಕೆ, ಅನಕ್ಷರತೆಗಳಿಂದ ಅಸಹಾಯಕರಾಗಿರುವ ಪರಿತ್ಯಕ್ತೆ ಯಾರಾಗಿರುವ ಸಾವಿರಾರು ಮುಸ್ಲಿಂ ಮಹಿಳೆಯರ ಕಣ್ಣೀರಿನ ಹನಿಗಳಿವೆ. ಸಾರಾ ಅಬೂಬಕ್ಕರ್ ಈ ಮಹಿಳೆಯರ ಬಾಳಿನ ಗೋಳಿನ ಕುರಿತು ಪ್ರೀತಿ ಹಾಗೂ ನಿರ್ಭೀತಿಯಿಂದ ಬರೆದಿದ್ದಾರೆ.

ಸಾರಾ ಅವರ 'ಲೇಖನದ ಗುಚ್ಛ' ವಾದದ ಕೇಂದ್ರ ಲಿಂಗಾಧಾರಿತ ಅಸಮಾನತೆ, ಮಹಿಳೆಯರ ಪರಿಸ್ಥಿತಿಯನ್ನು ಚಿತ್ರಿಸಲು ಅವರ ವೈಯಕ್ತಿಕ ಜೀವನದ ಮೇಲೆ ಬೆಳಕು ಚೆಲ್ಲುವ ಈ ಲೇಖಕಿ ಪುರುಷ ಪ್ರಧಾನ ಸಮುದಾಯದಲ್ಲಿ ಮಹಿಳೆಯರು ಚಪ್ಪಲಿಗಳಾಗಿದ್ದಾರೆ. ಎನ್ನುತ್ತಾರೆ. ಸಾರಾ ಅಬೂಬಕ್ಕರ್ ಅವರ ಈ ಲೇಖನ ಗುಚ್ಛದಿಂದ ಸಮಕಾಲೀನ ಭಾರತೀಯ ಮುಸ್ಲಿಂ ಇತರ ಧರ್ಮಕ್ಕೆ ಕೂಡಾ ಗಂಭೀರ ವಿಮರ್ಶ ಎಂದು ಪರಿಗಣಿಸಲಾಗಿದೆ"[3]

ಹಾಗೆಯೇ ಗಂಗಾ ಪಾದೇಕಲ್, ಮಾಲತಿಯವರು ಕೂಡಾ ಬ್ರಹ್ಮಣ ಸಮುದಾಯದವರು ಹೆಣ್ಣಿನ ನೋವು ಬ್ರಾಹ್ಮಣರ ಒಳ ಕುಟುಂಬದಲ್ಲಿ ನಡೆಯುವಂತಹ ಧೋರಣೆಯನ್ನು ಎತ್ತಿ ಹಿಡಿದಿದ್ದಾರೆ. ''ಇದರಿಂದ ಯಾವುದಕ್ಕೆ ಹೆದರದೆ ಬದುಕಿನಲ್ಲಿ ಬರಹಗಳ ಛಲದಿಂದ ಮುಂದೆ ಬಂದಂತಹ ಸನ್ನಿವೇಷವನ್ನು ಅವರ

ಕಥೆಗಳಲ್ಲಿ ಓದಿ ತಿಳಿಯಬಹುದು ಇದರ ಮೂಲಕ ಅವರು ತಮಗೆ ನೀಡಿದೆ ಆಶಯ ಎಂದು ಹೇಳಬಹುದು''[೪೫]

''ಪದ್ಮಶೆಣ್ಯೆಯವರು ವಾಣಿಜ್ಯ ಕ್ಷೇತ್ರದ ದುಡಿಮೆ ಇವರಿಗೆ ಆರ್ಥಿಕ ನೆಲೆಗಟ್ಟನ್ನು ಕಲ್ಪಿಸುವುದರೊಂದಿಗೆ ಸಮಾನ ಅಭಿರುಚಿಯನ್ನು ಸ್ನೇಹಿತರು ಸಂಪಾದಿಸಿಕೊಟ್ಟರು ಇವರು ಮಹಿಳೆಯರನ್ನು ಸಂಘಟಿಸುವುದು ಧರ್ಮ ಸಂಸ್ಕೃತಿಯ ಪ್ರಚಾರದ ಕಾರ್ಯಕ್ರಮದಲ್ಲಿ ತೊಡಗಿದರು. ಸಾಹಿತ್ಯದಲ್ಲಿ ಮೂಡಿದ ಒಳವಿನಿಂದ ಪ್ರೇರಣೆ ಪಡೆದು ಕಥೆಗಳನ್ನು ಬರೆಯಲು ಆರಂಭಿಸಿದರು ಅವರ ಸಾಹಿತ್ಯವನ್ನು ನೋಡಿದಾಗ ಎರಡು ಬಹುಮುಖ್ಯ ಅಂಶಗಳು ತಮ್ಮ ಗಮನಕ್ಕೆ ಸೆಳೆಯುತ್ತದೆ. ಅವುಗಳಲ್ಲಿ ಒಂದು ಆಯಾಕಾಲಘಟ್ಟದ ಸಾಮಾಜಿಕ ಹಾಗೂ ಸಾಹಿತಿಕ ವಿಚಾರಗಳಿಗೆ ಆದ್ಯತೆ ನೀಡಿ ಅವರು ವಸ್ತುವನ್ನು ಆಯ್ಕೆ ಮಾಡಿರುವುದು.''[೬]

ಸಾಮಾಜಿಕ ಜವಬ್ದಾರಿಯನ್ನು ವಸ್ತುವನ್ನು ನಿರ್ವಹಿಸಿರುವುದು ಇದರಿಂದಾಗಿ ಇಲ್ಲಿ ಭಿನ್ನವಾಗಿ ವಿಶ್ಲೇಷವಾಗಿದೆ.

ಸಬಿಹಾ ಅವರು ಸಾಹಿತ್ಯಸಾಧನೆ ವೈವಿಧ್ಯಮಯ ಕ್ಷೇತ್ರಗಳನ್ನು ಒಳಗೊಂಡು ವಿಸ್ತೃತ ಅಯಾಮವನ್ನು ಪಡೆದುಕೊಂಡರು. ಸಾಹಿತ್ಯವಿಮರ್ಶೆ, ಸ್ತ್ರೀವಾದಿ ಚಿಂತಕಯರಲ್ಲಿ ಒಬ್ಬರನ್ನಾಗಿಯೂ ಅವರನ್ನು ಗುರುತಿಸಬಹುದು. ''ಕಡಲತಡಿಯ ಮನೆ ಕಥಾ ಸಂಕಲನದಲ್ಲಿ ಉತ್ತರ ಕರ್ನಾಟಕದ ಭಾಷಾ ಸೊಗಡನ್ನು ಸಮರ್ಥವಾಗಿ ಬಳಸಿರುವುದು ಕಥೆಯ ಮೌಲ್ಯವನ್ನು ಹೆಚ್ಚಿಸಿದೆ. ಹುಟ್ಟುದು ಉತ್ತರ ಕರ್ನಾಟಕದಲ್ಲಿ ಅದರೂ ಬೆಳೆದದ್ದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ಪಡೆದು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರ‍್ಯಾಂಕ್ ಪದವಿ ಪಡೆದಿದ್ದಾರೆ. ಅಲ್ಲದೇ ಕರಾವಳಿಯ ಸಣ್ಣಕತೆಗಳ ಮೇಲೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ೩೫ ವರ್ಷ ಬೋಧನೆಯಲ್ಲಿ ಹಾಗೂ ಸಂಶೋಧನಾ ಕಾರ್ಯದಲ್ಲಿ ಅನುಭವವನ್ನು ಪಡೆದಿದ್ದಾರ''.[೭]

ಟಿಪ್ಪಣಿಗಳು –೬

೧. ಸಾರಾರವರು ಗಗನಸಖಿ ಸಣ್ಣ ಕಥೆಗಳು – ಚಂದ್ರಗಿರಿ ಪ್ರಕಶನ ಮಂಗಳೂರು ಪುಟ–೫

೨. ಲೇಖನ ಗುಚ್ಛದಲ್ಲಿ ಧರ್ಮ ಮತ್ತು ಮಹಿಳೆ ಪುಟ–೫

೩. ಧರ್ಮ ಮತ್ತು ಮುಸ್ಲಿಂ ಮಹಿಳೆಯರ ಮೇಲಿನ ಪ್ರಭಾವ ಲಂಕೇಶ್ ಪತ್ರಿಕೆ .

೪. ಗಂಗಾ ಪಾದೇಕಲ್ಲು ರವರು ಪ್ರಕಟಗೊಂಡ ಚಂದ್ರಗಿರಿತೀರದಲ್ಲಿ ಪುಟ ೩೩೪–೩೪೫.

೫. ಮಾಲತಿ ರವರ ಪ್ರಕಟಗೊಂಡ ಚಂದ್ರಗಿರಿತೀರದಲ್ಲಿ ಪುಟ –೨೯೫–೨೯೭

೬. ಪದ್ಮಾರವರು ಪ್ರಕಟಗಳು ಚಂದ್ರಗಿರಿತೀರದಲ್ಲಿ ಪುಟ ೨೫೮–೨೫೯

೭. ಸಬೀಹಾ ರವರು ನಡುಮನೆ ಪುಟ – ೧೧೯–೧೨೫.

ಅಧ್ಯಾಯ – ೬

ಅಧ್ಯಯನದ ಫಲಿತಗಳು

ಅಧ್ಯಾಯ–೬

ಅಧ್ಯಯನ ಫಲಿತಗಳು

ಸಣ್ಣಕಥೆಯಲ್ಲಿ ತಿಳಿಸಲಾದ ಪ್ರತಿಯೊಂದು ವಿಷಯವು ಇತರರಿಗೆ ಜೀವನದಲ್ಲಿ ಸ್ಫೂರ್ತಿ ನೀಡುವಂಥಾಗಿರಬೇಕು. ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು ಹೇಗೆ ಎದುರಿಸಿದೆ. ಸಂಕಷ್ಟಗಳನ್ನು ಹೇಗೆ ಮೀರಿ ನಿಂತೆದಾಟಿ ಬಂದೆ, ಹೇಗೆ ಜೀವನ ಮುಖಿಯಾಗಿ ಬೆಳೆದೆ ಎಂಬ ಸಕಾರಾತ್ಮಕ ಭಾವನೆಯಿಂದ ಬರೆದು, ಅದು ಓದುಗರಲ್ಲೂ ಅವರವರ ನಕಾರಾತ್ಮಕ ಭಾವವನ್ನು ಕಳೆದು ಜೀವನ ಪ್ರೀತಿ ಹುಟ್ಟಿಸಿದರೆ ಅಂತಹ ಸಣ್ಣಕತೆಯು ಸಾರ್ಥಕತೆ ಕಾಣುತ್ತದೆ, ಮಹಿಳೆ ಮಹಿಳೆಯಾಗಿ ಎದುರಿಸುವ ಸಮಸ್ಯೆಗಳು, ಸಂಕಷ್ಟಗಳು ಅದನ್ನು ಮಹಿಳೆ ಎದುರಿಸಿದ ರೀತಿ, ದಾಟಿ ಬಂದ ಕ್ರಮ ಮುಖ್ಯವೆನಿಸುತ್ತದೆ. ಇಂದಿಗೂ ಸಹ ಎಷ್ಟೋ ಮಹಿಳೆಯರು ಕಷ್ಟದಲ್ಲಿ ಜೀವನವನ್ನು ನಡೆಸುತ್ತಾ. ತಮ್ಮ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ. ಅಂತಹವರಿಗೆ ಈ ಸಣ್ಣಕಥೆಗಳು ಮಾರ್ಗದರ್ಶಕವಾಗಿದ್ದು ಜೀವನದಲ್ಲಿ ಭರವಸೆಯನ್ನು ತುಂಬುವ ಕೃತಿಗಳಾಗಿವೆ.

ಈ ನಿಟ್ಟಿನಲ್ಲಿ ಸಾರಾ ಅಬೂಬಕ್ಕರ್, ಗಂಗಾಪಾದೆಕಲ್ಲು, ಎ.ಪಿ ಮಾಲತಿ, ಪದ್ಮಾ ಶೆಣೈ, ಡಾ ಸಬೀಹಾ ಭೂಮಿ ಗೌಡ ಅವರ ಸಣ್ಣಕಥೆಗಳು ಅವರ ಬದುಕಿನ ಒಳಗನ್ನು, ಹೊರಗನ್ನು ಮುಕ್ತವಾಗಿ ತೋರಿಸುತ್ತದೆ. ಮಹಿಳೆಯರ ಸಣ್ಣಕಥೆಗಳು ಹೆಚ್ಚಿರುವ ಸಂದರ್ಭದಲ್ಲಿ ಇವರ ಸಣ್ಣಕಥೆಗಳು ಮಹತ್ವದಾಯಕವಾಗಿದೆ.

ಲೇಖಕಿ ಸಬಿಹಾ "ಸಾರಾ ಅವರ ಕೃತಿಗಳಲ್ಲಿ ಪುರುಷ ಪ್ರಾಧಾನ್ಯ" ಎಂಬ ತಮ್ಮ ಲೇಖನದಲ್ಲಿ ಪಿತೃಪ್ರಧಾನ, ಕೌಟುಂಬಿಕ, ಧಾರ್ಮಿಕ ಹಾಗೂ ಜಮಾಅತ್ ಆಡಳಿತ ಮಂಡಳಿ ಹೀಗೆ ನಾಲ್ಕು ನೆಲೆಯಲ್ಲಿ ವಿಶ್ಲೇಷಿಸುದ್ದಾರೆ.

ಸಾರಾ ತಮ್ಮ ಬಹುತೇಕ ಕೃತಿಗಳಲ್ಲಿ ಮಧ್ಯಮ ವರ್ಗದ ಕೆಳಮಧ್ಯಮ ವರ್ಗದ, ಬಡ ಮುಸ್ಲಿಂ ಸಮುದಾಯಗಳ ಚಿತ್ರಣ ನೀಡಿದ್ದಾರೆ, ಬುರ್ಖಾ, ವರದಕ್ಷಿಣೆ, ತಲಾಖ್, ಬಹುಪತ್ನಿತ್ವ ಇವರನ್ನು ಸತತ ಕಾಡಿದ ವಿಚಾರಗಳು. ಇವರು ಸ್ತ್ರೀಪರ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ಕಂಡುಬಂದಿದೆ.

ಸಾರಾ ಅವರ ಕಥೆಗಳನ್ನು ಪ್ರಕಟಿಸಲು ಹಿಂದೇಟು ಹಾರುತ್ತಿದ್ದ ನಾಡಿನ ಹೆಸರಾಂತ ಪತ್ರಿಕೆಗಳು ಈ ಪ್ರಸಿದ್ಧಿಯ ನಂತರದ ದಿನಗಳಲ್ಲಿ ಇವರ ಕಥೆಗಳನ್ನು ತರಿಸಿಕೊಂಡು ಪ್ರಕಟಿಸಿದವು. ಇವುಹಿಂದೆ ಕಳುಗಿಸಿದಾಗ ಪ್ರಕಟತದ್ದೇ ಇದ್ದ ಅದೇ ಕಥೆಗಳು ಎಂದು ನೆನಪಿಸಿಕೊಂಡು ಸಾರಾ ನಗುತ್ತಾರೆ. ಪ್ರತಿಭವಂತ ಉದಯೋನ್ಮುಖ ಲೇಖಕಿಯರು ಹೇಗೆ ಅನುಮಥೆರಾಗಿ ಕಣ್ಮರೆಯಾಗುತ್ತಾರೆ. ಎಂಬುದಕ್ಕೆ ಸಾರಾ ಉದಾ.

ಕನ್ನಡ ಸಾಹಿತ್ಯದಲ್ಲಿ ಬಹುಕಾಲ ಉಳಿಯುವಂತಹ ಗಟ್ಟಿ ಸಾರಾರ ಬರಹಗಳು ಎಂಬುದು ಈ ಇತಿಹಾಸ, ಸಮಕಾಲಿನ ಸಮಸ್ಯಗಳೊಂದಿಗೆ ನಿರಂತರ ಸ್ಪಂದಿಸುವರಂತೆ ಸಾರಾ ನಿರಂತರ ಬರೆಯುತ್ತಾ ಬಂದವರು. ಇವರಿಗೆ ಸಂದ ಪ್ರಶಸ್ತಿಗಳು, ಪುರಸ್ಕಾರಗಳು. ನೂರಾರು ಪ್ರಶಸ್ತಿಗೆ ಒಗ್ಗದೆ, ತೆಗಳಿಕೆಗೆ ಕುಗ್ಗದೆ, ಸಮಚಿತ್ತದಿಂದ ದೂರದೃಷ್ಟಿಯಿಂದ ಸಮಯೋಚಿತ ಪ್ರಜ್ಞೆಯಿಂದ ಬರೆಯುತ್ತಾ ಬಂದಿರುವ ಸಾರಾ ನಮ್ಮ ನಡುವಿನ ಹಿರಿಯ ಲೇಖಕಿ ನಮಗೆಲ್ಲರಿಗೂ ಮಾದರಿಯಾಗಿದ್ದಾರೆ.

ಗಂಗಾ ಪಾದೇಕಲ್ಲು ಗ್ರಾಮೀಣ ಪ್ರದೇಶದ. ಕೃಷಿ, ಶಿಕ್ಷಣ, ಮದುವೆ ಕುಟುಂಬ, ವಿಘಟನೆ, ಕೌಟುಂಬಿಕ ಕಲಹ, ಸಾವು, ಸಾಮಾಜಿಕವಾಗಿರುವ ಶೋಷಣೆಯ ವಿವಿಧ ನೆಲೆಗಳು ಇವುಗಳನ್ನು ತೆಳ್ಳಗೆ ತೆರೆದಿಡುವ ಲೇಖಕಿ ಅವುಗಳಲ್ಲಿ ಹೆಣ್ಣಿನ ಸ್ಥಾನ ಹಾಗೂ ಕ್ರಿಯೆಗಳನ್ನು ಯಾವುದೇ ಮುಜುಗರವಿಲ್ಲದೆ ತೆರೆದಿಡುತ್ತಾ. ಸುಧಾರಣೆಯ ದಾರಿಯನ್ನು ಮುಕ್ತವಾಗಿಸುತ್ತಾರೆ. ಹೆಣ್ಣಿನ ಮೇಲೆ ನಡೆಯುವ ಶೋಷಣೆಯೊಂದಿಗೆ ಸಾಮಾಜಿಕ ವಾಗಿ ಸಾರ್ವತ್ರಿಕವಾಗಿರುವ ವಿಭಿನ್ನತೆಯನ್ನು ತೋರಿಸಿಕೊಟ್ಟಿದ್ದಾರೆ. ಅವರ ಬರಹಗಳು ಅವರಿಗೆ ಅಪಾರ ಜನಪ್ರಿಯತೆಯನ್ನು ಓದುಗರನ್ನು ಗಳಿಸಿಕೊಟ್ಟಿದೆ. ಪುಲಪೇಟೆ ಕತೆಯಾದಾರಿತ ರೇಡಿಯೋ ನಾಟಕಕ್ಕೆ ರೇಡಿಯೋ ನಾಟಕಕ್ಕೆ ರಾಷ್ಟ್ರೀಯ ನಾಟಕೋತ್ಸವದಲ್ಲಿ ಮೊದಲ ಬಹುಮಾನ ದೊರಕಿದೆ. ಹಾಗೆಯೇ ಹೊಸಹೆಜ್ಜೆ ಕಥಾಸಂಕಲನವು ಮಂಗಳೂರು ವಿಶ್ವವಿದ್ಯಾಲಯದ ಬಿ. ಕಾಂ ತರಗತಿಗೆ ಉಪ ಪಠ್ಯವಾಗಿತ್ತು. ಕಾಸರಗೋಡಿನ ಶೀಲಾಕುಮಾರಿ ಎಂಬುವರು ಗಂಗಾ ಅವರ ಕೃತಿಗಳ ಮೇಲೆ ಅಧ್ಯಯ ನಡೆಸಿ ಎಂ.ಫಿಲ್ 'ಪದವಿ ಪಡೆದಿದ್ದಾರೆ. ಮಂಜುನಾಥ ಎಂಬವರು ಕನ್ನಡ ತಮಿಳು ಕತೆಗಳ ಕಾಲನಿಕ ಅಧ್ಯಯನ ನಡೆಸುತ್ತಿದ್ದು. ಅವರ ಅಧ್ಯಯನದಲ್ಲಿ ಗಂಗಾ ಅವರ ಕತೆಗಳೂ ಸೇರಿವೆ.

ಪದ್ಮಾರವರು ಬದುಕು ನೀಡಿದ ಸವಾಲನ್ನು ಕೆಚ್ಚೆದೆಯಿಂದ ಎದುರಿಸಿದರು. 'ಹೆಣ್ಣು ಅಸಹಾಯಕಳಾದರೆ ಸಮಾಜ ಅವಳನ್ನು ಯಾವರೀತಿ ಶೋಷಿಸುತ್ತದೆ'. ಎಂಬ ಸತ್ಯವನ್ನು ಕಣ್ಣಾರೆ ನೋಡಿ ಅನುಭವಿಸಿದರು. ಪತಿಯ ವ್ಯಾಪಾರ ವಹಿವಾಟುಗಳನ್ನು ಏಕಾಂಗಿಯಾಗಿ ನಿರ್ವಹಿಸಿಸಬೇಕಾದ ಪ್ರಸಂಗಗಳಲ್ಲಿ ಅವರಿಗೆ ಆಸರೆಯಾಗಿ ಒದಗಿದ್ದು ಹೆತ್ತ ತಂದೆಯ ಪ್ರೋತ್ಸಾಹದ ನುಡಿಗಳು ಹಾಗೂ ಅಪ್ರವರ್ಗದ ಸಹಾಯ ಹಸ್ತಗಳು. ಓರ್ವ ಗೃಹಿಣಿಯಾಗಿ ಅವರು ಸಂತೃಪ್ತ ಬದುಕನ್ನು ನಡೆಸಿದ್ದಾರೆ. ಪತಿಯ ಸಹಕಾರ ಪ್ರೋತ್ಸಾಹಗಳಿಂದ ಓದು-ಬರಹ ಸಾಮಾಜಕ-ಸಾಹಿತ್ಯಕ ಚಟುವಟಿಕೆಗಳಲ್ಲಿ. ಸಂಪೂರ್ಣ ರೀತಿಯಲ್ಲಿ ತೊಡಗಿಸಿಕೊಂಡ ತೃಪ್ತಿ ಅವರಿಗಿದೆ ಸಾಹಿತ್ಯವನ್ನು ಸಾಧನೆಯಾಗಿ ತಾನು ಪಡೆಯಲಿಲ್ಲ. ಎಂದು ನಮ್ರವಾಗಿ ಒಪ್ಪಿಕೊಳ್ಳುವ ಈ ಲೇಖಕಿ ಸಾಹಿತ್ಯ ತಪಸ್ಸಾಗಬೇಕು. ಸಾಹಿತ್ಯ ಸರಸ್ವತಿ ಆರಾಧ್ಯ ದೈವವಾಗಬೇಕು. ಎನ್ನುವ ಕನಸು ಕಂಡವರು ಅವರ ಕನಸಿನ ಸ್ವರೂಪವನ್ನು ಅವರ ಕೃತಿ ಅವಲೋಕನದಿಂದ ತಿಳಿದುಕೊಳ್ಳಬಹುದಾಗಿದೆ.

ಮಾಲತಿಯವರು ವ್ಯಕ್ತಿಯ ಬುದ್ಧಿ, ಮನಸ್ಸು, ಮತ್ತು ಶರೀರಗಳಲ್ಲಿ ವ್ಯಾಪಿಸಿರುವ ಸಮಪೇಕ್ಷೆಯ. ಮೂಲವನ್ನು ಅವರ ವ್ಯಾಪಕತೆಯನ್ನು 'ಸುಖದ ಹಾದಿಯಲ್ಲಿ' ವಿವರಿಸಿದ್ದಾರೆ. ಅವರನ್ನು ಕಾಡುವ ಬಡತನ ನೋವು, ಕೀಳರಿಮೆಗಳನ್ನು ಗೆಲ್ಲುವ ಮಾರ್ಗವಾಗಿದೆ. ಹೆಣ್ಣಿನ ಒಳಿತಿನ ಕುರಿತು ಸಮಾಜ ಮತ್ತು ಸಮಾಜದ ಒಳಿತಿನಲ್ಲಿ ಹೆಣ್ಣು ಈ ಎಲ್ಲ ಒಳತಿನ ಕುರಿತು ಸಮಾಜ ಮತ್ತು ಸಮಾಜದ ಒಳಿತಿನಲ್ಲಿ ಹೆಣ್ಣು ಈ ಎಲ್ಲ

ಅಂಶಗಳನ್ನು ತಮ್ಮ ಕೃತಿಗಳಲ್ಲಿ ಗೋಚರಿಸಿದ. ಕಥೆಗಳಲ್ಲಿ , ಕಾದಂಬರಿ, ಲೇಖನ ಸಂಗ್ರಹಗಳ ಮೂಲಕ ಅವರು ಅಭಿವ್ಯಕ್ತಿಸುವ ಗ್ರಾಮೀಣ- ನಗರ ಜೀವನ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ, ಆರೋಗ್ಯ, ಶಿಶುಪಾಲನೆ, ವೈಚಾರಿಕತೆ, ಉಳಿತಾಯದ ಮಾರ್ಗಗಳಂತಹ ಬಹುಮುಖಿ ಆಸಕ್ತಿಗಳು ಮಾಲತಿಯವರ ಪ್ರಬುದ್ಧ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಸತ್ಯಭಾಮ ಪಿ. ಅವರು ಎ.ಪಿ.ಮಾಲತಿಯವರ ಕಾದಂಬರಿಗಳು 'ಒಂದು ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ೨೦೦೪ರಲ್ಲಿ ಎಂ ಫಿಲ್ ಪದವಿ ಪಡೆದಿದ್ದಾರೆ. ಇಷ್ಟೆಲ್ಲಾ ಸಾಹಿತ್ಯಿಕ ಸಾಧನೆಗಳ ಹೊರಲಾಗಿಯೂ, ಕನ್ನಡ ಸಾಹಿತ್ಯ ಸಾಹಿತ್ಯ ಸಾಗರದಲ್ಲಿ ತೇಲುತಿರುವ ನಾನು 'ಒಂದು ಸಣ್ಣ ಬಿಂದು' ಎನ್ನುವ ಮಾಲತಿಯನರ ವಿನಯವಂತಿಕೆ ಇಂದಿನ ಲೇಕಕಿಯರಿಗೆ ಮಾರ್ಗದರ್ಶಕವಾಗಲಿ ಅವರ ಸಾತ್ವಿಕ ಕೆಚ್ಚು. ಪ್ರಯತ್ನಶೀಲತೆ ಎಲ್ಲರಿಗೂ ಮಾದರಿಯಾಗಲಿ.

ಕನ್ನಡ ಮಹಿಳಾ ಸಂವೇದನೆಗೊಂದು ಗಟ್ಟಿನೆಲೆಯನ್ನು ಕಲ್ಪಿಸಿಕೊಡುವ ಸಬೀಹಾ ಭೂಮಿಗೌಡ ಅವರ ಸಾಹಿತ್ಯ ಸಮಕಾಲೀನ ಸಂದರ್ಭದ ಚಿಂತನೆಯ ಸೆಲೆಯೊಂದನ್ನು ಅಂತಸ್ಥಗೊಳಿಸಿಕೊಂಡಿದೆ.

ಒಟ್ಟಿನಲ್ಲಿ ನನ್ನ ಪ್ರಬಂಧದಲ್ಲಿ ಚರ್ಚಿಸಲಾಗಿರುವ ಈ ಸಣ್ಣಕಥೆಗಳಲ್ಲಿ ಸ್ತ್ರೀಪರವಾದ ನಿಲುವುಗಳಿಂದ ಕೂಡಿ ಜೀವಮುಖಿಯಾಗಿದೆ. ಮಹಿಳೆಯರ ನೋವು-ನಲಿವುಗಳಿವೆ. ಮಹಿಳೆಯರ ಕಷ್ಟ ಕಾರ್ಪಣ್ಯಗಳಿವೆ, ಸುಡು ವಾಸ್ತವಗಳಿವೆ. ಭಗ್ನ ಬದುಕಿನ ಚಿತ್ರಣಗಳಿವೆ, ಭಾಷೆ, ಶೈಲಿ , ಸರಳ ಸುಂದರವಾಗಿ ಮೂಡಿ ಬಣ್ದಿದೆ. ಗಂಭೀರವಾದ ಆಲೋಚನೆಗಳಿವೆ, ಒಂದು ತಲೆಮಾರಿನ ಜೀವನ ಸಾಂಸ್ಕೃತಿಕ ಚರೊತ್ರೆಯಿದೆ. ಮಹಿಳೆಯರ ಬದುಕಿನ ಈ ಸಣ್ಣಕತೆಗಳು ಇಂದಿಗೂ ಪ್ರಸ್ತುತ ಹಾಗೂ ದಾರಿದೀಪವಾಗಲಿ, ಮಧ್ಯಮವರ್ಗದ ಸ್ತ್ರೀ ಮನಸ್ಸಿನ ತಲ್ಲಣಗಳಿವೆ. ಮಡಿ ಸಂಸ್ಕೃತಿಯ ಒಳವಿವರಗಳೊಂದಿಗೆ ಒಂದು ಹೆಣ್ಣು ಹೇಗೆ ವೈಚಾರಿಕತೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಮೌಲ್ಯಗಳ ಹುಡುಕಾಟಕ್ಕೆ ಹವಣಿಸುವ ಮನಸ್ಸು ಈ ಸಣ್ಣಕಥೆಗಳಲ್ಲಿ ಗುರುತಿಸಬಹುದಾಗಿದೆ.

ಗ್ರಂಥ ಋಣ

೧. ಸಾರಾ ಅಬೂಬಕ್ಕರ್	–	ಚಪ್ಪಲಿಗಳು, ಪಯಣ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಖೆಡ್ಡಾ, ಸುಮಯ್ಯ, ಗಗನಖಿ.
೨. ಗಂಗಾ ಪಾದೇಕಲ್ಲು	–	ಪುಲಪೇಡಿ ಮತ್ತು ಇತರ ಕತೆಗಳು, ಹೆಜ್ಜೆ ಮೂಡದ ಹಾದಿಯಲ್ಲಿ, ಹೊಸಹೆಜ್ಜೆ, ವಾಸ್ತವ, ಕ್ಷಮಯಾಧರಿತ್ರಿ, ನೆಲೆತಪ್ಪಿದ ಹಕ್ಕಿ, ಮನ್ನಣೆಯಾದಾಹ, ಈ ಪ್ರಜಾರಾಜ್ಯದೊಳಗೆ, ಸಂಕ್ರಮಣ, ಚಿನ್ನದ ಸೂಜಿ.
೩. ಎ.ಪಿ.ಮಾಲತಿ	–	ಸಂಜೆ ಬಿಸಿಲು, ವಸಂತದ ಹೂವುಗಳು.
೪. ಪದ್ಮಾ ಶೆಣೈ	–	ನೂಲಿನಂತೆ ಸೀರೆ, ತಾತ್ವಿಕ ಕಥೆಗಳು.
೫. ಸಬೀಹಾ ಭೂಮಿಗೌಡ	–	ಚಂದ್ರಗಿರಿ, ಕರಾವಳಿಯ ಸಣ್ಣಕತೆಗಳು, ನಡುಮನೆ, ಕಡಲತಡಿಯ ಮನೆ.

ಅನುಬಂಧ -೧

ಪರಾಮರ್ಶನ ಗ್ರಂಥಗಳು

೧. ಜಿ.ಎಸ್.ಅಮೂರ(೨೦೦೩)ಕನ್ನಡ ಕಥನಸಾಹಿತ್ಯ ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು.

೨. ಆಧುನಿಕ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿಭಟನೆ ವಿನ್ಯಾಸಗಳು ೨೦೦೬, ಡಿ ಸುಮಂಗಳ, ಮೈಸೂರು ವಿಶ್ವವಿದ್ಯಾನಿಲಯ

೩. ಆರುಂಧತಿ ಎಫ್. ಬದಾಮಿ ೨೦೦೬ ಶಾಂತಿನಾಥ ದೇಸಾಯಿ ಕಥಾ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಗಳು., ಕರ್ನಾಟಕ ವಿ.ವಿ. ಧಾರವಾಡ .

೪. ಚಂದ್ರಗಿರಿ ೨೦೦೯ ಸಾರಾ ಅಬೂಬಕ್ಕರ್ ಅಭಿನಂದನ ಗ್ರಂಥ ಸಿರಿವರ ಪ್ರಕಾಶನ ಬೆಂಗಳೂರು ೨೧.

೫. ದೇವಿಕಾ ನಾಗೇಶ್, ಸಾರಾ ಅಬೂಬಕ್ಕರ್ ಅನನ್ಯ ಮಹಿಳಾ ಚೇತನ ಮಾಲಿಕೆ ಗೊಂಚಲು –೩ ಸಪ್ನ ಬುಕ್ ಹೌಸ್ ಗಾಂಧಿನಗರ ಬೆಂಗಳೂರು–೯

೬. ಗಿರಡ್ಡಿ ಗೋವಿಂದ ರಾವ್ಸಣ್ಣಕತೆಯ ಹೊಸಒಲವುಗಳು ಸಾಹಿತ್ಯ ಭಂಡಾರ –ಹುಬ್ಬಳ್ಳಿ ೧೯೭೮. ಬೆಂಗಳೂರು ಬುಕ್ಸ್ ಪ್ರೈ ಲಿಮಿಟೆಡ್–೧೯೯೯.ಕಲ್ಪಿತ ವಾಸ್ತವ ಕನ್ನಡ ಸಣ್ಣಕತೆ. ಸಾಹಿತ್ಯ ಪ್ರಕಶನ ಹುಬ್ಬಳ್ಳಿ–೨೦೦೬.

೭. ಡಾ। ಗೀತಾ ಶೆಣೈ, ಅಂಚಿತ, ಪ್ರಕಾಶಕರು ಕಾರ್ತಿಕ ಎಂಟರ್ ಪ್ರೈಸಸ್ ಬೆಂಗಳೂರು ೨೦೧೦.

೮. ಕೃಷ್ಣರಾವ್ ಕನ್ನಡ ಸಣ್ಣಕಥೆ ಹಾದಿ। ಉಗಮ ಅ.ನ.

೯. ಕತೆಯಾವಾಳು. ಹುಡುಗಿ, ಡಾ। ಗೀತಾ ಶೆಣೈ ಪ್ರಕಶರು ಕಾರ್ತಿಕ ಎಂಟರ್ ಪ್ರೈಸಸ್, ಬೆಂಗಳೂರು ೨೦೧೦

೧೦. ಎಲ್. ಜಿ. ಮೀರಾ(೨೦೦೪)ಸ್ತ್ರೀ ಸಂವೇದನೆಯಲ್ಲಿ, ಕನ್ನಡ ಕಥನ ಶಕ್ತಿ ಪ್ರಿಂಟರ್ಸ್, ಅಂಡ್ ಪಬ್ಲಿಷ್ರ್ಸ್ ಬೆಂಗಳೂರು.

೧೧. ಡಾ। ಮಮತಾರಾವ್ ಮುಂಬಯಿಕನ್ನಡ ಕಥಾ ಸಾಹಿತ್ಯ, ವಿದ್ಯಾನಗರ ಮುಂಬೈ–೨೦೧೧.

೧೨. ನಿಸಾರ್ ಅಹಮ್ಮದ್ ಸಣ್ಣಕತೆಗಳು (೧೯೭೪–೮೩). ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೮೭,

೧೩. ನಾಯಕ್ ಜಿ. ಎಚ್ ಕನ್ನಡ ಸಣ್ಣಕತೆಗಳು ಕೆ.ಎಸ್. ನ್ಯಾಷನಲ್ ಬುಕ್ ಟ್ರಸ್ ಇಂಡಿಯಾ ದೆಹಲಿ ೧೯೭೮.

೧೪. ಪ್ರಸಾದ ಸ್ವಾಮಿ ಎನ್‌ಕಥೆ– ಕಥನ ಧಾತ್ರಿ ಪುಸ್ತಕ ಬೆಂಗಳೂರು – ೨೦೦೭.

೧೫. ಡಾ. ಶೈಲಾ ಯು. ೨೦೧೨ ಪ್ರಾದೇಶಿಕತೆಯೂ ಕಲ್ಲು ಹೇಳುವ ಕಥೆಗಳು ಶ್ರೀ ಬೆನಕ ಫಜೀರು ಮಂಗಳಗಂಗೋತ್ರಿ.

೧೬. ಡಾ. ಎಸ್ ಪ್ರಸಾದ್ ಸ್ವಾಮಿ– ನವೋದಯ ಕಥೆಗಳು.

೧೭. ಸರಸ್ವತಿ (ಅನು) ೧೯೯೨) ಸ್ತ್ರೀ – ಪುರುಷ, ಇಳ ಪ್ರಕಶನ ಬೆಂಗಳೂರು ಸಾಹಿತ್ಯಕರ್ನಾಟಕ ಬೆಂಗಳೂರು ೧೯೮೬)
೧೮. ಕೆ.ಎಂ ವಿಜಯಲಕ್ಷ್ಮಿ ಕರ್ನಾಟಕ ಲೇಖಕಿಯರು.
೧೯. ವೀಣಾ ಶಾಂತೇಶ್ವರ ಸಣ್ಣಕತೆಗಳ ಸಂಕಲನ ಜನಪ್ರಿಯ ಪ್ರಕಶನ–ಬೆಂಗಳೂರು–೨೦೦೧.